ಅಧ್ಯಾಯ ೩

# ಜನತೆ

**ಒಂ**ದು ಪ್ರದೇಶದಲ್ಲಿ ವಾಸಿಸುತ್ತಿರುವ ವಿವಿಧ ಜನವರ್ಗಗಳ ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಕುರಿತ ಅಧ್ಯಯನಗಳು ಆಯಾ ವರ್ಗಗಳು ಹೊಂದಿರುವ ಪ್ರಾಚೀನ ಗುಣಧರ್ಮವನ್ನಷ್ಟೇ ಅಲ್ಲದೆ ಪ್ರಸ್ತುತ ಅವು ಆಧುನೀಕರಣದತ್ತ ಹೇಗೆ ಮುಖ ಮಾಡಿವೆ ಎಂಬುದರ ಸೂಚಿಯೂ ಆಗಿರುತ್ತದೆ. ಈ ದೃಷ್ಟಿಯಿಂದ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ನೀಡಲಾಗುವ ಜಿಲ್ಲೆಯ ಜನತೆಯನ್ನು ಕುರಿತ ಸಮೀಕ್ಷೆಯೂ ಅಧ್ಯಯನಾತ್ಮಕ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಧರ್ಮ, ಜಾತಿಗಳನ್ನು ಕುರಿತ ಸಂಕ್ಷಿಪ್ತ ಪರಿಚಯ, ಅಲ್ಲಿನ ಜನಸಂಖ್ಯಾ ವಿವರ, ಸ್ತ್ರೀ ಪುರುಷರ ಪ್ರಮಾಣ, ಭಾಷೆ, ವಲಸೆ ಪ್ರವೃತ್ತಿ, ವಿವಾಹ ಇತ್ಯಾದಿ ಜೀವನಾವರ್ತ ಸಂಸ್ಕಾರಗಳು, ಆಹಾರ ಪದ್ಧತಿ, ಹಬ್ಬ, ದೇವರು, ಜಾತ್ರೆ ಮೊದಲಾದ ಅಂಶಗಳನ್ನು ಕುರಿತು ಇಲ್ಲಿ ಸಮೀಕ್ಷಿಸಲಾಗಿದೆ.

ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಒಂದಾದ ದಕ್ಷಿಣ ಕನ್ನಡ ಜಿಲ್ಲೆಯು ವಿಶಿಷ್ಟವಾದ ಪ್ರಾಕೃತಿಕ ಲಕ್ಷಣ ಹಾಗೂ ಹವಾಗುಣವನ್ನು ಒಳಗೊಂಡದ್ದಾಗಿದೆ. ಕ್ರಿಸ್ತಶಕಾದಿಯಿಂದಲೂ ಈ ಪ್ರದೇಶಕ್ಕೆ ಗ್ರೀಕರು ಬಳಿಕ ಅರಬರು, ಪೋರ್ಚುಗೀಸರು, ಡಚ್ಚರು, ಆಂಗ್ಲರು ಮೊದಲಾದ ವಿದೇಶೀಯರ ಸಂಪರ್ಕವಾದದ್ದರಿಂದ ಇಲ್ಲಿನವರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಬದುಕು ರಾಜ್ಯದ ಇತರ ಭಾಗಕ್ಕಿಂತ ಸಾಕಷ್ಟು ಭಿನ್ನವಾಗಿ ರೂಪುಗೊಳ್ಳಲು ಕಾರಣವಾಗಿದೆ. ಇಷ್ಟಲ್ಲದೆ, ರಾಜಕೀಯವಾಗಿಯೂ ಈ ಪ್ರಾಂತ್ಯವು ಬೇರೆ ಬೇರೆ ರಾಜರು, ಸ್ಥಳೀಯ ಸಾಮಂತರು ಮೊದಲಾದವರ ಆಡಳಿತಕ್ಕೆ ಒಳಗಾದ ಪರಿಣಾಮವಾಗಿ, ಆಯಾ ಸಂದರ್ಭಗಳಲ್ಲಿ ಇತರ ಭಾಗಗಳಿಂದ ವಿವಿಧ ಜಾತಿ ಸಮುದಾಯಗಳು ಇಲ್ಲಿಗೆ ವಲಸೆ ಬಂದು ನೆಲೆ ನಿಂತದ್ದರಿಂದಲೂ, ಆ ಮೊದಲು ಸ್ಥಳೀಯವಾಗಿಯೇ ಇಲ್ಲಿ ಇದ್ದವರ ಜೀವನ ಕ್ರಮಗಳಿಂದಾಗಿಯೂ ಒಟ್ಟಾರೆ ಇಲ್ಲಿನ ಜನಜೀವನವು ವಿಶಿಷ್ಟವಾಗಿ ರೂಪುಗೊಂಡಿರುವುದು ಮೇಲ್ನೋಟಕ್ಕೇ ನಮ್ಮ ಗಮನಕ್ಕೆ ಬರುತ್ತದೆ.

ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳುವು ಇಲ್ಲಿನ ಮೂಲನಿವಾಸಿಗಳ ಭಾಷೆ ಆದುದರಿಂದ, ಪ್ರಸ್ತುತ ಆಡಳಿತಾತ್ಮಕವಾಗಿ ಈ ಪ್ರದೇಶವನ್ನು ದಕ್ಷಿಣ ಕನ್ನಡ ಜಿಲ್ಲೆ ಎಂದು ಹೆಸರಿಸಿದರೂ, ಸಾಂಸ್ಕೃತಿಕವಾಗಿ ಅದನ್ನು ತುಳುನಾಡು ಎಂದೇ ಹಿಂದಿನಿಂದಲೂ ಗುರುತಿಸಲಾಗುತ್ತಿದೆ. ಪಶ್ಚಿಮಘಟ್ಟ ಶ್ರೇಣಿಯು ಈ ಭಾಗವನ್ನು ರಾಜ್ಯದ ಇತರ ಪ್ರಧಾನ ಭಾಗದಿಂದ ಪ್ರತ್ಯೇಕೀಕರಿಸಿದೆ. ಅಂತೆಯೇ, ವ್ಯಾವಹಾರಿಕವಾಗಿ ಇಲ್ಲಿನ ಜನರು ತಮ್ಮನ್ನು ಘಟ್ಟದ ಕೆಳಗಿನವರೆಂದೂ ಅದರ ಆಚೆಯವರನ್ನು ಘಟ್ಟದ ಮೇಲಿನವರೆಂದೂ ಗುರುತಿಸಿಕೊಳ್ಳುವ ರೂಢಿಯಿದೆ. ಆಡಳಿತ ಕಾರಣಕ್ಕಾಗಿ ಉಡುಪಿ ಪರಿಸರವನ್ನು ಮಂಗಳೂರು ಪರಿಸರದಿಂದ ವಿಭಾಗಿಸಿದ್ದರೂ, ಆಂತರಿಕವಾಗಿ ಈ ಪ್ರಾಂತ್ಯವು ಒಂದೇ ಬಗೆಯ ಸಾಮಾಜಿಕ, ಸಾಂಸ್ಕೃತಿಕ ಗುಣವಿಶೇಷಗಳನ್ನು ಒಳಗೊಂಡಿದೆ ಎಂಬುದನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೆಲವೊಂದು

ಜಾತಿ ಸಮುದಾಯಗಳು ಎರಡೂ ಜಿಲ್ಲೆಗಳಲ್ಲಿ ಸಮಾನವಾಗಿವೆ. ಅವರ ಆಚಾರ–ಸಂಪ್ರದಾಯಗಳು, ದೈವ–ಆರಾಧನೆಗಳು ಬಹುಮಟ್ಟಿಗೆ ಒಂದೇ ಬಗೆಯಾಗಿವೆ. ಆದಾಗ್ಯೂ ಈ ಜಿಲ್ಲಾ ಗ್ಯಾಸೆಟಿಯರ್‌ನ ಉದ್ದೇಶಕ್ಕನುಗುಣವಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮಾತ್ರ ಇಲ್ಲಿನ ಜನತೆಯ ಸಾಮಾಜಿಕ ಹಾಗೂ ಧಾರ್ಮಿಕ ಬದುಕಿನ ವಿವಿಧ ಮುಖಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯು ೨೦೦೧ರ ಜನಗಣತಿಯಂತೆ ಒಟ್ಟು ೧೮,೯೭,೭೩೦ ಆಗಿದ್ದು, ಇದರಲ್ಲಿ ಗ್ರಾಮೀಣ ಜನಸಂಖ್ಯೆಯು ೧೧,೬೮,೪೨೮ ಆಗಿದ್ದರೆ, ನಗರ ಜನಸಂಖ್ಯೆಯು ೭,೨೯,೩೦೨ ಆಗಿದೆ. ಅಂದರೆ, ನಗರ ಜನಸಂಖ್ಯೆಗಿಂತ (ಶೇ. ೩೮.೪) ಗ್ರಾಮೀಣ ಜನಸಂಖ್ಯೆಯು (ಶೇ. ೬೧.೬)೪,೩೯,೧೨೬ ರಷ್ಟು ಹೆಚ್ಚಾಗಿದ್ದುದು ಕಂಡುಬರುತ್ತದೆ. ಜಿಲ್ಲೆಯಲ್ಲಿ ಒಟ್ಟು ೩೫೪ ಜನವಸತಿ ಇರುವ ಗ್ರಾಮಗಳಿದ್ದು ಅವು ಐದು ತಾಲೂಕುಗಳಲ್ಲಿ ಹಂಚಿಕೆಯಾಗಿವೆ. ಜನವಸತಿ ಇರದ ಗ್ರಾಮಗಳು ಜಿಲ್ಲೆಯಲ್ಲಿ ಇಲ್ಲದ್ದು ಉಲ್ಲೇಖನೀಯವಾಗಿವೆ. ತಾಲೂಕುವಾರು ಹೋಲಿಸಿದಾಗ ಮಂಗಳೂರು ತಾಲೂಕಿನಲ್ಲಿ ಅತಿ ಹೆಚ್ಚು ಅಂದರೆ ೮೮ ಗ್ರಾಮಗಳಿದ್ದರೆ, ಸುಳ್ಯ ತಾಲೂಕಿನಲ್ಲಿ ಅತಿ ಕಡಿಮೆ ಅಂದರೆ ೪೦ ಗ್ರಾಮಗಳಿವೆ. ಹಾಗೆಯೇ, ತಾಲೂಕುವಾರು ಜನಸಂಖ್ಯೆಯನ್ನು ತುಲನಾತ್ಮಕವಾಗಿ ನೋಡಿದಾಗ ಮಂಗಳೂರು ತಾಲೂಕು ಅತಿ ಹೆಚ್ಚು ಜನಸಂಖ್ಯೆ (೮,೮೨,೮೫೬)ಹೊಂದಿ ಮೊದಲ ಸ್ಥಾನದಲ್ಲಿದ್ದರೆ, ೩,೬೧,೫೫೪ ಜನಸಂಖ್ಯೆಯ ಬಂಟ್ವಾಳ ತಾಲೂಕು ಎರಡನೆಯ ಸ್ಥಾನದಲ್ಲಿರುವುದು, ಸುಳ್ಯ ತಾಲೂಕು ಕೊನೆಯ ಸ್ಥಾನದಲ್ಲಿರುವುದೂ (೧,೪೦,೭೫೪) ವೇದ್ಯವಾಗುತ್ತದೆ. ಆದರೆ, ಗ್ರಾಮೀಣ ಜನಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಬಂಟ್ವಾಳ ತಾಲೂಕು ಮೊದಲ ಸ್ಥಾನದಲ್ಲಿದ್ದರೆ (೩,೦೬,೭೩೪) ಮಂಗಳೂರು ತಾಲೂಕು ಎರಡನೆಯ ಸ್ಥಾನಕ್ಕೆ (೨,೮೧,೭೭೭) ಇಳಿದಿರುವುದು ಕಂಡುಬರುತ್ತದೆ. ಇನ್ನು, ನಗರ ಪ್ರದೇಶದ ಜನಸಂಖ್ಯೆಯನ್ನು ಪರಿಶೀಲಿಸಿದರೆ ಮಂಗಳೂರು ತಾಲೂಕು ಸಹಜವಾಗಿಯೇ ಅತಿ ಹೆಚ್ಚು (೬,೦೧,೦೭೯) ಜನಸಂಖ್ಯೆ ಹೊಂದಿ ಮೊದಲ ಸ್ಥಾನದಲ್ಲಿದ್ದರೆ, ಬಂಟ್ವಾಳ ತಾಲೂಕು ಎರಡನೇ ಸ್ಥಾನ (೫೪,೮೨೦) ದಲ್ಲಿರುವುದು, ಬೆಳ್ತಂಗಡಿ ತಾಲೂಕು ತೀರಾ ಕೊನೆಯ ಸ್ಥಾನ (೭,೩೦೫)ದಲ್ಲಿರುವುದು ಕಂಡುಬರುತ್ತದೆ.

೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೯,೩೮,೪೩೪ ಜನ ಪುರುಷರೂ, ೯,೫೯,೨೯೬ ಜನ ಸ್ತ್ರೀಯರೂ ಇದ್ದರು. ತಾಲೂಕುವಾರು ಸಂಖ್ಯೆಯನ್ನು ಹೋಲಿಸಿದರೆ ಪುರುಷರ ಸಂಖ್ಯೆಯು ಮಂಗಳೂರು ತಾಲೂಕಿನಲ್ಲಿ ಅತಿ ಹೆಚ್ಚಾಗಿಯೂ (೪,೩೪,೭೦೨), ಸುಳ್ಯ ತಾಲೂಕಿನಲ್ಲಿ ಅತಿ ಕಡಿಮೆಯಾಗಿಯೂ (೭೦,೯೪೪) ಇದ್ದಿತು. ಸ್ತ್ರೀಯರ ಸಂಖ್ಯೆಯ ದೃಷ್ಟಿಯಿಂದ ಮಂಗಳೂರು (೪,೪೮,೧೫೪) ಹಾಗೂ ಸುಳ್ಯ (೬೯,೭೬೦) ತಾಲೂಕುಗಳು ಕ್ರಮವಾಗಿ ಮೊದಲ ಹಾಗೂ ಕೊನೆಯ ಸ್ಥಾನಗಳನ್ನು ಪಡೆದಿದ್ದವು. ವಿಶೇಷವೆಂದರೆ ಇಡೀ ಜಿಲ್ಲೆಯಲ್ಲಿಯೇ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಹೆಚ್ಚಾಗಿದೆ (ಸುಳ್ಯ ಹೊರತುಪಡಿಸಿ ಇತರ ಎಲ್ಲಾ ತಾಲೂಕುಗಳಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದೆ). ಹೆಚ್ಚಿನ ಮಾಹಿತಿಗೆ ಕೋಷ್ಟಕ ೩.೧ರಲ್ಲಿ ೨೦೦೧ರ ತಾಲೂಕುವಾರು ಜನಸಂಖ್ಯಾ ವಿವರವನ್ನು ನೀಡಲಾಗಿದೆ.

**ದಶವಾರ್ಷಿಕ ಜನಸಂಖ್ಯಾ ವ್ಯತ್ಯಾಸ**

ವಿವಿಧ ಕಾರಣಗಳಿಂದಾಗಿ ಯಾವುದೇ ಪ್ರದೇಶದ ಜನಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚು– ಕಡಿಮೆಯಾಗುವುದು ಸಾಮಾನ್ಯವಾದ ವಿದ್ಯಮಾನವಾಗಿದೆ. ತಲಾ ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿಯ ಅಂಕಿ ಅಂಶಗಳ ಆಧಾರದ ಮೇಲೆ ಆಯಾ ಹಂತಗಳಲ್ಲಿ ಆಗಿರುವ ವ್ಯತ್ಯಾಸವನ್ನು ಗುರುತಿಸಲಾಗುತ್ತದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕಾಲ ಕಾಲಕ್ಕೆ ಈ ಬಗೆಯ ವ್ಯತ್ಯಾಸಗಳಾಗಿರುತ್ತವೆ. ಪ್ರಸ್ತುತ, ಹೊಸದಾಗಿ ಪುನರ್‌ರಚಿತವಾದ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯವಾಗುವಂತೆ ಜನಗಣತಿ ಇಲಾಖೆಯು ನೀಡಿರುವ ಅಂಕಿಅಂಶಗಳನ್ನು ಗಮನಿಸಿದಾಗ ೧೯೯೧ರಿಂದ ೨೦೦೧ರ ಅವಧಿಯಲ್ಲಿ ಜಿಲ್ಲೆಯ ಜನಸಂಖ್ಯೆಯಲ್ಲಿ ಆದ ಬೆಳವಣಿಗೆಯ ಪ್ರಮಾಣವು ೧೪.೭ರಷ್ಟು ಆಗಿದ್ದಿತು. ಇದು ರಾಜ್ಯದ ಜನಸಂಖ್ಯೆಯ ದಶವಾರ್ಷಿಕ ವ್ಯತ್ಯಾಸಕ್ಕಿಂತ (೧೭.೫) ಕಡಿಮೆ ಆಗಿದ್ದಿತು. ಜಿಲ್ಲೆಯ ವಿವಿಧ ತಾಲೂಕುಗಳಿಗೆ ಹೋಲಿಸಿದರೆ ಮಂಗಳೂರು ತಾಲೂಕಿಗಿಂತಲೂ (೧೬.೨) ಬೆಳ್ತಂಗಡಿ ತಾಲೂಕಿನಲ್ಲಿ (೧೬.೬) ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯು ಹೆಚ್ಚಾಗಿದ್ದುದು ಗಮನಸೆಳೆಯುತ್ತದೆ. ಬಂಟ್ವಾಳ ತಾಲೂಕಿನಲ್ಲಿ ಅತಿ ಕಡಿಮೆ (೧೧.೯) ಪ್ರವೃತ್ತಿ ಕಂಡುಬಂದಿದೆ (ಹೆಚ್ಚಿನ ಮಾಹಿತಿಗೆ "ಆರ್ಥಿಕ ಪ್ರವೃತ್ತಿಗಳು "ಅಧ್ಯಾಯ ನೋಡಿರಿ).

**ಕೋಷ್ಟಕ ೩.೧ : ತಾಲೂಕುವಾರು ಜನಸಂಖ್ಯಾ ವಿವರ**

| ತಾಲೂಕು | | ಒಟ್ಟು | ಪುರುಷರು | ಮಹಿಳೆಯರು |
|---|---|---|---|---|
| ೧ | ೨ | ೩ | ೪ | ೫ |
| ದಕ್ಷಿಣ ಕನ್ನಡ ಜಿಲ್ಲೆ | ಒಟ್ಟು | ೧,೮೯೭,೭೩೦ | ೯೩೮,೪೩೪ | ೯೫೯,೨೯೬ |
| | ಗ್ರಾಮೀಣ | ೧,೧೬೮,೪೨೮ | ೫೭೪,೬೫೭ | ೫೯೩,೭೭೧ |
| | ನಗರ | ೭೨೯,೩೦೨ | ೩೬೩,೭೭೭ | ೩೬೫,೫೨೫ |
| ಮಂಗಳೂರು | ಒ | ೮೮೨,೮೫೬ | ೪೩೪,೭೦೨ | ೪೪೮,೧೫೪ |
| | ಗ್ರಾ | ೨೮೧,೭೭೭ | ೧೩೫,೪೭೦ | ೧೪೬,೩೦೭ |
| | ನ | ೬೦೧,೦೭೯ | ೨೯೯,೨೩೨ | ೩೦೧,೮೪೭ |
| ಬಂಟ್ವಾಳ | ಒ | ೩೬೧,೫೫೪ | ೧೭೮,೬೬೪ | ೧೮೨,೮೯೦ |
| | ಗ್ರಾ | ೩೦೬,೭೩೪ | ೧೫೧,೩೯೪ | ೧೫೫,೩೪೦ |
| | ನ | ೫೪,೮೨೦ | ೨೭,೨೭೦ | ೨೭,೫೫೦ |
| ಬೆಳ್ತಂಗಡಿ | ಒ | ೨೪೬,೪೯೪ | ೧೨೧,೨೮೮ | ೧೨೫,೨೦೬ |
| | ಗ್ರಾ | ೨೩೯,೧೮೯ | ೧೧೭,೬೪೧ | ೧೨೧,೫೪೮ |
| | ನ | ೭,೩೦೫ | ೩,೬೪೭ | ೩,೬೫೮ |
| ಪುತ್ತೂರು | ಒ | ೨೬೬,೦೭೨ | ೧೩೨,೭೮೬ | ೧೩೩,೨೮೬ |
| | ಗ್ರಾ | ೨೧೮,೦೦೨ | ೧೦೮,೫೨೭ | ೧೦೯,೪೭೫ |
| | ನ | ೪೮,೦೭೦ | ೨೪,೨೫೯ | ೨೩,೮೧೧ |
| ಸುಳ್ಯ | ಒ | ೧೪೦,೭೫೪ | ೭೦,೯೯೪ | ೬೯,೭೬೦ |
| | ಗ್ರಾ | ೧೨೨,೭೨೬ | ೬೧,೬೨೫ | ೬೧,೧೦೧ |
| | ನ | ೧೮,೦೨೮ | ೯,೩೬೯ | ೮,೬೫೯ |

## ಕುಟುಂಬಗಳು

ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬ ವಾಸವಾಗಿರುವ ಪೂರ್ಣ ಅಥವಾ ಭಾಗಶಃ ಕಟ್ಟಡವನ್ನು ಜನಗಣತಿಯಲ್ಲಿ 'ವಾಸದ ಮನೆ' ಎಂದು ಪರಿಗಣಿಸಲಾಗುತ್ತದೆ. ಹಾಗೆಯೇ, ಸಾಮಾನ್ಯವಾಗಿ ಒಟ್ಟಿಗೆ ವಾಸಿಸುವ ಮತ್ತು ಮುಖ್ಯವಾಗಿ ಒಂದೇ ಅಡುಗೆ ಮನೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ಊಟ ಮಾಡುವ ಸದಸ್ಯರ ಗುಂಪನ್ನು 'ಕುಟುಂಬ' ಎಂದು ಪರಿಗಣಿಸಲಾಗುತ್ತದೆ. ಇಂಥಾ 'ಕುಟುಂಬ'ದಲ್ಲಿ ಒಬ್ಬನೇ ವ್ಯಕ್ತಿ ಅಥವಾ ಒಬ್ಬನಿಗಿಂತ ಹೆಚ್ಚು ಜನ ಇರಬಹುದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೩,೬೨,೨೧೬ ಕುಟುಂಬಗಳಿದ್ದವು ಹಾಗೂ ನಗರಪ್ರದೇಶಕ್ಕಿಂತ (೧,೪೪,೮೨೮) ಗ್ರಾಮೀಣ ಪ್ರದೇಶ (೨,೧೭,೩೮೮) ದಲ್ಲಿ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದಿತು. ತಾಲೂಕುವಾರು ಹೋಲಿಸಿದಾಗ ಮಂಗಳೂರು ತಾಲೂಕಿನಲ್ಲಿ ಅತಿ ಹೆಚ್ಚು (೧,೭೩,೮೦೪) ಕುಟುಂಬಗಳಿದ್ದು, ಅದು ಪ್ರಥಮ ಸ್ಥಾನದಲ್ಲಿದ್ದರೆ, ಸುಳ್ಯ ತಾಲೂಕಿನಲ್ಲಿ ಅತಿ ಕಡಿಮೆ (೨೮,೩೮೪) ವಾಸದ ಕುಟುಂಬಗಳಿದ್ದು, ಅದು ಕೊನೆಯ ಸ್ಥಾನದಲ್ಲಿದೆ. ಇವುಗಳ ನಡುವೆ ಕ್ರಮವಾಗಿ ಬಂಟ್ವಾಳ (೬೩,೫೧೦), ಪುತ್ತೂರು (೫೦,೧೧೧) ಹಾಗೂ ಬೆಳ್ತಂಗಡಿ (೪೬,೪೦೭) ತಾಲೂಕುಗಳು ಬರುತ್ತವೆ. ಕೋಷ್ಟಕ ೩.೨ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಕುಟುಂಬಗಳ ಅಂಕಿ–ಅಂಶಗಳನ್ನು ನೀಡಲಾಗಿದೆ:

**ಕೋಷ್ಟಕ ೩.೨ : ಕುಟುಂಬಗಳು**

| ತಾಲೂಕು | ಗ್ರಾಮ | ನಗರ | ಒಟ್ಟು |
|---|---|---|---|
| ಜಿಲ್ಲೆಯ ಒಟ್ಟು | ೨,೧೭,೩೮೮ | ೧,೪೪,೮೨೮ | ೩,೬೨,೨೧೬ |
| ಮಂಗಳೂರು | ೫೩,೧೯೧ | ೧,೨೦,೬೧೩ | ೧,೭೩,೮೦೪ |
| ಬಂಟ್ವಾಳ | ೫೪,೦೪೩ | ೯,೪೬೭ | ೬೩,೫೧೦ |
| ಬೆಳ್ತಂಗಡಿ | ೪೪,೮೨೮ | ೧,೫೭೯ | ೪೬,೪೦೭ |
| ಪುತ್ತೂರು | ೪೦,೫೮೭ | ೯,೫೨೪ | ೫೦,೧೧೧ |
| ಸುಳ್ಯ | ೨೪,೭೩೯ | ೩,೬೪೫ | ೨೮,೩೮೪ |

**ಆಧಾರ** : **Census of India – 2001 Distric Population Book Let, D.K.**

## ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ

ವೈಯಕ್ತಿಕವಾಗಿ ಪರಸ್ಪರ ಸಂಬಂಧಿಕರಲ್ಲದಿದ್ದರೂ ಕಾರಣಾಂತರದಿಂದ ಕೆಲವು ಕಾಲ ಅಥವಾ ಖಾಯಂ ಆಗಿ ಒಂದು ಸಾಂಸ್ಥಿಕ ಕಟ್ಟಡದಲ್ಲಿ ವಾಸಿಸುತ್ತಿದ್ದು, ಒಂದೇ ಅಡುಗೆ ಮನೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ಊಟ ಮಾಡುವ ಜನರ ಸಮೂಹವನ್ನು ಸಾಂಸ್ಥಿಕ ಕುಟುಂಬ ಎಂದೂ, ಅದರಲ್ಲಿನ ಜನ ಸಂಖ್ಯೆಯನ್ನು ಸಾಂಸ್ಥಿಕ ಜನಸಂಖ್ಯೆ ಎಂದೂ ಜನಗಣತಿಯಲ್ಲಿ ಪರಿಗಣಿಸಲಾಗುತ್ತದೆ. ವಿದ್ಯಾರ್ಥಿ ನಿಲಯ, ವಸತಿಗೃಹ, ಆಶ್ರಮ, ಸೆರೆಮನೆ, ಹೋಟೆಲು, ಮಠ, ವೃದ್ಧಾಶ್ರಮ ಮೊದಲಾದವು ಸಾಂಸ್ಥಿಕ ಕುಟುಂಬಗಳಾಗಿವೆ. ೨೦೦೧ರ ಜನಗಣತಿಯಂತೆ ದಕ್ಷಿಣಕನ್ನಡ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ೩೭೯ ಹಾಗೂ ನಗರ ಭಾಗದಲ್ಲಿ ೮೩೯ (ಒಟ್ಟು ೧೨೧೮) ಸಾಂಸ್ಥಿಕ ಕುಟುಂಬಗಳಿದ್ದವು. ಇವುಗಳಲ್ಲಿ ೩೪,೨೯೦ ಜನ ವಾಸವಿದ್ದು ಅವರಲ್ಲಿ ಪುರುಷರು (೧೮,೩೫೧) ಸ್ತ್ರೀಯರಿಗಿಂತ (೧೫,೯೩೯) ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹಾಗೂ, ಗ್ರಾಮೀಣ ಭಾಗಕ್ಕಿಂತ (೮,೯೨೧) ನಗರಪ್ರದೇಶದಲ್ಲಿನ (೨೫,೩೬೯) ಸಾಂಸ್ಥಿಕ ಜನಸಂಖ್ಯೆ ಹೆಚ್ಚಾಗಿದ್ದಿತು. ಬಹುಶಃ ಉದ್ಯೋಗ, ಶಿಕ್ಷಣ ಇತ್ಯಾದಿಗಳಿಂದಾಗಿ ನಗರಗಳ ವಸತಿನಿಲಯಗಳನ್ನು ಹೆಚ್ಚು ಮಹಿಳೆಯರು ಆಶ್ರಯಿಸಿದ್ದಿರಬಹುದು. ಸಾಂಸ್ಥಿಕ ಕುಟುಂಬಗಳಲ್ಲಿನ ಅಕ್ಷರಸ್ಥರ ಅಂಕಿಅಂಶಗಳನ್ನು ಪರಿಶೀಲಿಸಿದಾಗ ನಗರಪ್ರದೇಶದಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಹೆಚ್ಚಾಗಿರುವುದನ್ನೂ ಈ ದೃಷ್ಟಿಯಿಂದ ಉಲ್ಲೇಖೀಸಬಹುದು. ಪರಿಶಿಷ್ಟ ಜಾತಿ ಹಾಗೂ ಪಂಗಡದವರು ನಗರಕ್ಕಿಂತ ಗ್ರಾಮೀಣ ಪ್ರದೇಶದ ಸಾಂಸ್ಥಿಕ ಕುಟುಂಬಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗೆಯೇ, ಈ ವರ್ಗಗಳ ಸ್ತ್ರೀಯರಿಗಿಂತ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ಸಾಂಸ್ಥಿಕ ಕುಟುಂಬಗಳನ್ನು ಆಶ್ರಯಿಸಿರುವುದೂ ಗಮನಾರ್ಹವೆನಿಸಿದೆ. ಹೆಚ್ಚಿನ ಪರಿಶೀಲನೆಗಾಗಿ ಮುಂದಿನ ಕೋಷ್ಟಕ ೩.೩ರಲ್ಲಿ ಜಿಲ್ಲೆಯ ಸಾಂಸ್ಥಿಕ ಜನಸಂಖ್ಯೆಯ ಕೆಲವು ಅಂಶಗಳನ್ನು ನೀಡಲಾಗಿದೆ:

**ಕೋಷ್ಟಕ ೩.೩ : ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ**

| ಘಟಕ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| ಸಾಂಸ್ಥಿಕ ಕುಟುಂಬಗಳು | | ೧೨೧೮ | ೩೭೯ | ೮೩೯ |
| ಸಾಂಸ್ಥಿಕ ಜನಸಂಖ್ಯೆ | ಒಟ್ಟು | ೩೪,೨೯೦ | ೮,೯೨೧ | ೨೫,೩೬೯ |
| | ಪುರುಷರು | ೧೮,೩೫೧ | ೫,೮೭೭ | ೧೨,೪೭೪ |
| | ಸ್ತ್ರೀಯರು | ೧೫,೯೩೯ | ೩,೦೪೪ | ೧೨,೮೯೫ |
| ೦–೬ ವಯೋಗುಂಪು | ಒಟ್ಟು | ೭೩೫ | ೨೭೦ | ೪೬೫ |
| | ಪುರುಷರು | ೩೮೦ | ೧೩೬ | ೨೪೪ |
| | ಸ್ತ್ರೀಯರು | ೩೫೫ | ೧೩೪ | ೨೨೧ |
| ಪರಿಶಿಷ್ಟ ಜಾತಿ | ಒಟ್ಟು | ೧,೫೦೬ | ೪೭೫ | ೧,೦೩೧ |
| | ಪುರುಷರು | ೯೦೫ | ೩೦೭ | ೫೯೮ |
| | ಸ್ತ್ರೀಯರು | ೬೦೧ | ೧೬೮ | ೪೩೩ |

ಮುಂದುವರೆದಿದೆ....

| | | | | |
|---|---|---|---|---|
| ಪರಿಶಿಷ್ಟ ಪಂಗಡ | ಒಟ್ಟು | ೧,೦೭೭ | ೫೫೧ | ೫೨೬ |
| | ಪುರುಷರು | ೬೨೦ | ೩೨೫ | ೨೯೫ |
| | ಸ್ತ್ರೀಯರು | ೪೫೭ | ೨೨೬ | ೨೩೧ |
| ಅಕ್ಷರಸ್ಥರು | ಒಟ್ಟು | ೩೧,೭೨೮ | ೮,೦೩೬ | ೨೩,೬೯೨ |
| | ಪುರುಷರು | ೧೭,೦೬೯ | ೫,೪೩೯ | ೧೧,೬೩೦ |
| | ಸ್ತ್ರೀಯರು | ೧೪,೬೫೯ | ೨,೫೯೭ | ೧೨,೦೬೨ |

**ಆಧಾರ : Primary Census Abstract, 2001 P-209**

## ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ

ಖಾಯಂ ಆಗಿ ವಾಸಿಸಲು ತಮ್ಮದೇ ಆದ ನಿವಾಸ ಇರದೆ, ಅಲೆಮಾರಿ ಜೀವನ ನಡೆಸುವ ಭಿಕ್ಷುಕರು ಮೊದಲಾದವರ ಕುಟುಂಬಗಳನ್ನು ನಿರ್ವಸಿತ ಕುಟುಂಬಗಳೆಂದು ಜನಗಣತಿಯಲ್ಲಿ ಗುರುತಿಸಲಾಗಿದೆ. ಇಂಥಾ ವ್ಯಕ್ತಿಗಳು ಸಾಮಾನ್ಯವಾಗಿ ಪಾಳುಮಂಟಪ, ಮೇಲು ಸೇತುವೆಗಳ ಕೆಳಭಾಗ, ದೊಡ್ಡ ಕೊಳವೆ, ಬಯಲು ಸ್ಥಳ, ಬಸ್/ರೈಲು ನಿಲ್ದಾಣ ಮೊದಲಾದ ಸ್ಥಳಗಳಲ್ಲಿ ಆಶ್ರಯ ಪಡೆಯುತ್ತಾರೆ. ೨೦೦೧ರ ಜನಗಣತಿಯಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಟ್ಟು ೧,೨೪೩ ನಿರ್ವಸಿತ ಕುಟುಂಬಗಳಿದ್ದು, ಇವುಗಳಲ್ಲಿ ೩೮೩ ಗ್ರಾಮಾಂತರ ಪ್ರದೇಶದಲ್ಲಿಯೂ, ೮೬೦ ನಗರ ಪ್ರದೇಶದಲ್ಲಿಯೂ ಗಣತಿಯಾಗಿವೆ. ಈ ನಿರ್ವಸಿತ ಕುಟುಂಬಗಳಲ್ಲಿನ ಒಟ್ಟು ಜನಸಂಖ್ಯೆ ೪,೩೬೫ ಆಗಿದ್ದು, ಅದರಲ್ಲಿ ಪುರುಷರು (೨,೮೮೭) ಸ್ತ್ರೀಯರಿಗಿಂತ (೧,೪೭೮) ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದುದು ಹಾಗೂ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅವರ ಸಂಖ್ಯೆ ಕಡಿಮೆ ಇದ್ದುದೂ ಕಂಡುಬಂದಿದೆ. ೦–೬ ವಯೋಗುಂಪಿನ ಮಕ್ಕಳ ಸಂಖ್ಯೆಯಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದೆ. ಆದರೆ ಪರಿಶಿಷ್ಟ ಜಾತಿಯವರಲ್ಲಿ ಗ್ರಾಮೀಣ ಪ್ರದೇಶದಲ್ಲೇ ನಿರ್ವಸಿತರ ಸಂಖ್ಯೆ ಹೆಚ್ಚಾಗಿದೆ. ನಿರ್ವಸಿತ ಕುಟುಂಬಗಳ ವಿವಿಧ ಅಂಕಿಅಂಶಗಳನ್ನು ಮುಂದಿನ ಕೋಷ್ಟಕ ೩.೪ರಲ್ಲಿ ನೋಡಬಹುದು:

**ಕೋಷ್ಟಕ ೩.೪ : ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ**

| ಘಟಕ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| ಒಟ್ಟು ನಿರ್ವಸಿತ ಕುಟುಂಬಗಳು | | ೧,೨೪೩ | ೩೮೩ | ೮೬೦ |
| ನಿರ್ವಸಿತ ಜನಸಂಖ್ಯೆ | ಒಟ್ಟು | ೪,೩೬೫ | ೧,೫೧೩ | ೨,೮೫೨ |
| | ಪುರುಷರು | ೨,೮೮೭ | ೯೩೧ | ೧,೯೫೬ |
| | ಸ್ತ್ರೀಯರು | ೧,೪೭೮ | ೫೮೨ | ೮೯೬ |
| ೦–೬ ವಯೋಗುಂಪು | ಒಟ್ಟು | ೫೯೨ | ೨೩೬ | ೩೫೬ |
| | ಪುರುಷರು | ೩೦೬ | ೧೧೭ | ೧೮೯ |
| | ಸ್ತ್ರೀಯರು | ೨೮೬ | ೧೧೯ | ೧೬೭ |
| ಪರಿಶಿಷ್ಟ ಜಾತಿ | ಒಟ್ಟು | ೪೪೬ | ೨೯೭ | ೧೪೯ |
| | ಪುರುಷರು | ೨೬೧ | ೧೬೮ | ೯೩ |
| | ಸ್ತ್ರೀಯರು | ೧೮೫ | ೧೨೯ | ೫೬ |
| ಪರಿಶಿಷ್ಟ ಪಂಗಡ | ಒಟ್ಟು | ೪೭೦ | ೨೫೭ | ೨೧೩ |
| | ಪುರುಷರು | ೨೯೯ | ೧೬೩ | ೧೩೬ |
| | ಸ್ತ್ರೀಯರು | ೧೭೧ | ೯೪ | ೭೭ |
| ಅಕ್ಷರಸ್ಥರು | ಒಟ್ಟು | ೧,೪೦೨ | ೪೦೬ | ೯೯೬ |
| | ಪುರುಷರು | ೧,೨೨೩ | ೩೩೪ | ೮೮೯ |
| | ಸ್ತ್ರೀಯರು | ೧೭೯ | ೭೨ | ೧೦೭ |

**ಆಧಾರ : Primary Census Abstract, 2001, P-225**

## ಕೋಷ್ಟಕ ೩.೫ : ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

| ವಯೋಗುಂಪು | ಒಟ್ಟು ಜನಸಂಖ್ಯೆ | | ಅವಿವಾಹಿತರು | | ವಿವಾಹಿತರು | | ವಿಧುರ | ವಿಧವೆ | ವಿಚ್ಛೇದಿತರು/ ಬೇರೆಯಾದವರು | |
|---|---|---|---|---|---|---|---|---|---|---|
| | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | | | ಗಂಡು | ಹೆಣ್ಣು |
| ಎಲ್ಲಾ ವಯಸ್ಸಿನವರು | ೧೮೯೭೭೩೦ | ೯೩೮೪೩೪ | ೫೪೯೯೮೨ | ೪೫೭೨೩೫ | ೩೭೬೧೭೩ | ೪೦೧೧೨೧ | ೧೦೯೨೫ | ೯೫೨೧೫ | ೧೩೫೪ | ೫೭೨೫ |
| ೦–೯ | ೩೩೪೩೭೪ | ೧೭೦೬೯೮ | ೧೭೦೬೯೮ | ೧೬೩೬೭೬ | ೦ | ೦ | ೦ | ೦ | ೦ | ೦ |
| ೧೦–೧೪ | ೧೯೬೮೯೨ | ೧೦೦೧೦೪ | ೯೯೭೩೦ | ೯೫೮೮೬ | ೩೧೦ | ೭೨೪ | ೩೨ | ೧೪೬ | ೩೨ | ೩೨ |
| ೧೫–೧೯ | ೨೦೮೭೩೫ | ೧೦೧೦೬೦ | ೧೦೦೨೨೮ | ೧೦೧೦೮೩ | ೭೮೬ | ೬೩೭೮ | ೨೧ | ೧೬೧ | ೨೫ | ೫೩ |
| ೨೦–೨೪ | ೧೯೭೮೪೨ | ೯೬೬೬೫ | ೮೯೪೪೦ | ೬೧೭೪೬ | ೭೧೪೩ | ೩೮೮೫೨ | ೩೦ | ೩೪೭ | ೫೨ | ೨೩೨ |
| ೨೫–೨೯ | ೧೬೯೦೯೩ | ೮೧೧೨೪ | ೫೩೮೬೦ | ೧೯೯೬೦ | ೨೭೦೭೦ | ೬೬೪೦೭ | ೧೧೨ | ೧೦೦೩ | ೮೨ | ೫೯೯ |
| ೩೦–೩೪ | ೧೩೯೪೦೦ | ೬೮೭೪೮ | ೨೦೯೩೫ | ೫೪೪೧ | ೪೭೪೧೫ | ೬೨೪೫೧ | ೨೫೮ | ೧೯೨೭ | ೧೪೦ | ೮೩೩ |
| ೩೫–೩೯ | ೧೩೯೪೫೦ | ೬೮೩೫೩ | ೬೮೧೫ | ೨೫೩೧ | ೬೧೦೧೧ | ೬೩೮೧೭ | ೩೪೫ | ೩೭೧೬ | ೧೮೨ | ೧೦೩೩ |
| ೪೦–೪೪ | ೧೧೧೧೪೦ | ೫೭೫೭೧ | ೨೩೭೫ | ೧೪೧೦ | ೫೪೬೩೪ | ೪೬೨೭೧ | ೪೦೯ | ೫೦೪೯ | ೧೫೩ | ೮೩೯ |
| ೪೫–೪೯ | ೧೦೪೧೦೧ | ೫೩೭೭೧ | ೧೪೩೫ | ೧೦೭೭ | ೫೧೫೭೬ | ೪೦೫೮೫ | ೬೦೬ | ೭೮೭೩ | ೧೫೪ | ೭೯೫ |
| ೫೦–೫೪ | ೭೮೬೯೬ | ೪೦೦೫೦ | ೯೪೮ | ೮೯೦ | ೩೮೨೧೬ | ೨೭೨೪೮ | ೭೪೬ | ೯೯೯೧ | ೧೪೩ | ೫೧೭ |
| ೫೫–೫೯ | ೫೮೭೩೮ | ೨೮೨೫೧ | ೬೦೯ | ೫೭೪ | ೨೬೭೪೫ | ೧೯೩೦೬ | ೮೦೬ | ೧೦೩೧೧ | ೯೧ | ೨೯೬ |
| ೬೦–೬೪ | ೫೨೬೧೭ | ೨೪೫೦೫ | ೫೬೫ | ೬೫೦ | ೨೨೫೪೨ | ೧೩೩೨೭ | ೧೩೦೨ | ೧೩೯೨೩ | ೯೬ | ೨೧೨ |
| ೬೫–೬೯ | ೪೨೩೩೭ | ೧೯೦೯೦ | ೪೫೩ | ೫೪೭ | ೧೭೦೮೦ | ೮೭೯೪ | ೧೪೭೮ | ೧೩೭೬೯ | ೭೯ | ೧೩೭ |
| ೭೦–೭೪ | ೩೦೦೦೦ | ೧೩೪೭೫ | ೫೦೩ | ೪೯೩ | ೧೧೨೬೮ | ೩೮೧೩ | ೧೬೪೨ | ೧೨೧೪೪ | ೬೨ | ೭೫ |
| ೭೫–೭೯ | ೧೬೪೮೨ | ೭೩೭೩ | ೩೨೩ | ೩೩೫ | ೫೭೪೭ | ೧೭೨೩ | ೧೨೬೬ | ೭೦೧೦ | ೩೭ | ೪೧ |
| ೮೦+ | ೧೫೫೮೬ | ೬೪೦೯ | ೨೫೪ | ೩೮೩ | ೪೨೭೬ | ೧೦೩೨ | ೧೮೫೫ | ೭೭೩೪ | ೨೪ | ೨೮ |
| ವಯಸ್ಸು ತಿಳಿಸದವರು | ೨೨೪೭ | ೧೧೮೭ | ೮೧೪ | ೫೫೩ | ೩೫೪ | ೩೯೩ | ೧೭ | ೧೧೧ | ೨ | ೩ |
| ೧೮ಕ್ಕಿಂತ ಕಡಿಮೆ | ೬೪೯೨೪೩ | ೩೨೮೭೬೩ | ೩೨೭೯೭೬ | ೩೧೭೯೨೯ | ೯೯೬ | ೨೨೪೮ | ೪೭ | ೨೪೯ | ೪೪ | ೫೪ |
| ೨೧ಕ್ಕಿಂತ ಕಡಿಮೆ | ೭೯೩೩೮೯ | ೪೯೭೧೨೪ | ೪೯೪೯೫೮ | ೩೮೧೩೨೯ | ೨೦೩೧ | ೧೪೪೨೧ | ೬೦ | ೩೮೩ | ೭೫ | ೧೩೨ |

ಆಧಾರ : **Census of India – 2001 (C.D. version) C-2 Marital Status by Age and Sex.**

## ವಯೋಗುಂಪು ಮತ್ತು ವೈವಾಹಿಕ ಸ್ಥಿತಿ

ಜನಗಣತಿಯು ವ್ಯಕ್ತಿಗಳನ್ನು ಅವರ ವೈವಾಹಿಕ ಸ್ಥಿತಿಯ ಆಧಾರದ ಮೇಲೆಯೂ ವರ್ಗೀಕರಿಸಿ ಅಂಕಿಅಂಶಗಳನ್ನು ನೀಡುತ್ತದೆ. ಈ ಸಂಖ್ಯೆಗಳಿಂದ ಆಯಾ ಪ್ರದೇಶದಲ್ಲಿ ಇನ್ನೂ ಬಾಲ್ಯ ವಿವಾಹ ಪದ್ಧತಿ ಇದೆಯೇ? ಬಾಲ್ಯ ವಿಧವೆಯರಿದ್ದಾರೆಯೇ? ಮೊದಲಾದ ಅಂಶಗಳನ್ನು ಕುರಿತು ವಿಶ್ಲೇಷಿಸಬಹುದು. ೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಒಟ್ಟು ವಿವಾಹಿತರ ಸಂಖ್ಯೆ ೭೭೨೯೪ ಆಗಿದ್ದು ಇವರಲ್ಲಿ ೧೦ ರಿಂದ ೧೪ ವರ್ಷದ ವಯೋಗುಂಪಿನೊಳಗಿನ ವಿವಾಹಿತರ ಸಂಖ್ಯೆಯು ೧೦೩೪ ಆಗಿದ್ದಿತು. ಅದೇ ವಯೋಗುಂಪಿನಲ್ಲಿನ ವಿಧವೆಯರ ಸಂಖ್ಯೆ ೧೪೬ ಆಗಿದ್ದರೆ, ವಿಚ್ಛೇದಿತರ ಸಂಖ್ಯೆ ೬೪ ಆಗಿದ್ದಿತು. ಇದೇ ವಯೋಗುಂಪಿನಲ್ಲಿ ನಗರ ಪ್ರದೇಶಕ್ಕಿಂತ (೪೩೫) ಗ್ರಾಮಾಂತರ ಪ್ರದೇಶದಲ್ಲಿ ವಿವಾಹಿತರ ಸಂಖ್ಯೆ (೫೯) ಹೆಚ್ಚಾಗಿದ್ದುದೂ ದಾಖಲಾಗಿದೆ. ಹಾಗೆಯೇ, ಜಿಲ್ಲೆಯಲ್ಲಿ ೮೦ಕ್ಕಿಂತ ಹೆಚ್ಚು ವಯಸ್ಸಾಗಿದ್ದರೂ ಅವಿವಾಹಿತರಾಗಿ ಉಳಿದವರ ಸಂಖ್ಯೆ ೬೩೭ ಆಗಿದ್ದಿತು.

ಈ ವಯೋಗುಂಪಿನಲ್ಲಿ ವಿಧುರರಿಗಿಂತಲೂ (೧೮೫೫) ವಿಧವೆಯರ (೭೭೩೪) ಸಂಖ್ಯೆಯೇ ಅಧಿಕವಾಗಿದ್ದುದೂ ಕಂಡುಬಂದಿದೆ. ವಿವಿಧ ವಯೋಗುಂಪುಗಳಲ್ಲಿನ ವೈವಾಹಿಕ ಸ್ಥಿತಿ ಕುರಿತ ಹೆಚ್ಚಿನ ಅಂಕಿಅಂಶಗಳನ್ನು ೨೦೦೧ರ ಜನಗಣತಿಯಂತೆ ಮುಂದಿನ ಕೋಷ್ಟಕ ೩.೫ರಲ್ಲಿ ನೀಡಲಾಗಿದೆ: (ಪು.೧೨೮).

## ಜನಸಾಂದ್ರತೆ

ಜನಗಣತಿಯ ಲೆಕ್ಕಾಚಾರದಂತೆ ಒಂದು ಚ.ಕಿ.ಮೀ. ಪ್ರದೇಶದಲ್ಲಿ ದಾಖಲಾದ ಜನಸಂಖ್ಯೆಯ ಸರಾಸರಿಯನ್ನು ಅಲ್ಲಿನ 'ಜನಸಾಂದ್ರತೆ' ಎಂದು ಪರಿಗಣಿಸಲಾಗುತ್ತದೆ. ಈ ಜನಸಾಂದ್ರತೆಯ ಪ್ರಮಾಣವು ವಿವಿಧ ಕಾರಣಗಳಿಂದಾಗಿ ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವ ಸಂಭವವಿರುತ್ತದೆ. ಆದರೂ, ಸಾಮಾನ್ಯವಾಗಿ ಯಾವುದೇ ನಗರ ಪ್ರದೇಶದ ಜನಸಾಂದ್ರತೆಯು, ಗ್ರಾಮೀಣ ಪ್ರದೇಶದ ಜನಸಾಂದ್ರತೆಗಿಂತ ಹೆಚ್ಚಾಗಿರುವುದು ಸಹಜವಾಗಿರುತ್ತದೆ. ೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಜನಸಾಂದ್ರತೆಯು (೪೧೬) ರಾಜ್ಯದ ಜನಸಾಂದ್ರತೆಗಿಂತ (೨೭೬) ಹೆಚ್ಚಾಗಿದ್ದಿತು. ಜಿಲ್ಲೆಯ ತಾಲೂಕುಗಳಲ್ಲಿ ಮಂಗಳೂರು ತಾಲೂಕು ಅತಿ ಹೆಚ್ಚಿನ ಜನಸಾಂದ್ರತೆಯನ್ನು (೧೦೪೮), ಸುಳ್ಯ ತಾಲೂಕು ಅತಿ ಕಡಿಮೆ (೧೭೦) ಜನಸಾಂದ್ರತೆಯನ್ನು ಹೊಂದಿದೆ. ವಿಸ್ತೀರ್ಣದ ದೃಷ್ಟಿಯಿಂದ ಜಿಲ್ಲೆಯಲ್ಲಿಯೇ ಅತಿ ದೊಡ್ಡದಾದ (೧೩೭೫.೫೨ ಚ.ಕಿ.ಮೀ.) ಬೆಳ್ತಂಗಡಿ ತಾಲೂಕಿನಲ್ಲಿಯೂ ಬಹುಪಾಲು ಇದೇ ಪ್ರಮಾಣ (೧೭೯) ಇದ್ದಿತು. ಉಳಿದಂತೆ ಬಂಟ್ವಾಳ ಹಾಗೂ ಪುತ್ತೂರು ತಾಲೂಕುಗಳ ಜನಸಾಂದ್ರತೆಯು ಕ್ರಮವಾಗಿ ೪೯೨ ಹಾಗು ೨೬೭ ಆಗಿದೆ. ಜಿಲ್ಲಾ ಕೇಂದ್ರವಾದ ಮಂಗಳೂರು ನಗರದಿಂದಾಗಿಯೇ ಮಂಗಳೂರು ತಾಲೂಕಿನ ಜನಸಾಂದ್ರತೆಯು ಹೆಚ್ಚಾಗಿದೆ ಎಂದೂ, ಕಾಯ್ದಿಟ್ಟ ಅರಣ್ಯ ಪ್ರದೇಶ ಹೆಚ್ಚಿರುವುದರಿಂದ ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕುಗಳಲ್ಲಿ ಜನಸಾಂದ್ರತೆ ಕಡಿಮೆ ಇದೆ ಎಂದೂ ಭಾವಿಸಬಹುದಾಗಿದೆ.

## ಅಂಗವಿಕಲರು

ಕಿವುಡು, ಕುರುಡು, ಕೈಕಾಲು ಊನ, ಬುದ್ಧಿಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಮೊದಲಾದವುಗಳನ್ನು ಅಂಗವಿಕಲತೆ ಎಂದು ಪರಿಗಣಿಸಲಾಗುತ್ತದೆ. ಕೆಲವರು ಹುಟ್ಟಿನಿಂದ, ಕೆಲವರು ಆ ಬಳಿಕ ಆಕಸ್ಮಿಕ ಅಥವಾ ವೈದ್ಯಕೀಯ ಕಾರಣದಿಂದ ಅಂಗವೈಕಲ್ಯಕ್ಕೆ ತುತ್ತಾಗುತ್ತಾರೆ. ಇವರು ಮೇಲ್ನೋಟಕ್ಕೆ ಅಂಗವಿಕಲರಂತೆ ಕಂಡರೂ ದೈಹಿಕ ಅಶಕ್ತತೆಯನ್ನು ಮರೆಸಿ, ತಮ್ಮ ಸಾಮರ್ಥ್ಯವನ್ನು ವಿಭಿನ್ನವಾಗಿ ತೋರುವವರಾಗಿರುತ್ತಾರೆ. ಅಂತೆಯೇ, ಅವರನ್ನು Physically Challenged Persons, ವಿಕಲಾತೀತರು ಅಥವಾ ವಿಕಲ ಚೇತನರು, ವಿಶೇಷ ಮಕ್ಕಳು ಮೊದಲಾದ ಹೆಸರುಗಳಿಂದ ಈಚೆಗೆ ಗುರುತಿಸಲಾಗುತ್ತಿದೆ. ಅಂಗವಿಕಲರ ಗಣತಿಯನ್ನು ಪ್ರತ್ಯೇಕವಾಗಿ ಮಾಡಲಾಗುತ್ತದೆ. ಆದರೂ ಅನೇಕ ನಿರ್ವಸಿತ ಅಂಗವಿಕಲರು ಭಿಕ್ಷುಕ ಸಮುದಾಯದಲ್ಲಿ ಸೇರಿ, ಸಾಮಾನ್ಯ ಗಣತಿ ಸಮಯದಲ್ಲಿ ಗಣತಿಗೆ ಅಲಭ್ಯವಾಗುವುದರಿಂದ ಅಂಗವಿಕಲರ ವಾಸ್ತವ ಅಂಕಿ–ಅಂಶಗಳನ್ನು ಗುರುತಿಸುವುದು ಕಷ್ಟವಾಗುತ್ತದೆ. ಜನಗಣತಿ ಇಲಾಖೆಯು ೨೦೦೧ರ ಸಾಲಿಗೆ ಸಂಬಂಧಿಸಿ ಸಿದ್ಧಪಡಿಸಿರುವ ಅಂಕಿಅಂಶಗಳ ಪ್ರಕಾರ, ಜಿಲ್ಲೆಯಲ್ಲಿ ೩೮ ಸಾವಿರದಷ್ಟು ಅಂಗವಿಕಲರಿರುವುದು ವೇದ್ಯವಾಗುತ್ತದೆ. ಈ ವಿವಿಧ ಬಗೆಯ ಅಂಗವಿಕಲರಲ್ಲಿ ದೃಷ್ಟಿಯಲ್ಲಿ ವೈಕಲ್ಯ ಉಳ್ಳವರು (ಅಂಧರು) ಹೆಚ್ಚಿನ ಸಂಖ್ಯೆಯಲ್ಲಿಯೂ (೧೯೮೫೧), ನಡಿಗೆಯಲ್ಲಿ ವೈಕಲ್ಯ ಉಳ್ಳವರು (ಕುಂಟ) ಎರಡನೆಯ ಸ್ಥಾನದಲ್ಲಿಯೂ (೭,೮೨೯) ಇದ್ದಾರೆ. ಅಂಗವಿಕಲರ ಸಂಖ್ಯೆಯನ್ನು ಲಿಂಗಾನುಗುಣವಾಗಿ

ಹೋಲಿಸಿದಾಗ ೨೦,೭೧೧ ರಷ್ಟು ಇರುವ ಪುರುಷರು ಸ್ತ್ರೀಯರಿಗಿಂತ (೧೭,೨೮೮) ಹೆಚ್ಚಿನ ಸಂಖ್ಯೆಯಲ್ಲಿರುವುದು ಹಾಗೂ ನಗರ ಪ್ರದೇಶ (೧೬,೦೨೧)ಕ್ಕಿಂತ ಗ್ರಾಮೀಣ ಪ್ರದೇಶ (೨೧,೯೭೮)ದಲ್ಲಿಯೇ ಅಂಗವಿಕಲರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಹೆಚ್ಚಿನ ಪರಿಶೀಲನೆಗಾಗಿ ಕೋಷ್ಟಕ ೩.೬ರಲ್ಲಿ ವಿವಿಧ ಬಗೆಯ ಅಂಗವಿಕಲರ ಅಂಕಿ–ಅಂಶಗಳನ್ನು ನೀಡಲಾಗಿದೆ:

**ಕೋಷ್ಟಕ ೩.೬ : ಅಂಗವಿಕಲರು**

| ವಿಧ | ಲಿಂಗ | ಒಟ್ಟು | ಗ್ರಾಮೀಣ | ನಗರ |
|---|---|---|---|---|
| ಒಟ್ಟು ಅಂಗವಿಕಲರು | ಒಟ್ಟು | ೩೭,೯೯೯ | ೨೧,೯೭೮ | ೧೬,೦೨೧ |
| | ಗಂಡು | ೨೦,೭೧೧ | ೧೧,೯೩೮ | ೮,೭೭೩ |
| | ಹೆಣ್ಣು | ೧೭,೨೮೮ | ೧೦,೦೪೦ | ೭,೨೪೮ |
| ದೃಷ್ಟಿಯಲ್ಲಿ | ಒಟ್ಟು | ೧೯,೮೫೧ | ೧೦,೨೦೩ | ೯,೬೪೮ |
| | ಗಂಡು | ೧೦,೫೬೨ | ೫,೩೧೬ | ೫,೨೪೬ |
| | ಹೆಣ್ಣು | ೯,೨೮೯ | ೪,೮೮೭ | ೪,೪೦೨ |
| ಮಾತಿನಲ್ಲಿ | ಒಟ್ಟು | ೩,೨೭೨ | ೨,೧೧೯ | ೧,೧೫೩ |
| | ಗಂಡು | ೧,೭೫೮ | ೧,೧೩೭ | ೬೨೧ |
| | ಹೆಣ್ಣು | ೧,೫೧೪ | ೯೮೨ | ೫೩೨ |
| ಶ್ರವಣದಲ್ಲಿ | ಒಟ್ಟು | ೧,೬೩೮ | ೧,೧೧೪ | ೫೨೪ |
| | ಗಂಡು | ೮೧೩ | ೫೬೧ | ೨೫೨ |
| | ಹೆಣ್ಣು | ೮೨೫ | ೫೫೩ | ೨೭೨ |
| ನಡಿಗೆಯಲ್ಲಿ | ಒಟ್ಟು | ೭,೮೨೯ | ೫,೧೯೬ | ೨,೬೩೩ |
| | ಗಂಡು | ೪,೭೩೫ | ೩,೧೬೪ | ೧,೫೭೧ |
| | ಹೆಣ್ಣು | ೩,೦೯೪ | ೨,೦೩೨ | ೧,೦೬೨ |
| ಮಾನಸಿಕವಾಗಿ | ಒಟ್ಟು | ೫,೪೦೯ | ೩,೩೪೬ | ೨,೦೬೩ |
| | ಗಂಡು | ೨,೮೪೩ | ೧,೭೬೦ | ೧,೦೮೩ |
| | ಹೆಣ್ಣು | ೨,೫೬೬ | ೧,೫೮೬ | ೯೮೦ |

**ಆಧಾರ** : **Census of India 2001, C.D. Version**

## ಲಿಂಗಾನುಪಾತ

ಪ್ರತೀ ಸಾವಿರ ಪುರುಷರಿಗೆ ಅನುಪಾತವಾಗಿ ಇರುವ ಸ್ತ್ರೀಯರ ಸಂಖ್ಯೆಯನ್ನು ಜನಗಣತಿಯಲ್ಲಿ ಲಿಂಗಾನುಪಾತವೆಂದು ಗುರುತಿಸಲಾಗುತ್ತದೆ. ಈ ಅನುಪಾತವು ಆಯಾ ಪ್ರಾಂತ್ಯದ ಜನಸಮೂಹಗಳಲ್ಲಿನ ಸಾಮಾಜಿಕ ಸ್ಥಿತಿ, ಧಾರ್ಮಿಕ ನೆಲೆಯಲ್ಲಿ ಇರಬಹುದಾದ ನಂಬಿಕೆಗಳು, ವೈವಾಹಿಕ ಹಿನ್ನೆಲೆ, ವಲಸೆ, ಸಾಕ್ಷರತೆ ಮೊದಲಾದವುಗಳಲ್ಲದೆ ಈಚೆಗಿನ ವೈದ್ಯಕೀಯ ಸಂಶೋಧನೆಗಳು ಹೇಳುವಂತೆ ದಂಪತಿಗಳ ಉದ್ಯೋಗ ಇತ್ಯಾದಿಗಳನ್ನೂ ಅವಲಂಬಿಸಿ ನಿರ್ಧಾರಿತವಾಗುತ್ತಿರುತ್ತದೆ. ೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಸ್ತ್ರೀ–ಪುರುಷರ ಅನುಪಾತವು ೧೦೨೨:೧೦೦೦ ಆಗಿದ್ದು, ಇದು ರಾಜ್ಯದ ಪ್ರಮಾಣಕ್ಕಿಂತಲೂ (೯೬೫) ಹೆಚ್ಚಾಗಿದ್ದುದು ಉಲ್ಲೇಖನೀಯವಾಗಿದೆ. ತಾಲೂಕುವಾರು ಅಂಕಿಅಂಶಗಳನ್ನು ತೌಲನಿಕವಾಗಿ ನೋಡಿದಾಗ ಬೆಳ್ತಂಗಡಿ ಮೊದಲ ಸ್ಥಾನದಲ್ಲಿ (೧೦೫೨), ಮಂಗಳೂರು ಎರಡನೇ ಸ್ಥಾನದಲ್ಲಿ (೧೦೩೧), ಬಂಟ್ವಾಳವು ಮೂರನೇ ಸ್ಥಾನದಲ್ಲಿ (೧೦೨೪) ಇರುವುದು ಕಂಡುಬಂದಿದೆ. ಪುತ್ತೂರಿನಲ್ಲಿ ಬಹುಮಟ್ಟಿಗೆ ಸಮ ಪ್ರಮಾಣವಿದೆ (೧೦೦೪). ಇಡೀ ಜಿಲ್ಲೆಗೆ ಹೋಲಿಸಿದರೆ ಸುಳ್ಯ ತಾಲೂಕಿನಲ್ಲಿ (೯೮೩) ಮಾತ್ರ ಸ್ತ್ರೀಯರ ಪ್ರಮಾಣ ಪುರುಷರಿಗಿಂತ ಕಡಿಮೆ ಇರುವುದು ಗಮನಾರ್ಹವಾಗಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿನ ಆರು ವರ್ಷದ ಒಳಗಿನ ಗಂಡು–ಹೆಣ್ಣು ಮಕ್ಕಳ ಪ್ರಮಾಣವನ್ನು (೯೫೨) ಪರಿಶೀಲಿಸಿದಾಗಲೂ ಈ ಜಿಲ್ಲೆಯು ರಾಜ್ಯದಲ್ಲಿನ ಮಕ್ಕಳ ಪ್ರಮಾಣಕ್ಕಿಂತ (೯೪೬) ಮುಂದೆ ಇದೆ. ಜಿಲ್ಲೆಯ ತಾಲೂಕುವಾರು ಅಂಕಿಅಂಶಗಳನ್ನು ಅವಲೋಕಿಸಿದಾಗ ಪುತ್ತೂರು ತಾಲೂಕಿನಲ್ಲಿ (೯೬೦) ಮಂಗಳೂರು ತಾಲೂಕಿಗಿಂತಲೂ (೯೫೫) ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳಿರುವುದು, ಬಂಟ್ವಾಳವು (೯೫೨) ಜಿಲ್ಲೆಯ ಒಟ್ಟಿಗೆ (೯೫೨) ಸರಿಸಮನಾಗಿರುವುದು ಕಂಡುಬಂದಿದೆ. ಸುಳ್ಯ ತಾಲೂಕಿನಲ್ಲಿ (೯೨೬) ಹೆಣ್ಣು ಮಕ್ಕಳ ಸಂಖ್ಯೆ ಬಹಳ ಕಡಿಮೆ ಇರುವುದೂ ಗಮನಾರ್ಹವಾಗಿದೆ. ಇಷ್ಟಾಗಿಯೂ ವಯಸ್ಕ ಸ್ತ್ರೀ–ಪುರುಷರ ಪ್ರಮಾಣದೊಂದಿಗೆ ಹೋಲಿಸಿದರೆ ಆರು ವರ್ಷದ ಒಳಗಿನ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇದೆ. ಅರ್ಥಾತ್ ಈಚೆಗೆ ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಜನನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿದೆ. ವಿವರಕ್ಕೆ ಕೋಷ್ಟಕ ೩.೭ರಲ್ಲಿನ ಅಂಕಿ–ಅಂಶಗಳನ್ನು ನೋಡಿ:

**ಕೋಷ್ಟಕ ೩.೭ : ಲಿಂಗಾನುಪಾತ**

| ತಾಲೂಕು | | ವಯಸ್ಕರು | ೦–೬ ವಯೋಗುಂಪು |
|---|---|---|---|
| ಮಂಗಳೂರು | ಒಟ್ಟು | ೧೦೩೧ | ೯೫೫ |
| | ಗ್ರಾಮ | ೧೦೮೦ | ೯೪೫ |
| | ನಗರ | ೧೦೦೯ | ೯೬೦ |
| ಬಂಟ್ವಾಳ | ಒಟ್ಟು | ೧೦೨೪ | ೯೫೨ |
| | ಗ್ರಾಮ | ೧೦೨೬ | ೯೫೫ |
| | ನಗರ | ೧೦೧೦ | ೯೩೬ |
| ಬೆಳ್ತಂಗಡಿ | ಒಟ್ಟು | ೧೦೩೨ | ೯೪೬ |
| | ಗ್ರಾಮ | ೧೦೩೩ | ೯೪೪ |
| | ನಗರ | ೧೦೦೩ | ೧೦೦೭ |
| ಪುತ್ತೂರು | ಒಟ್ಟು | ೧೦೦೪ | ೯೬೦ |
| | ಗ್ರಾಮ | ೧೦೦೯ | ೯೫೪ |
| | ನಗರ | ೯೮೨ | ೯೯೨ |
| ಸುಳ್ಯ | ಒಟ್ಟು | ೯೮೩ | ೯೨೬ |
| | ಗ್ರಾಮ | ೯೯೧ | ೯೨೫ |
| | ನಗರ | ೯೨೪ | ೯೩೪ |
| ಜಿಲ್ಲೆಯ ಒಟ್ಟು | ಒಟ್ಟು | ೧೦೨೨ | ೯೫೨ |
| | ಗ್ರಾಮ | ೧೦೩೩ | ೯೪೭ |
| | ನಗರ | ೧೦೦೫ | ೯೬೦ |

**ಆಧಾರ** : **Census of India – 2001, District Population Booklet, D.K.**

**ಪರಿಶಿಷ್ಟ ಜಾತಿ**

೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಖಲಾಗಿರುವ ಪರಿಶಿಷ್ಟ ಜಾತಿಯವರ ಒಟ್ಟು ಸಂಖ್ಯೆ ೧೩೧೧೬೦ ಆಗಿದೆ. ಇವರಲ್ಲಿ ಪುರುಷರ ಸಂಖ್ಯೆ ೬೫೮೧೮ ಆದರೆ ಸ್ತ್ರೀಯರ ಸಂಖ್ಯೆ ೬೫೩೪೨ ಆಗಿದೆ. ಜಿಲ್ಲೆಯ ಶೇಕಡಾ ಪ್ರಮಾಣವು ೬.೯೧ ಆಗಿದ್ದು, ಅದು ರಾಜ್ಯದ ಪ್ರಮಾಣಕ್ಕಿಂತ (೧೬.೨) ಬಹಳ ಕಡಿಮೆಯಾಗಿದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ ಅಂಕಿಅಂಶಗಳನ್ನು ಗಮನಿಸಿದರೆ – ಮಂಗಳೂರು ತಾಲೂಕಿನಲ್ಲಿ (೪೧೩೭೮) ಅತಿ ಹೆಚ್ಚು ಹಾಗೂ ಬಂಟ್ವಾಳ ತಾಲೂಕಿನಲ್ಲಿ (೧೬೯೬೪) ಅತಿ ಕಡಿಮೆ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಇದ್ದಾರೆ. ಪುತ್ತೂರು (೩೧೦೦೯) ಎರಡನೆಯ ಸ್ಥಾನದಲ್ಲಿದೆ. ಆದರೆ, ವಿವಿಧ ತಾಲೂಕುಗಳ ಒಟ್ಟು

ಸಂಖ್ಯೆಯನ್ನು ಶೇಕಡಾವಾರು ಪ್ರಮಾಣದ ರೀತ್ಯಾ ಅವಲೋಕಿಸಿದರೆ ಶೇ.೧೩.೯ ಪ್ರಮಾಣ ಹೊಂದಿದ ಸುಳ್ಯ ತಾಲೂಕು ಮೊದಲ ಸ್ಥಾನದಲ್ಲಿದ್ದರೆ, ಪುತ್ತೂರು ಎರಡನೇ ಸ್ಥಾನ (೧೧.೭) ದಲ್ಲಿರುವುದು, ಮಂಗಳೂರು ಹಾಗೂ ಬಂಟ್ವಾಳ ತಾಲೂಕುಗಳಲ್ಲಿ ಅತಿ ಕಡಿಮೆ (೪.೭) ಆದರೆ ಸರಿಸಮ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯವರು ಇರುವುದು  ಕಂಡುಬಂದಿದೆ.

ನಗರಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹಂಚಿಕೆಯಾಗಿರುವ ಅಂಕಿಅಂಶಗಳನ್ನು ಗಮನಿಸಿದರೆ ಮಂಗಳೂರು ತಾಲೂಕಿನ ನಗರ–ಪಟ್ಟಣಪ್ರದೇಶದಲ್ಲಿ ಪರಿಶಿಷ್ಟ ಜಾತಿಯವರು ಅತಿ ಹೆಚ್ಚು ಸಂಖ್ಯೆಯಲ್ಲಿದ್ದರೆ (೨೩೮೪೦), ಬೆಳ್ತಂಗಡಿ ತಾಲೂಕಿನ ನಗರ – ಪಟ್ಟಣ ಪ್ರದೇಶದಲ್ಲಿ ಅತಿ ಕಡಿಮೆ (೮೮೯) ಸಂಖ್ಯೆಯಲ್ಲಿದ್ದಾರೆ.  ಆದರೆ, ಗ್ರಾಮೀಣ ಭಾಗದ ಅಂಕಿಅಂಶಗಳ ಪ್ರಕಾರ ಪುತ್ತೂರು ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಅತಿ ಹೆಚ್ಚು (೨೬೮೦೮) ಹಾಗೂ ಬಂಟ್ವಾಳ ತಾಲೂಕಿನ ಗ್ರಾಮೀಣ ಭಾಗದಲ್ಲಿ ಅತಿ ಕಡಿಮೆ (೧೫೬೮೨) ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಇದ್ದದ್ದು ದಾಖಲಾಗಿದೆ. ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿಯ ಸ್ತ್ರೀ–ಪುರುಷರ ಸಂಖ್ಯೆಗಳನ್ನು ಹೋಲಿಸಿದರೆ ಪುರುಷರು ಸ್ತ್ರೀಯರಿಗಿಂತ ಒಟ್ಟಾರೆ ಹೆಚ್ಚಾಗಿದ್ದರೂ, ಬೆಳ್ತಂಗಡಿ, ಮಂಗಳೂರು ಹಾಗೂ ಬಂಟ್ವಾಳ ತಾಲೂಕುಗಳಲ್ಲಿ ಮಾತ್ರ ಪುರುಷರಿಗಿಂತ ಸ್ತ್ರೀಯರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಾಣಬರುತ್ತದೆ.  ಹೆಚ್ಚಿನ ವಿವರಕ್ಕಾಗಿ ಕೋಷ್ಟಕ ೩.೮ ರಲ್ಲಿನ ಅಂಕಿಅಂಶಗಳನ್ನು ನೋಡಬಹುದು.

## ಪರಿಶಿಷ್ಟ ಪಂಗಡ

೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಶಿಷ್ಟ ಪಂಗಡದವರ ಒಟ್ಟು ಸಂಖ್ಯೆ ೬೨,೯೩೬ ಆಗಿದ್ದಿತು. ರಾಜ್ಯದಲ್ಲಿನ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯಾ ಪ್ರಮಾಣಕ್ಕೆ (೬.೫೫) ಹೋಲಿಸಿದಾಗ ಜಿಲ್ಲೆಯ ಪ್ರಮಾಣ ಶೇ.೧.೮೧ ಆಗುತ್ತದೆ.  ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದಲ್ಲಿ ಪರಿಶಿಷ್ಟ ಪಂಗಡದ ಶೇಕಡಾ ಪ್ರಮಾಣವು ೩.೩೨ ಆಗುತ್ತದೆ. ತಾಲೂಕುವಾರು ಸಂಖ್ಯೆಗಳನ್ನು ಗಮನಿಸಿದರೆ ಬಂಟ್ವಾಳ (೧೪,೮೪೯), ಪುತ್ತೂರು (೧೩,೦೫೬) ಹಾಗೂ ಬೆಳ್ತಂಗಡಿ (೧೨,೭೧೬) ತಾಲೂಕುಗಳು ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನದಲ್ಲಿರುವುದು ತಿಳಿದುಬರುತ್ತದೆ. ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಸ್ತ್ರೀಯರಿಗಿಂತಲೂ (೩೧,೩೫೭) ಪುರುಷರ ಸಂಖ್ಯೆ (೩೧,೫೭೯) ಹೆಚ್ಚಾಗಿದೆ. ನಗರ ಪ್ರದೇಶದ ಪರಿಶಿಷ್ಟ ಪಂಗಡದವರಲ್ಲಿಯೂ ಪುರುಷರ ಸಂಖ್ಯೆ (೪೪೦೮) ಹೆಚ್ಚಾಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀಯರೇ ಹೆಚ್ಚಿನ ಸಂಖ್ಯೆಯಲ್ಲಿರುವುದು (೨೭,೨೬೯) ಗಮನಾರ್ಹವಾಗುತ್ತದೆ. ಆದರೆ, ಬಂಟ್ವಾಳ, ಬೆಳ್ತಂಗಡಿ ತಾಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ–ಪುರುಷರು ಬಹುಮಟ್ಟಿಗೆ ಸಮಾನ ಸಂಖ್ಯೆಯಲ್ಲಿರುವುದೂ ದಾಖಲಾಗಿದೆ. ಹೆಚ್ಚಿನ ಅಂಕಿ–ಸಂಖ್ಯೆಗಳ ವಿವರವನ್ನು ಕೋಷ್ಟಕ ೩.೮ರಲ್ಲಿ ನೀಡಲಾಗಿದೆ:

**ಕೋಷ್ಟಕ  ೩.೮ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಖ್ಯೆ**

| | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
|---|---|---|---|---|---|---|---|
| | | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು |
| ೧ | ೨ | ೩ | ೪ | ೫ | ೬ | ೭ | ೮ |
| ಮಂಗಳೂರು | ಗ್ರಾಮ | ೧೭,೫೩೮ | ೮,೮೦೦ | ೮,೭೩೮ | ೬,೦೯೧ | ೨,೯೬೧ | ೩,೧೩೦ |
| | ನಗರ | ೨೩,೮೪೦ | ೧೧,೮೩೩ | ೧೨,೦೦೭ | ೫,೪೪೮ | ೨,೮೪೮ | ೨,೬೦೦ |
| | ಒಟ್ಟು | ೪೧೩೭೮ | ೨೦,೬೩೩ | ೨೦,೭೪೫ | ೧೧,೫೩೯ | ೫,೮೦೯ | ೫,೭೩೦ |
| ಬಂಟ್ವಾಳ | ಗ್ರಾಮ | ೧೫,೬೮೨ | ೭,೮೧೪ | ೭,೮೬೮ | ೧೪,೪೦೦ | ೭,೨೩೨ | ೭,೧೬೮ |
| | ನಗರ | ೧,೨೮೨ | ೬೫೧ | ೬೩೧ | ೪೪೯ | ೨೨೮ | ೨೨೧ |
| | ಒಟ್ಟು | ೧೬,೯೬೪ | ೮,೪೬೪ | ೮,೪೯೯ | ೧೪,೮೪೯ | ೭,೪೬೦ | ೭,೩೮೯ |
| ಬೆಳ್ತಂಗಡಿ | ಗ್ರಾಮ | ೨೧,೩೮೬ | ೧೦,೫೭೬ | ೧೦,೮೧೦ | ೧೨,೪೭೮ | ೬,೨೧೬ | ೬,೨೬೨ |
| | ನಗರ | ೮೮೯ | ೪೪೨ | ೪೪೭ | ೨೩೮ | ೧೧೮ | ೧೨೦ |
| | ಒಟ್ಟು | ೨೨,೨೭೫ | ೧೧,೦೧೮ | ೧೧.೨೫೭ | ೧೨,೭೧೬ | ೬,೩೩೪ | ೬,೩೮೨ |

ಮುಂದುವರಿದಿದೆ....

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ಪುತ್ತೂರು | ಗ್ರಾಮ | ೨೬,೮೦೮ | ೧೩,೭೬೩ | ೧೩,೦೪೫ | ೧೧,೬೦೧ | ೫,೮೦೬ | ೫,೭೯೫ |
| | ನಗರ | ೪,೨೦೧ | ೨,೧೧೪ | ೨,೦೮೭ | ೧,೪೫೫ | ೭೫೭ | ೬೯೮ |
| | ಒಟ್ಟು | ೩೧,೦೦೯ | ೧೫,೮೭೭ | ೧೫,೧೩೨ | ೧೩,೦೫೬ | ೬,೫೬೩ | ೬,೪೯೩ |
| ಸುಳ್ಯ | ಗ್ರಾಮ | ೧೭,೬೨೧ | ೮,೮೬೩ | ೮,೭೫೮ | ೯,೮೭೦ | ೪,೯೫೬ | ೪,೯೧೪ |
| | ನಗರ | ೧,೯೧೩ | ೯೬೨ | ೯೫೧ | ೯೦೬ | ೪೫೭ | ೪೪೯ |
| | ಒಟ್ಟು | ೧೯,೫೩೪ | ೯,೮೨೪ | ೯,೭೦೯ | ೧೦,೭೭೬ | ೫,೪೧೩ | ೫,೩೬೩ |
| ಜಿಲ್ಲೆಯ ಒಟ್ಟು | ಗ್ರಾಮ | ೯೯,೦೩೫ | ೪೯೮೧೬ | ೪೯೨೧೯ | ೫೪,೪೪೦ | ೨೭,೧೭೧ | ೨೭,೨೬೯ |
| | ನಗರ | ೩೨,೧೨೫ | ೧೬೦೦೨ | ೧೬೧೨೩ | ೮,೪೯೬ | ೪,೪೦೮ | ೪,೦೮೮ |
| | ಒಟ್ಟು | ೧,೩೧,೧೬೦ | ೬೫೮೧೮ | ೬೫೩೪೨ | ೬೨,೯೩೬ | ೩೧,೫೭೯ | ೩೧,೩೫೭ |

**ಆಧಾರ** : **Primary Census Abstract, 2001, P-337-339 & 485-487**

## ಸಾಕ್ಷರತೆ

ಯಾವುದೇ ಭಾಷೆಯಲ್ಲಿ ಓದಲು, ಬರೆಯಲು ಸಮರ್ಥನಾದ ವ್ಯಕ್ತಿಯನ್ನು ಜನಗಣತಿಯ ಪ್ರಕಾರ ಸಾಕ್ಷರನೆಂದು ದಾಖಲಿಸಲಾಗುತ್ತದೆ. ಇದಕ್ಕೆ ಇದರ ಹೊರತು ಬೇರೆ ಯಾವುದೇ ಶೈಕ್ಷಣಿಕ ಅರ್ಹತೆಯನ್ನು ನಿಗದಿಪಡಿಸಿರುವುದಿಲ್ಲ ಹಾಗೂ ಆರು ವರ್ಷದ ಒಳಗಿನ ಮಕ್ಕಳನ್ನು ಸಾಕ್ಷರರೆಂದು ಪರಿಗಣಿಸುವುದಿಲ್ಲ. ೨೦೦೧ರ ಜನಗಣತಿಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆಯು ಶೇ.೮೩.೪೭ರಷ್ಟು ಇದ್ದು, ಅದರಲ್ಲಿ ಪುರುಷರ ಹಾಗೂ ಸ್ತ್ರೀಯರ ಸಾಕ್ಷರತಾ ಪ್ರಮಾಣವು ಕ್ರಮವಾಗಿ ಶೇ.೮೯.೭೪ ಮತ್ತು ಶೇ. ೭೭.೨೧ ಆಗಿರುತ್ತದೆ. ಇದು ರಾಜ್ಯದ ಪ್ರಮಾಣಕ್ಕಿಂತ (ಶೇ.೭೬.೨೯ ಮತ್ತು ಶೇ.೫೭.೪೫) ಹೆಚ್ಚಾಗಿಯೇ ಇದೆ (ಹೆಚ್ಚಿನ ವಿವರಕ್ಕೆ ಅಧ್ಯಾಯ ೧೩ 'ಶಿಕ್ಷಣ' ನೋಡಿ).

ಸಾಕ್ಷರತಾ ಪ್ರಮಾಣವನ್ನು ಧರ್ಮವಾರು ಪರಿಶೀಲಿಸಿದಾಗ ಜಿಲ್ಲೆಯಲ್ಲಿ ಜೈನಧರ್ಮೀಯರು ಪ್ರಥಮ ಸ್ಥಾನದಲ್ಲಿ (ಶೇ.೯೬.೪೯) ಹಾಗೂ ಕ್ರಿಶ್ಚಿಯನ್ನರು ದ್ವಿತೀಯ ಸ್ಥಾನದಲ್ಲಿ (ಶೇ.೯೨.೭೮) ಇದ್ದುದು ತಿಳಿದುಬರುತ್ತದೆ. ಹಿಂದೂ ಮತ್ತು ಮುಸ್ಲಿಮರ ಸಾಕ್ಷರತಾ ಪ್ರಮಾಣ ಬಹುಪಾಲು ಒಂದೇ ಆಗಿದೆ (ಕ್ರಮವಾಗಿ ಶೇ.೮೨.೩೬ ಮತ್ತು ಶೇ.೮೨.೩೨). ಆದರೆ, ಮುಸ್ಲಿಂ ಮಹಿಳೆಯರ ಸಾಕ್ಷರತಾ ಪ್ರಮಾಣ (ಶೇ.೭೩.೩೪) ಇತರ ಧರ್ಮೀಯ ಮಹಿಳೆಯರಿಗಿಂತ ಕಡಿಮೆ ಇರುವುದೂ ಇಲ್ಲಿ ದಾಖಲಾಗಿದೆ.

## ವಲಸೆ

ಮನುಷ್ಯರಾಗಲಿ, ಪ್ರಾಣಿ, ಪಕ್ಷಿಗಳಂತಹ ಇತರ ಜೀವಿಗಳಾಗಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ನೆಲೆಸುವುದನ್ನು 'ವಲಸೆ' ಎಂದು ಕರೆಯಲಾಗುತ್ತದೆ. 'ವಲಸೆ' ಬಹು ಹಿಂದಿನಿಂದಲೂ ನಡೆದುಬಂದಿರುವ ಒಂದು ಸಾಮಾಜಿಕ ಹಾಗೂ ಆರ್ಥಿಕ ಪ್ರಕ್ರಿಯೆಯಾಗಿದೆ. ವಲಸೆಯು ತಾತ್ಕಾಲಿಕ ಆಗಿರಬಹುದು ಇಲ್ಲವೇ ಶಾಶ್ವತ ಆಗಿರಬಹುದು. ಭೀಕರ ಬರ, ಯುದ್ಧ, ಆಹಾರ, ಶಿಕ್ಷಣ, ಉದ್ಯೋಗ, ವಿವಾಹ ಮೊದಲಾದುವು ವಲಸೆಗೆ ಕಾರಣಗಳಾಗುತ್ತವೆ.

ಕಾರಣಾಂತರಗಳಿಂದ ವ್ಯಕ್ತಿಯು ತಾನು ಹುಟ್ಟಿದ ಊರನ್ನು ಬಿಟ್ಟು ಪಕ್ಕದ ಊರಿಗೆ ಹೋಗಿ ನೆಲೆಸುವುದೂ ಉಂಟು. ಹೀಗಾಗಿ, ಯಾವುದೇ ಪ್ರದೇಶದ ಜನಗಣತಿಯಲ್ಲಿ ಅಲ್ಲಿನ ನಿವಾಸಿಗಳನ್ನು ಅವರ ಹುಟ್ಟಿದ ಸ್ಥಳದ ಆಧಾರದ ಮೇಲೆ ವರ್ಗೀಕರಿಸಲಾಗುತ್ತದೆ. ಈ ವರ್ಗೀಕರಣದಲ್ಲಿ ಗಣತಿಯಾದ ಸ್ಥಳದಲ್ಲಿಯೇ ಹುಟ್ಟಿದವರನ್ನು ಹಾಗೂ ಜಿಲ್ಲೆಯಲ್ಲಿಯೇ ಒಂದು ಸ್ಥಳದಲ್ಲಿ ಹುಟ್ಟಿ ಇನ್ನೊಂದು ಸ್ಥಳದಲ್ಲಿ ಗಣತಿಯಾದವರನ್ನು ಪ್ರತ್ಯೇಕವಾಗಿಯೇ ದಾಖಲಿಸಲಾಗುತ್ತದೆ.

ಕೋಷ್ಟಕ ೩.೯ರಲ್ಲಿ ೨೦೦೧ರ ಜನಗಣತಿಯಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಗಣತಿ ಆದವರ ಕೆಲವೊಂದು ಸಂಖ್ಯೆಗಳನ್ನು ಮಾದರಿಗಾಗಿ ಅವರವರ ಹುಟ್ಟಿದ ಸ್ಥಳದ ಆಧಾರದ ಮೇಲೆ ವರ್ಗೀಕರಿಸಿ ನೀಡಲಾಗಿದೆ:

**ಕೋಷ್ಟಕ ೩.೯ : ಹುಟ್ಟಿದ ಸ್ಥಳದ ಆಧಾರದ ಮೇಲೆ ಜನಸಂಖ್ಯೆಯ ವರ್ಗೀಕರಣ**

| ಹುಟ್ಟಿದ ಸ್ಥಳ | ಒಟ್ಟು | | ಗ್ರಾಮಾಂತರ | | ನಗರ | |
|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎ. ಭಾರತದಲ್ಲಿ | ೯೩೬೦೪೪ | ೯೫೬೯೪೮ | ೫೭೩೦೨೯ | ೫೯೨೧೯೬ | ೩೬೩೦೧೫ | ೩೬೪೭೫೨ |
| ಖ. ಕರ್ನಾಟಕದಲ್ಲಿ | ೮೮೩೨೪೬ | ೮೯೭೩೪೮ | ೫೫೩೮೫೪ | ೫೬೪೬೧೬ | ೩೨೯೩೯೨ | ೩೩೨೭೩೨ |
| ಅ. ಜನಗಣತಿಯಾದ ಸ್ಥಳದಲ್ಲಿ | ೬೪೦೫೫೧ | ೪೯೩೬೫೯ | ೩೯೮೬೫೧ | ೨೭೭೦೨೯ | ೨೪೧೯೦೦ | ೨೧೬೬೩೦ |
| ಬ. ಜಿಲ್ಲೆಯಲ್ಲಿಯೇ ಒಂದು ಸ್ಥಳದಲ್ಲಿ ಹುಟ್ಟಿ ಇನ್ನೊಂದು ಸ್ಥಳದಲ್ಲಿ ಗಣತಿಯಾದವರು (born elsewhere in the district of enumeration) | ೧೯೩೮೬೦ | ೩೪೮೩೨೬ | ೧೩೭೭೪೨ | ೨೬೫೩೨೬ | ೫೬೧೧೮ | ೮೩೦೦೦ |
| ಕ. ರಾಜ್ಯದ ಇತರ ಜಿಲ್ಲೆಗಳಲ್ಲಿ | ೪೮೮೩೫ | ೫೫೩೬೩ | ೧೭೪೬೧ | ೨೨೨೬೧ | ೩೧೩೭೪ | ೩೩೧೦೨ |
| II ಇತರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ | ೫೨೭೯೮ | ೫೯೬೦೦ | ೧೯೧೭೫ | ೨೭೫೮೦ | ೩೩೬೨೩ | ೩೨೦೨೦ |
| ಜಮ್ಮು ಮತ್ತು ಕಾಶ್ಮೀರ | ೧೭೪ | ೭೮ | ೮ | ೨ | ೧೬೬ | ೭೬ |
| ಪಂಜಾಬ್ | ೨೦೫ | ೧೪೯ | ೫ | ೪ | ೨೦೦ | ೧೪೫ |
| ದೆಹಲಿ | ೩೦೦ | ೨೦೮ | ೧೮ | ೧೨ | ೨೮೨ | ೧೯೬ |
| ರಾಜಸ್ತಾನ | ೭೮೮ | ೩೦೩ | ೫೯ | ೫೯ | ೭೨೯ | ೨೪೪ |
| ಉತ್ತರ ಪ್ರದೇಶ | ೯೮೮ | ೩೭೭ | ೬೩ | ೪೯ | ೯೨೫ | ೩೨೮ |
| ಬಿಹಾರ್ | ೭೮೦ | ೧೮೭ | ೭೯ | ೧೦ | ೭೦೧ | ೧೭೭ |
| ಪಶ್ಚಿಮ ಬಂಗಾಳ | ೭೦೦ | ೪೧೨ | ೭೮ | ೧೦೫ | ೬೨೨ | ೩೦೭ |
| ಒರಿಸ್ಸಾ | ೪೮೧ | ೧೧೦ | ೬೩ | ೯ | ೪೧೮ | ೧೦೧ |
| ಗುಜರಾತ್ | ೧೦೧೫ | ೭೮೯ | ೬೮ | ೫೩ | ೯೪೭ | ೭೩೬ |
| ಮಹಾರಾಷ್ಟ್ರ | ೨೮೩೯ | ೩೩೮೩ | ೬೧೯ | ೭೬೨ | ೨೨೨೦ | ೨೬೨೧ |
| ಆಂಧ್ರಪ್ರದೇಶ | ೨೦೬೭ | ೧೪೦೧ | ೪೪೧ | ೩೨೫ | ೧೬೨೬ | ೧೦೭೬ |
| ಗೋವಾ | ೧೭೬ | ೧೮೨ | ೩೭ | ೪೦ | ೧೩೯ | ೧೪೨ |
| ಕೇರಳ | ೩೪೨೧೯ | ೪೬೨೪೦ | ೧೬೩೧೨ | ೨೫೦೨೪ | ೧೭೯೦೭ | ೨೧೨೧೬ |
| ತಮಿಳುನಾಡು | ೬೭೯೧ | ೫೧೨೯ | ೧೨೬೨ | ೧೦೬೯ | ೫೫೨೯ | ೪೦೬೦ |
| ಬಿ. ವಿದೇಶಗಳಲ್ಲಿ | ೨೩೮೯ | ೨೩೪೭ | ೧೬೨೮ | ೧೫೭೫ | ೭೬೧ | ೭೭೨ |

**ಆಧಾರ** : ಸೆನ್ಸಸ್ ಆಫ್ ಇಂಡಿಯಾ ೨೦೦೧, ಸಿ.ಡಿ. ಆವೃತ್ತಿ

ಇಲ್ಲಿನ ಅಂಕಿಅಂಶಗಳನ್ನು ಗಮನಿಸಿದಾಗ ಬಹುಮಟ್ಟಿಗೆ ದೇಶದ ಎಲ್ಲಾ ಭಾಗಗಳಿಂದಲೂ ಜಿಲ್ಲೆಗೆ ಬಂದವರು ಇರುವುದು ತಿಳಿದುಬರುತ್ತದೆ. ಇವರಲ್ಲಿ ಹೊರರಾಜ್ಯಗಳಲ್ಲಿ ಹುಟ್ಟಿದವರಲ್ಲಿ ಕೇರಳೀಯರು (೮೦,೪೫೯) ಅತಿ ಹೆಚ್ಚು ಸಂಖ್ಯೆಯಲ್ಲಿದ್ದರೆ, ತಮಿಳುನಾಡಿನವರು (೧೯,೭೨೦) ಎರಡನೇ ಸ್ಥಾನದಲ್ಲಿದ್ದಾರೆ. ವಿಶೇಷವೆಂದರೆ, ಜಮ್ಮು ಮತ್ತು ಕಾಶ್ಮೀರ (೨೫೨), ಪಂಜಾಬ್ (೩೫೪) ನಂತಹ ಬಹುದೂರದ ಪ್ರದೇಶಗಳಿಂದ ಬಂದವರೂ ಇದ್ದಾರೆ. ಹೀಗೆ ಬಂದ ಭಾರತೀಯ ಪ್ರಜೆಗಳಲ್ಲಿ ಸಹಜವಾಗಿಯೇ, ಜಿಲ್ಲೆಯ ಗ್ರಾಮಾಂತರ ಪ್ರದೇಶಕ್ಕಿಂತ ನಗರ–ಪಟ್ಟಣ ಪ್ರದೇಶಗಳಲ್ಲಿ ನೆಲೆ ನಿಂತವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ವಿದೇಶಗಳಿಂದ ಬಂದ ಒಟ್ಟು ೪,೭೩೬ ಜನರಲ್ಲಿ ನಗರ ಪ್ರದೇಶಕ್ಕಿಂತ (೧,೫೩೩), ಗ್ರಾಮೀಣ ಪ್ರದೇಶದಲ್ಲಿಯೇ (೩,೨೦೩) ಹೆಚ್ಚಿನ ಸಂಖ್ಯೆಯಲ್ಲಿ ಗಣತಿಯಾಗಿರುವುದು ವಿಶೇಷ ಉಲ್ಲೇಖನೀಯ ಅಂಶವಾಗಿದೆ. ಇಲ್ಲಿ ಪ್ರಸ್ತಾಪಿಸಬಹುದಾದ ಇನ್ನೊಂದು ವಿಶೇಷ ಪ್ರವೃತ್ತಿ ಎಂದರೆ, ಹೊರಗಿನಿಂದ ವಲಸೆ ಬಂದವರಲ್ಲಿ ಹೆಂಗಸರಿಗಿಂತ ಗಂಡಸರ ಸಂಖ್ಯೆಯೇ ಸಾಮಾನ್ಯವಾಗಿ ಜಾಸ್ತಿ ಇದ್ದರೂ, ಕೇರಳದಿಂದ ಬಂದವರಲ್ಲಿ ಗಂಡಸರಿಗಿಂತ (೩೪,೨೧೯), ಹೆಂಗಸರ (೪೬,೨೪೦) ಸಂಖ್ಯೆಯೇ ಜಾಸ್ತಿ ಇದೆ. ಮಹಾರಾಷ್ಟ್ರ(ಕ್ರಮವಾಗಿ ೨,೮೫೯ ಮತ್ತು ೩,೩೮೩ ಹಾಗೂ ಮಣಿಪುರ ೩೩ ಮತ್ತು ೬೯) ಮೊದಲಾದ ರಾಜ್ಯಗಳೂ ಇದೇ ಪ್ರವೃತ್ತಿ ತೋರಿವೆ. ಭಾರತದ ಇತರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕರ್ನಾಟಕದಲ್ಲಿಯೇ ಇತರ ಜಿಲ್ಲೆಗಳಲ್ಲಿ ಹುಟ್ಟಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಣತಿಯಾದವರಲ್ಲಿಯೂ ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಾಗಿರುವುದೂ ಪರಿಶೀಲನಾರ್ಹವಾಗಿದೆ. ಹೀಗೆ, ಇಲ್ಲಿನ ಅಂಕಿಅಂಶಗಳು ವಲಸೆ ಪ್ರವೃತ್ತಿಯ ಕುತೂಹಲಕರ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ.

## ತುಳುನಾಡಿನ ಸಾಮಾಜಿಕ ಜೀವನ

ತುಳುನಾಡಿನ ಬದುಕಿನ ವಿಶೇಷಗಳ ಅರಿವಾಗಬೇಕಾದರೆ ಅಲ್ಲಿನ ವಿವಿಧ ಸಮುದಾಯದವರು ಅನುಸರಿಸುತ್ತಿರುವ ಜೀವನಾವರ್ತನದ ಆಚಾರ–ಸಂಸ್ಕಾರಾದಿಗಳ ಪರಿಚಯವನ್ನೂ ತಪ್ಪದೇ ಮಾಡಿಕೊಳ್ಳಬೇಕಾಗುತ್ತದೆ. ಕರಾವಳಿಯು ತನ್ನ ಭೌಗೋಳಿಕ ಗುಣಲಕ್ಷಣಗಳಲ್ಲಿ ರಾಜ್ಯದ ಇತರ ಭಾಗಗಳಿಗಿಂತ ಭಿನ್ನವಾಗಿರುವಂತೆ ಅಲ್ಲಿನ ಸಮಾಜೋಸಾಂಸ್ಕೃತಿಕ ಲಕ್ಷಣಗಳಲ್ಲಿಯೂ ಅನನ್ಯತೆಯನ್ನು ಒಳಗೊಂಡಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ಉದ್ದೇಶದಿಂದ ದಕ್ಷಿಣಕನ್ನಡ ಜಿಲ್ಲೆಯಲ್ಲಿನ ವಿವಿಧ ಜನವರ್ಗಗಳ ಕುಟುಂಬ ವ್ಯವಸ್ಥೆ, ಹುಟ್ಟಿನಿಂದ ಸಾವಿನವರೆಗಿನ ವಿವಿಧ ಸಂಸ್ಕಾರಗಳು, ಜಾತ್ರೆ–ದೇವರು ಮೊದಲಾದ ಅಂಶಗಳಿಗೆ ಸಂಬಂಧಿಸಿ ಇಲ್ಲಿ ಸಂಕ್ಷಿಪ್ತ ಮಾಹಿತಿ ನೀಡಿದೆ.

**ಕುಟುಂಬ ಪದ್ಧತಿ:** ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬವೇ ಕೇಂದ್ರ. ವ್ಯಕ್ತಿಯು ಮೊದಲು ಕೌಟುಂಬಿಕ; ಆ ಬಳಿಕ ಸಾಮಾಜಿಕ. ಆದ್ದರಿಂದ, ಕುಟುಂಬದ ಮೂಲಕ ಸಾಮಾಜಿಕ ರೀತಿ ನೀತಿಗಳನ್ನು ಮೈಗೂಡಿಸಿಕೊಂಡು ಆತ ಬೆಳೆಯುತ್ತಾನೆ. ಭಾರತೀಯ ಸಾಂಪ್ರದಾಯಿಕ ಕುಟುಂಬ ಪದ್ಧತಿಯಲ್ಲಿ ಹಿಂದೆ ಅವಿಭಕ್ತ ಕುಟುಂಬಗಳೇ ವಿಶೇಷವಾಗಿ ಕಾಣಬರುತ್ತಿದ್ದವು. ಅದರಲ್ಲೂ ಗ್ರಾಮೀಣ ಬದುಕಿನಲ್ಲಿ ಅವಿಭಕ್ತ ಕುಟುಂಬಗಳು ಅನಿವಾರ್ಯವಾಗಿದ್ದವು. ಆದರೆ ಈಚಿನ ಒಂದೆರಡು ದಶಕಗಳಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ತೀರಾ ಕಡಿಮೆಯಾಗಿದೆ. ಸ್ವಂತ ದುಡಿಮೆ, ಸ್ವಂತ ಆಸ್ತಿಯ ಅಭಿವೃದ್ಧಿ, ಚಿಕ್ಕ ಸಂಸಾರದ ಆಕರ್ಷಣೆ ಮೊದಲಾದ ಭಾವನೆಗಳು ವ್ಯಕ್ತಿಗಳಲ್ಲಿ ಹೆಚ್ಚಿದ್ದು ಇದಕ್ಕೆ ಕಾರಣವೆನ್ನಬಹುದು. ಶೈಕ್ಷಣಿಕ ಬೆಳವಣಿಗೆ, ಕೈಗಾರಿಕೆಗಳ ವ್ಯಾಪಕತೆ, ಸಾರಿಗೆ ಸಂಪರ್ಕಗಳ ಸುಲಭೀಕರಣ ಮೊದಲಾದವುಗಳಿಂದ ನಗರೀಕರಣ ತೀವ್ರವಾದದ್ದು, ಗ್ರಾಮೀಣರೂ ನಗರಕ್ಕೆ ಬಂದು ನೆಲೆ ನಿಲ್ಲುವುದರ ಪ್ರಮಾಣ ಹೆಚ್ಚಾದದ್ದು, ಕುಲಕಸುಬುಗಳಲ್ಲಿ ಆದ ಸ್ಥಿತ್ಯಂತರ ಇತ್ಯಾದಿಗಳು ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳ ಸಂಖ್ಯೆ ಕ್ಷೀಣಿಸಲು ಇನ್ನಷ್ಟು ಕಾರಣವಾಗಿವೆ. ಈ ಪರಿವರ್ತನೆ ಇತರೆಡೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಾಮಾನ್ಯವಾಗಿ ನಡೆದಿದೆ.

**ಅಳಿಯಕಟ್ಟು:** ಸಾಮಾನ್ಯವಾಗಿ ಜಗತ್ತಿನಾದ್ಯಂತ ಪಿತೃ ಪ್ರಧಾನ ಕುಟುಂಬ ಪದ್ಧತಿಯೇ ಇದ್ದರೂ, ಕೆಲವೆಡೆ ಮಾತ್ರ ಮಾತೃ ಪ್ರಧಾನ ಕುಟುಂಬ ಪದ್ಧತಿಯೂ ಕಂಡುಬರುತ್ತದೆ. ಮಕ್ಕಳ ಸಂತಾನಕಟ್ಟು ಪದ್ಧತಿಯಲ್ಲಿ ಮನೆತನದ ಪಿತ್ರಾರ್ಜಿತ ಆಸ್ತಿಯು ತಂದೆಯಿಂದ ಗಂಡು ಮಕ್ಕಳಿಗೆ ವರ್ಗಾವಣೆಯಾಗುತ್ತದೆ. ಅಂದರೆ, ಅಲ್ಲಿ ಮಗನೇ ಮನೆಯ ವಾರಸುದಾರನಾಗುತ್ತಾನೆ. ಆದರೆ, ಅಳಿಯ ಸಂತಾನಕಟ್ಟು ಇದಕ್ಕಿಂತ ಭಿನ್ನವಾಗಿದ್ದು, ಇಲ್ಲಿ ಮಗಳು ತನ್ನ ಕುಟುಂಬದ ಆಸ್ತಿಪಾಸ್ತಿಯ ವಾರಸುದಾರಳಾಗುತ್ತಾಳೆ. ಅಂದರೆ, ಮಕ್ಕಳ ಸಂತಾನಕಟ್ಟು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಾಗಿದ್ದು, ಪಿತೃಪ್ರಧಾನ ಕುಟುಂಬವೆನಿಸಿದರೆ, ಅಳಿಯ ಸಂತಾನಕಟ್ಟು ಪದ್ಧತಿಯು ಸ್ತ್ರೀ ಪ್ರಧಾನ ವ್ಯವಸ್ಥೆಯಾಗಿದ್ದು ಮಾತೃಪ್ರಧಾನ ಕುಟುಂಬ ಪದ್ಧತಿ ಎನಿಸುತ್ತದೆ.

ತುಳುನಾಡಿನ ಹಲವು ವೈಶಿಷ್ಟ್ಯಗಳಲ್ಲಿ ಅಳಿಯಕಟ್ಟು (ಮಾತೃಮೂಲ) ಪದ್ಧತಿಯೂ ಒಂದಾಗಿದೆ. ಕರ್ನಾಟಕದಲ್ಲಿ ಮಕ್ಕಳ ಸಂತಾನಕಟ್ಟು ಪದ್ಧತಿಯೇ ವ್ಯಾಪಕವಾಗಿದ್ದರೂ, ಕರಾವಳಿಯು ಇದಕ್ಕೆ ಅಪವಾದವಾಗಿರುವುದು ಇಲ್ಲಿನ ವಿಶೇಷವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಗೌಡ, ಗೌಡಸಾರಸ್ವತ, ವಿಶ್ವಕರ್ಮ, ಬ್ರಾಹ್ಮಣ, ಮ್ಯಾಲ ಮೊದಲಾದ ಕೆಲವು ಜಾತಿಗಳನ್ನು ಹೊರತುಪಡಿಸಿ ಉಳಿದಂತೆ ಜೈನ, ಬಂಟ, ನಾಡವ, ಬಿಲ್ಲವ, ಮೊಗೇರ, ಅಗಸ, ಮೊಯ್ಲಿ, ಕುಲಾಲ, ಸಪಲ್ಯ, ಅಂಡೆಕೊರಗ, ಹಳೇಪೈಕ, ಕುಂಬಾರ, ಕ್ಷೌರಿಕ, ದೇವಾಡಿಗ, ಕೋಮಟಿ (ಹರಿಶೆಟ್ಟಿ), ಮಲವ, ಮಾಸಾಧಿಕ, ನಾಯರ, ಪಾಂಚಾಲ, ಹೊಲೆಯ, ಬಾಕುಡ, ಮುಂಡಾಲ, ಪಂಬದ, ಸಾಲಿಯ ಮೊದಲಾದವರು ಅಂದರೆ ಇಲ್ಲಿನ ಶೇಕಡಾ ಸುಮಾರು ೭೫ಕ್ಕಿಂತಲೂ ಹೆಚ್ಚಿನ ಸಮುದಾಯಗಳು ಈ ಸ್ತ್ರೀ ಪ್ರಾಧಾನ್ಯದ ಕುಟುಂಬ ಪದ್ಧತಿಯನ್ನು ಒಪ್ಪಿಕೊಂಡಿದ್ದವು. ಕಾನೂನಿನಲ್ಲಿ ಮಾನ್ಯವೂ ಆಗಿದ್ದ ಈ ವ್ಯವಸ್ಥೆಯಲ್ಲಿ ಮನೆತನದ ಎಲ್ಲಾ ಆಸ್ತಿ–ಪಾಸ್ತಿ, ಹಕ್ಕು–ಬಾಧ್ಯತೆಗಳು ತಂದೆಯಿಂದ ಮಗನಿಗೆ ಹೋಗುವ ಬದಲು ತಾಯಿಯಿಂದ ಮಗಳಿಗೆ ಹಸ್ತಾಂತರವಾಗುತ್ತವೆ. ಇಲ್ಲಿ ಗಂಡು ಮಕ್ಕಳು ಜೀವಂತ ಇರುವವರೆಗೆ ಮಾತ್ರ ಆ ಮನೆತನದ ಆಸ್ತಿಯನ್ನು ಅನುಭವಿಸಬಹುದು. ಬಳಿಕ ಆ ಭೂಮಿ–ಕಾಣಿಗಳು ಆತನ ಮಕ್ಕಳಿಗೆ ಹೋಗುವ ಬದಲು ಆತನ ಸಹೋದರಿಯ ಅಥವಾ ಆ ಸಹೋದರಿಯ ಮಕ್ಕಳ ಹಕ್ಕುದಾರಿಕೆಗೆ ಒಳಪಡುತ್ತದೆ. ಗಮನಿಸಬೇಕಾದುದೆಂದರೆ ಗಂಡನ ನಿಧನಾನಂತರ ಆತನ ಪತ್ನಿಗೂ ಆ ಆಸ್ತಿಯನ್ನು ಅನುಭವಿಸುವ ಅಧಿಕಾರವಿರುವುದಿಲ್ಲ. ಬದಲಿಗೆ, ಆಕೆ ಮಕ್ಕಳೊಂದಿಗೆ ತನ್ನ ತವರಿಗೇ ಹೋಗಬೇಕು. ಅಲ್ಲಿ ತೌರು ಮನೆಯ ಆಸ್ತಿ ಅನುಭವಿಸುವ ಹಕ್ಕು ಆಕೆಗೂ, ಅವಳ ಮಕ್ಕಳಿಗೂ ಲಭ್ಯವಾಗುತ್ತದೆ. ಇಲ್ಲಿ ಆಸ್ತಿಯ ವಿಷಯದಲ್ಲಿ ಸ್ತ್ರೀ ಸ್ವತಂತ್ರಳು ಅರ್ಥಾತ್ ಪುರುಷನಿಗೆ ಸಮಾನಳು. ವಿವಾಹದ ಬಳಿಕ ಆಕೆ ಬೇಕಾದಾಗ ಗಂಡನ ಮನೆಯಿಂದ ತನ್ನ ತೌರಿಗೆ ಹೋಗಿ ಇರುವ ಹಕ್ಕೂ ಆಕೆಗಿದೆ. ಪುರುಷನು ತನ್ನ ಸ್ವಯಾರ್ಜಿತ ಆಸ್ತಿಯನ್ನು ಆತನ ಹೆಂಡತಿ–ಮಕ್ಕಳಿಗೇ ಉಯಿಲು ಮೂಲಕ ಕೊಡಬಹುದು. ಉಯಿಲು ಮಾಡದಿದ್ದಲ್ಲಿ ಆತನ ಸಹೋದರಿಯರ ಮಕ್ಕಳಿಗೆ ಆತನ ಆಸ್ತಿ ಸೇರುತ್ತದೆ.

ಮಂಜೇಶ್ವರ ಗೋವಿಂದಪೈ ಅವರ ಪ್ರಕಾರ ಇದು ಕ್ರಿಸ್ತಪೂರ್ವದಷ್ಟು ಪ್ರಾಚೀನವಾದ ಸಂಪ್ರದಾಯ. ಬಿ.ಎ. ಸಾಲೆತ್ತೂರರ ಪ್ರಕಾರ ೧೨ನೇ ಶತಮಾನಕ್ಕೆ ಮೊದಲೇ ಈ ಆಚರಣೆ ಈ ಪ್ರಾಂತ್ಯದಲ್ಲಿ ವ್ಯಾಪಿಸಿತ್ತು. ಮುಂದೆ ಕಾನೂನು ಸಮ್ಮತಿಯನ್ನು ಪಡೆಯಿತು. ಆದರೆ, ಸ್ವಾತಂತ್ರ್ಯಾನಂತರ (೧೯೪೯ರಲ್ಲಿ) ಈ ಕಾನೂನಿನಲ್ಲಿ ಬದಲಾವಣೆಗಳಾದವು. ೧೯೭೬ರಲ್ಲಿ ಅಳಿಯಸಂತಾನದ ಉತ್ತರಾಧಿಕಾರತ್ವ ಸಂಪೂರ್ಣವಾಗಿ ರದ್ದಾಯಿತು. ಹೀಗೆ ಕಾನೂನು ಪ್ರಕಾರ ಅದು ಇಲ್ಲವಾದರೂ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಯ ಸಂಪ್ರದಾಯ, ನಡವಳಿಕೆಗಳಲ್ಲಿ ಈಗಲೂ ತುಳುನಾಡಿನ ಎಷ್ಟೋ ಸಮುದಾಯಗಳು ಈ ಪರಂಪರೆಯನ್ನು ಇನ್ನೂ ಅನುಸರಿಸುತ್ತಾ ಬಂದಿವೆ. ಹಾಗಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಕುಟುಂಬ ವ್ಯವಸ್ಥೆಯ ಬಗೆಗೆ ಅಭ್ಯಾಸ ಮಾಡುವವರು ಈ ಅಂಶವನ್ನು ಅಗತ್ಯವಾಗಿ ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ (ವಿವರಕ್ಕೆ: ಸುದರ್ಶನ, ಪು. ೧೪೫ – ೧೪೮, ಸಂಚಯ, ಪು. ೧೧೯).

**ಬಳಿ :** ತುಳುನಾಡಿನಲ್ಲಿ ವೈವಾಹಿಕ ಸಂಬಂಧಗಳನ್ನು ಬಳಿ(ತುಳುವಿನಲ್ಲಿ ಬರಿ)ಯ ಆಧಾರದ ಮೇಲೆ ನಿರ್ಧರಿಸುವ ರೂಢಿ ಇದೆ. ಒಂದೇ ಬಳಿಯಲ್ಲಿ(ಪಿತೃಮೂಲ ಪದ್ಧತಿಯಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿರುವಂತೆ) ವಿವಾಹ ಆಗುವಂತಿಲ್ಲ ಎಂಬುದು ಇಲ್ಲಿನ ಪ್ರಬಲವಾದ ನಿಷೇಧವಾಗಿದೆ. ಏಕೆಂದರೆ, ಗಂಡು–ಹೆಣ್ಣು ಒಂದೇ ಬಳಿಯವರಾದರೆ ಅವರನ್ನು ಪರಸ್ಪರ ಸೋದರ–ಸೋದರಿ ಅರ್ಥಾತ್ ಒಂದೇ ಕುಟುಂಬದವರು ಎಂದು ಪರಿಗಣಿಸಲಾಗುತ್ತದೆ. ಅಳಿಯ ಸಂತಾನ ಪದ್ಧತಿಯ ಕಟ್ಟಳೆಯಂತೆ ಬಳಿಗಳು ಮಾತೃ ಪ್ರಧಾನವಾಗಿದ್ದು, ತಾಯಿಯ ಮೂಲಕ ಬಳಿಯ ನಿರ್ಧಾರವಾಗುತ್ತದೆ. ಅಂದರೆ, ತಾಯಿಯ ಬಳಿಗೇ ಮಕ್ಕಳೂ ಸೇರುತ್ತಾರೆ. ಅಂತೆಯೇ, ವಿವಾಹ ನಿಶ್ಚಯದ ದಿನ ಎರಡೂ ಕಡೆಯ ಹಿರಿಯರು ಪರಸ್ಪರ ತಮ್ಮ ಬಳಿಗಳ ಹೆಸರು ಹೇಳಿ, ಅವು ಒಂದೇ ಅಲ್ಲ – ಎಂಬುದನ್ನು ಖಚಿತಪಡಿಸಿಕೊಂಡೇ ಮುಂದಿನ ಕಾರ್ಯಕ್ಕೆ ಅಣಿಯಾಗುತ್ತಾರೆ. 'ಬಳಿ'ಯಲ್ಲಿಯೂ ತರತಮಗಳನ್ನು ಗುರುತಿಸುವುದೂ ಇದೆ. ಜೋಗಿಗಳಲ್ಲಿ ಬಳಿಗೆ ವಲ್ಲು (ಇಲ್ಲು) ಎಂಬ, ಬ್ಯಾರಿಗಳಲ್ಲಿ ಇಲ್ಲೆ ಎಂಬ ಪದ ಬಳಕೆಯಲ್ಲಿವೆ. ಘಟ್ಟದ ಮೇಲಿನವರಲ್ಲಿ ಬಳಿಗೆ ಬದಲು ಬೆಡಗು ಎಂಬ ಪರಿಭಾಷೆ ಚಾಲ್ತಿಯಲ್ಲಿದ್ದು, ಇಲ್ಲಿಯೂ ಒಂದೇ ಬೆಡಗಿನಲ್ಲಿ ವಿವಾಹ ಸಂಬಂಧ ಆಗುವಂತಿಲ್ಲ ಎಂಬ ಅಭಿಪ್ರಾಯಗಳಿವೆ. ಕೆಲವೊಮ್ಮೆ ಒಂದೇ ದೇವರ ಒಕ್ಕಲು ಆದವರು ತಾವು ಪರಸ್ಪರ ಸೋದರರಾಗುತ್ತೇವೆ ಎಂಬ ಕಾರಣಕ್ಕೆ ವಿವಾಹ ಮಾಡಿಕೊಳ್ಳದ್ದೂ ಉಂಟು. ಸಗೋತ್ರ ವಿವಾಹ ವೈದಿಕರಲ್ಲಿಯೂ ನಿಷಿದ್ಧವಾಗಿದೆ. ಬಂಟರು, ಮೊಗವೀರರು ಮೊದಲಾದವರಲ್ಲಿ ಬಳಿಗಳು ಇರುವಂತೆ ಬ್ಯಾರಿಗಳಲ್ಲಿ ಅಂಜಿಲ್ಲೆಕ್ಕಾರ್, ಮಾಪುಲತ್ತಿಲ್ಲಕ್ಕಾರ್, ಸುಲ್ತಾನ್ ಬೆಲಿಯೆ ಇಲ್ಲೆತ್ತಾರ್, ಪಾಟಿಲ್ಲೆತ್ಕಾರ್, ಕೈಸೆರೆ ಕೂಟತ್ತಿಲ್ಲೆಕ್ಕಾರ್, ಕೊಡಂಕಾರ್ ಇಲ್ಲೆಕ್ಕಾರ್ ಮೊದಲಾದ ಇಲ್ಲೆಗಳು ಬಳಕೆಯಲ್ಲಿದ್ದು, ಒಂದೇ ಇಲ್ಲೆಯಲ್ಲಿ ವಿವಾಹ ಸಂಬಂಧ ನಿಷಿದ್ಧವಾಗಿದೆ.

**ಸೋದರಮಾವ :** ಕುಟುಂಬದ ಕೆಲವೊಂದು ವ್ಯವಹಾರಗಳಲ್ಲಿ ಸೋದರಮಾವನಿಗೆ ನೀಡುವ ಆದ್ಯತೆಯು ಮಾತೃಪ್ರಧಾನ ಕುಟುಂಬ ಪದ್ಧತಿಯ ಧ್ಯೋತಕವಾಗುತ್ತದೆ. ತುಳು ನಾಡಿನ ಬಹಳಷ್ಟು ಸಮುದಾಯಗಳಲ್ಲಿ ಈಗಲೂ ಸೋದರಮಾವನು ಅಂತಹ ಪ್ರಾಮುಖ್ಯತೆ ಪಡೆದಿರುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಮಾದರಿಗಾಗಿ ಇಲ್ಲಿ ಕೆಲವನ್ನು ಉಲ್ಲೇಖಿಸಿದೆ:

ಬೇರೆ ಗಂಡಿನೊಡನೆ ವಿವಾಹ ನಿಶ್ಚಿತವಾದಾಗ ವಧುವಿನ ತಂದೆಯು ಆಕೆಯೊಡನೆ ಆಕೆಯ ಸೋದರಮಾವನ ಮನೆಗೆ ಹೋಗಿ, ವಿಷಯ ತಿಳಿಸಿ, ಆತನ ಒಪ್ಪಿಗೆ ಪಡೆದುಬರುವ ನಡವಳಿಕೆ ವಿಶ್ವಕರ್ಮರಲ್ಲಿದೆ. ಮ್ಯಾಲರಲ್ಲಿ ಧಾರೆಯ ಸಂದರ್ಭದಲ್ಲಿ ಅಕ್ಕಿ ಮುಡಿಯ ಮೇಲೆ ವರನನ್ನು ಕುಳ್ಳಿರಿಸಿ, ವಧುವನ್ನು ಧಾರೆ ಎರೆದುಕೊಡುವ ಕಾರ್ಯವನ್ನು ಸೋದರಮಾವ ಮಾಡಬೇಕಾಗುತ್ತದೆ. ಕೆಲವೆಡೆ ಈ ಸೋದರಮಾವನೇ ವರನ ಪರವಾಗಿ ಆಕೆಗೆ ತಾಳಿ ಕಟ್ಟುವುದೂ ನಡೆಯುತ್ತದೆ(ಕರಾವಳಿ ಜಾನಪದ, ಪು. ೧೪೧). ವಿಶ್ವಕರ್ಮರು, ಮ್ಯಾಲರು ಮೊದಲಾದವರಲ್ಲಿ ಹುಡುಗಿ ಮೈನೆರೆದಾಗ ಸೋದರ ಮಾವನು ನೆನ್ನೆಕ್ಕಿ, ಪುಂಡಿ ಅಥವಾ ಮಣ್ಣಿಯಂತಹ ವಿಶೇಷ ಆಹಾರವನ್ನು ಆಕೆಗೆ ತಂದು ತಿನ್ನಿಸುತ್ತಾನೆ ಅಥವಾ ಆಕೆಯನ್ನು ತನ್ನ ಮನೆಗೆ ಕರೆದೊಯ್ದು, ಕೆಲವು ದಿನ ಇರಿಸಿಕೊಂಡು ವಿಶೇಷ ಊಟೋಪಚಾರಗಳನ್ನು ಮಾಡಿಸುತ್ತಾನೆ. ಸೋದರಮಾವನು ವಧುವನ್ನು ಎತ್ತಿಕೊಂಡು ತಂದು ಧಾರೆಮಂಟಪದಲ್ಲಿ ಕೂರಿಸುವ ಪದ್ಧತಿಯೂ ಕೆಲವರಲ್ಲಿ ಇದೆ. ಇಷ್ಟಾಗಿಯೂ, ಸೋದರಮಾವನು ಆಕೆಯನ್ನು ವಿವಾಹವಾಗುವುದು ನಿಷಿದ್ಧವಾಗಿರುತ್ತದೆ. ಏಕೆಂದರೆ ಆತನು ತಂದೆಗೆ ಸಮಾನನಾಗಿದ್ದು, ಕುಟುಂಬದಲ್ಲಿ ತಂದೆಯ ನಂತರದ ಸ್ಥಾನ ಗೌರವಗಳನ್ನು ಪಡೆಯುತ್ತಾನೆ. ಪಿತೃ ಪ್ರಧಾನ ಸಮಾಜದಲ್ಲಿಯೂ ಸೋದರಮಾವನಿಗೆ ಕೆಲವು ವಿಶೇಷ ಸ್ಥಾನ-ಕರ್ತವ್ಯಗಳು ಮೀಸಲಾಗಿದ್ದರೂ ಅಲ್ಲಿ ಆತನು ತನ್ನ ಸೋದರಿಯ ಮಗಳನ್ನು ವಿವಾಹವಾಗುವ ಅವಕಾಶವಿರುತ್ತದೆ.

**ಜಾತಿಯ ಒಳಾಡಳಿತ ಪದ್ಧತಿ:** ಸ್ವಾತಂತ್ರ್ಯ ಪೂರ್ವದಲ್ಲಿ ಎಲ್ಲಾ ಜಾತಿ ಸಮುದಾಯಗಳೂ ತಮ್ಮವೇ ಆದ ಒಳಾಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದು, ಅದಕ್ಕೆ ಬದ್ಧವಾಗಿಯೇ ನಡೆಯುತ್ತಿದ್ದವು. ಅದರಲ್ಲಿ ಕುಲದ ಮುಖ್ಯಸ್ಥ ಊರಿನ ಗುರಿಕಾರ ಅಥವಾ ಗುತ್ತಿನವ ಆ ಸಮುದಾಯದ ಯಜಮಾನನೂ ಆಗಿದ್ದು, ಅವನು ಬಹುಮಟ್ಟಿಗೆ ಅವರ ಎಲ್ಲಾ ಧಾರ್ಮಿಕ, ಸಾಮಾಜಿಕ ನಡವಳಿಕೆಗಳ ಆಡಳಿತಾತ್ಮಕ ಹೊಣೆ ಹೊತ್ತಿರುತ್ತಿದ್ದನು. ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಈ ಹುದ್ದೆ ಬರುತ್ತಿದ್ದು, ಆತನ ಮಾತೇ ಅಂತಿಮವಾಗಿರುತ್ತಿದ್ದಿತು. ಆಡಳಿತದಲ್ಲಿ ಈತನಿಗೆ ನೆರವಾಗಲು ಬೇರೆ ಹುದ್ದೆಯವರೂ ಇರುತ್ತಿದ್ದರು. ಮ್ಯಾಲರಲ್ಲಿ ಈ ಯಜಮಾನನಿಗೆ ಮುಕಾರಿ (ಮುಕಾರ್ವೆ) ಎಂಬ ಹೆಸರಿದ್ದರೆ, ಅವನ ಸಹಾಯಕನಿಗೆ ಮೂಂಡಿಕೆರೆ ಎಬ ಹೆಸರಿದೆ. ಜೋಗಿಗಳಲ್ಲಿ ಮುಖ್ಯಸ್ಥನನ್ನು ಯಜಮಾನ ಎಂದರೆ, ಆತನ ಸಹಾಯಕರನ್ನು ಬುದ್ಧಿವಂತರೆನ್ನುತ್ತಾರೆ. ಬುದ್ಧಿವಂತರ ಸಹಾಯಕ್ಕೆ ಕೋಲ್ಕಾರರಿರುತ್ತಾರೆ. ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಿಗೂ ತಮ್ಮದೇ ಆದ ಗುರುಮಠವಿದ್ದು, ಅಲ್ಲಿನ ಗುರು ಸರ್ವೋನ್ನತ ಅಧಿಕಾರ ಹೊಂದಿದವನಾಗಿರುತ್ತಾನೆ. ಒಂದು ಕಾಲಕ್ಕೆ ಬಹು ವ್ಯವಸ್ಥಿತವಾಗಿದ್ದ ಈ ಪದ್ಧತಿ ಪ್ರಜಾಪ್ರಭುತ್ವದ ಪರಿಣಾಮವಾಗಿ ಈಚೆಗೆ ಬಹಳ ಕಡೆ ಶಿಥಿಲವಾಗಿದೆ. ಆದರೆ, ತೀರಾ ಕೆಲವು ಜಾತಿಗಳಲ್ಲಿ ಇದರ ಪಳೆಯುಳಿಕೆಗಳು ಈಗಲೂ ಸ್ವಲ್ಪ ಮಟ್ಟಿಗೆ ಕಾಣಬರುತ್ತವೆ. ಜಾತಿಯ ಅತಿ ಬಿಗಿಯಾದ ಕಟ್ಟುಪಾಡುಗಳು ಮೊಗವೀರರಲ್ಲಿ ಈಗಲೂ ಉಳಿದಿವೆ.

## ಜನನ ಮತ್ತು ನಾಮಕರಣ

ಜನನ, ಋತುಮತಿಯಾಗುವುದು ಹಾಗೂ ಮರಣ ಸಂದರ್ಭಗಳನ್ನು ಬಹುಮುಖ್ಯವಾದ ಮೈಲಿಗೆ ಎಂದು ಸಾಮಾನ್ಯವಾಗಿ ಎಲ್ಲಾ ಜನಸಮುದಾಯಗಳೂ ಭಾವಿಸುತ್ತವೆ ಹಾಗೂ ಅದನ್ನು ನಿಗದಿತ ವಿಧಿಗಳ ಮೂಲಕ ಕಳೆದುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಕ್ಷೌರಿಕ, ಮಡಿವಾಳ ಹಾಗೂ ಪುರೋಹಿತರು ಲೌಕಿಕ ಹಾಗೂ ಅಲೌಕಿಕ ನೆಲೆಯಲ್ಲಿ ಶುದ್ಧಿ ಕ್ರಿಯೆ ಮಾಡುವ ಸಾಮರ್ಥ್ಯ ಉಳ್ಳವರೆಂದು ನಂಬಿರುವುದರಿಂದ ಹೆಚ್ಚಿನ ಜನ ಸಮುದಾಯಗಳು ಈ ಸಂಬಂಧದ ಶಾಸ್ತ್ರಾಚರಣೆಗಳಲ್ಲಿ ಇವರ ಭಾಗವಹಿಸುವಿಕೆಗೆ ಆದ್ಯತೆ ನೀಡುತ್ತಾರೆ. ಈ ವಿಧಿಕ್ರಿಯೆಗಳು ಪ್ರಾದೇಶಿಕವಾಗಿ ಭಿನ್ನವಾಗಿರುತ್ತವೆ. ತುಳುನಾಡಿನಲ್ಲಿ ರೂಢಿಯಲ್ಲಿರುವ ಇಂತಹ ಕೆಲವು ಸಂಪ್ರದಾಯಗಳ ಬಗೆಗೆ ಇಲ್ಲಿ ಪ್ರಸ್ತಾಪಿಸಲಾಗಿದೆ.

ತುಳುನಾಡಿನ ಜೈನರು ಸಾಮಾನ್ಯವಾಗಿ ಮಗು ಜನಿಸಿದ ೧೬ನೇ ದಿನಕ್ಕೆ ನಾಮಕರಣ ಶಾಸ್ತ್ರ ಮಾಡುತ್ತಾರೆ. ಜೈನ ಪುರೋಹಿತರು (ಇಂದ್ರರು) ತೊಟ್ಟಿಲು ಪೂಜೆ, ಹೋಮಹವನಾದಿಗಳನ್ನು ಮಾಡಿ, ಬಳಿಕ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ; ಶಿಶುವಿನ ಕೈಯಲ್ಲಿ ಬೆಳ್ಳಿ ನಾಣ್ಯ ಇರಿಸುತ್ತಾರೆ. ಕಿವಿಯಲ್ಲಿ ಮಗುವಿನ ಹೆಸರನ್ನು ಹೇಳಿ, ಮುತ್ತೈದೆಯರು ಜೋಗುಳ ಹಾಡುತ್ತಾರೆ. ಮನೆಯಲ್ಲಿ ಮಗು ಜನಿಸಿದಾಗಿನಿಂದ ೧೬ ದಿನಗಳವರೆಗೆ ತಮ್ಮ ಕುಟುಂಬಕ್ಕೆ ಸೂತಕವೆಂದು ಭಾವಿಸುವ ಗೌಡ ಸಮುದಾಯದವರು ಅವರೆಗೆ ದೇವಸ್ಥಾನಗಳಲ್ಲಿ ಪೂಜೆ

ಮಾಡಿಸುವುದಾಗಲೀ, ಶುಭಕಾರ್ಯಗಳನ್ನು ಮಾಡುವುದಾಗಲೀ ನಿಷಿದ್ಧವಾಗಿರುತ್ತದೆ. ಈ ನಡುವೆ, ಏಳನೆಯ ದಿನ ಮಡಿವಾಳಗಿತ್ತಿಯು ತಾಯಿ–ಮಗುವಿಗೆ ಸ್ನಾನ ಮಾಡಿಸಿ ಅಮೆ ತೆಗೆಯುತ್ತಾರೆ. ಊರ ದೇವಾಲಯದಿಂದ ತೀರ್ಥ ತಂದು ಮನೆಯ ಎಲ್ಲಾ ಭಾಗಗಳಿಗೂ, ಕುಟುಂಬದ ಸದಸ್ಯರಿಗೂ ಚಿಮುಕಿಸುವುದು ಒಂದು ಶುದ್ಧಿ ಕ್ರಿಯೆ ಎಂದು ನಂಬಲಾಗುತ್ತದೆ. ಹದಿನಾರನೇ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಅಂದು ಮನೆಯವರೆಲ್ಲಾ ಸ್ನಾನ–ಮಡಿ ಮಾಡುತ್ತಾರೆ. ಕುಟುಂಬದ ಹಿರಿಯ ಮಹಿಳೆಯು ಮಗುವಿಗೆ ಹೊಸ ಬಟ್ಟೆ ಹಾಕಿ, ತನ್ನ ಮಡಿಲಲ್ಲಿ ಮಲಗಿಸಿಕೊಂಡು, ಮನೆಯ ಪವಿತ್ರ ಸ್ಥಳವಾದ ನೆಲ್ಲಕ್ಕಿಯ ಅಡಿ ಕುಳಿತು, ಅಲ್ಲಿ, ಮೊಸರಿನೊಂದಿಗೆ ನುಣ್ಣಗೆ ಕಿವುಚಿ ಕಲೆಸಿದ ಅನ್ನವನ್ನು ಮಗುವಿನ ಬಾಯಿಗೆ ಉಣಿಸುತ್ತಾಳೆ. ಬಳಿಕ, ಇತರರೂ ಮಗುವಿಗೆ ಹಾಗೆ ಅನ್ನ ಉಣಿಸಿದ ಶಾಸ್ತ್ರ ಮಾಡಿದ ಮೇಲೆ, ಮಗುವನ್ನು ಪೂರ್ವಕ್ಕೆ ತಲೆ ಇರುವಂತೆ ತೊಟ್ಟಿಲಿಗೆ ಹಾಕುತ್ತಾರೆ; ನಾಮಕರಣ ಮಾಡುತ್ತಾರೆ. ೪೦ ದಿನಕ್ಕೆ ಶುಚಿಭೂರ್ತಳಾಗಿ ಬಾಣಂತಿಯು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುತ್ತಾಳೆ. ಗಂಗಾಪೂಜೆ ಮಾಡಿ, ಮುತ್ತೈದೆಯರು ಅಲ್ಲಿಂದ ನೀರು ತಂದು ನೆಲ್ಲಕ್ಕಿಯಡಿ ಇಡುತ್ತಾರೆ. ಬಾಣಂತಿಯು ಮನೆಯಲ್ಲಿ ಮನೆ ದೇವರಿಗೂ, ಹಿರಿಯರಿಗೂ ನಮಸ್ಕರಿಸುತ್ತಾಳೆ. ಈ ಎಲ್ಲಾ ಶಾಸ್ತ್ರಗಳು ಆದ ಮೇಲೆ ಒಂದು ದಿನ ಗಂಡನ ಮನೆಯವರು ಮುತ್ತೈದೆಯರೊಂದಿಗೆ ಬಂದು ತಾಯಿ, ಮಗುವನ್ನು ತಮ್ಮ ಮನೆಗೆ ಕರೆದೊಯ್ಯುತ್ತಾರೆ. ಹಾಗೆ ಮನೆಗೆ ಬಂದಾಗ, ಅವರನ್ನು ಮುಂಬಾಗಿಲ ಬಳಿ ನಿಲ್ಲಿಸಿ,ಕುರ್ದಿ(ಓಕುಳಿ) ನೀರಿನಿಂದ ತಾಯಿ–ಮಗುವಿನ ದೃಷ್ಟಿ ಇಳೆ ತೆಗೆಯುತ್ತಾರೆ. ಅತ್ತೆ–ಮಾವ ಮಗವನ್ನು ಎತ್ತಿಕೊಂಡು ಬಂದು ತೊಟ್ಟಿಲಲ್ಲಿ ಮಲಗಿಸಿದ ಮೇಲೆ ತಾಯಿಯು ಆ ಹಿರಿಯರಿಗೆ ನಮಸ್ಕರಿಸುವುದೂ ಒಂದು ನಡವಳಿಕೆಯಾಗಿದೆ.

ಕೊರಗರು ನಾಮಕರಣದಂದು ಕತ್ತಲಾದ ಮೇಲೆ ತಾಯಿ, ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸುತ್ತಾರೆ; ಕಾಡಿಗೆ ಹಚ್ಚಿಕೊಳ್ಳುತ್ತಾರೆ. ಬಳಿಕ ಮಂಜ ಇಡುವ ಆಚರಣೆ ಮಾಡುತ್ತಾರೆ. ಅಂದರೆ, ಮನೆಯ ಹೊರಗೆ ದೇವರ ಕಲ್ಲಿನ ಮುಂದೆ ಕೊಡಿ ಬಾಳೆ ಎಲೆಯ ಮೇಲೆ ವೀಳ್ಯದೆಲೆ, ಅಡಕೆ, ತೆಂಗಿನಕಾಯಿ ಇಡುತ್ತಾರೆ. ಕಾಯಿ ಒಡೆದು, ಅದರ ಒಂದು ಹೋಳನ್ನು ಮನೆಯ ಒಳಗೆ ತರುತ್ತಾ ಬೇರೆ ಬಳಿಯ ಗಂಡಸರು, ಮಕ್ಕಳು ಮಗುವಿಗೆ ಇಡುವ ಹೆಸರನ್ನು ಮೊದಲು ಕರೆಯುತ್ತಾರೆ ಮತ್ತು ತಾಯ ಮಡಿಲಿಂದ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ನಾಮಕರಣ ಶಾಸ್ತ್ರದಂದು ಬಂಧುಗಳಲ್ಲದೆ, ಆ ಬಳಿಯ ಗುರ್ಕಾರನೂ ಅಲ್ಲಿ ಸೇರಿರುತ್ತಾನೆ. ಮಲೆಕುಡಿಯರಲ್ಲಿ ನವಜಾತ ಶಿಶುವನ್ನು ಸ್ನಾನ ಮಾಡಿಸಿ, ಬಟ್ಟೆ ಹೊದಿಸಿ, ಮುಚ್ಚಿರೆ ಮರದ ಎಲೆ ಅಥವಾ ಅಡಕೆ ಹಾಳೆಯಲ್ಲಿ ಮಲಗಿಸುತ್ತಾರೆ.

ವಿಶ್ವಕರ್ಮರಲ್ಲಿ ಹೆಣ್ಣು ಮಗುವಾದರೆ ೧೧ನೇ ದಿನ, ಗಂಡುಮಗುವಾದರೆ ೧೨ನೇ ದಿನಕ್ಕೆ ಅಮೆ ಕಳೆವ ಶಾಸ್ತ್ರ ಮಾಡುತ್ತಾರೆ. ಅಂದು ಎಲ್ಲರೂ ಸ್ನಾನ–ಮಡಿ ಮಾಡುತ್ತಾರೆ. ಬಾಣಂತಿಯು ಹೊಸ ಉಡುಪು ಧರಿಸುತ್ತಾಳೆ. ಪುರೋಹಿತರು ಪುಣ್ಯಾಹ ಕಾರ್ಯ ಮಾಡುತ್ತಾರೆ. ಮಗುವಿನ ಮಾಸನಾಮ, ನಕ್ಷತ್ರನಾಮ ಹಾಗೂ ಕರೆಯುವ ಹೆಸರನ್ನು ಬೆಳ್ತಿಗೆ ಅಕ್ಕಿ ಮೇಲೆ ಸುವರ್ಣ ಕಡ್ಡಿಯಿಂದ (ಹಳದಿಬೇರು) ಬರೆದು ಬಳಿಕ, ತಂದೆಯು ಮಗುವಿನ ಕಿವಿಯಲ್ಲಿ ಹೆಸರನ್ನು ಹೇಳುತ್ತಾನೆ. ಅಂದು ಶಿಶುವಿನ ಆರೋಗ್ಯದ ದೃಷ್ಟಿಯಿಂದ ಬಜೆಯನ್ನು ಜೇನಿನಲ್ಲಿ ತೇಯ್ದು, ಅದನ್ನು ಚಿನ್ನದ ತುಂಡಿನಿಂದ ಮಗುವಿನ ನಾಲಗೆಗೆ ಹಚ್ಚುತ್ತಾರೆ. ಮಗುವಿನ ಸೊಂಟಕ್ಕೆ ಎಕ್ಕದ ದಂಟಿನ ನಾರನ್ನು ಚಿನ್ನದ ಚೂರಿನೊಂದಿಗೆ ಕಟ್ಟುವುದೂ ಉಂಟು. ಹೀಗೆ, ಕಟಿಸೂತ್ರಧಾರಣೆ, ಜಾತಕರ್ಮ, ಆರತಿ ಇತ್ಯಾದಿ ನಡೆದು ಸಿಂಗರಿಸಿದ ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ, ಜೋಗುಳ ಹಾಡುತ್ತಾರೆ. ಅಂದು ಎಲ್ಲರಿಗೂ ಸಿಹಿಯೂಟವಿರುತ್ತದೆ.

ಶಾಲಿಯಾ ಸಮುದಾಯದವರಲ್ಲಿ ಮಗು ಹುಟ್ಟಿದ ನಾಲ್ಕನೇ ದಿನ 'ನಾಲಾಂಮಾಟ್' (ನಾಲ್ಕನೇ ಶುದ್ಧ) ಹಾಗೂ ೧೬ ದಿನ 'ಬಾಲಾಯ್ಮ' ಎಂಬ ಅಮೆ ಆಚರಣೆಗಳನ್ನು ನಡೆಸುತ್ತಾರೆ. ೧೬ನೇ ದಿನ ಮಡಿವಾಳ್ತಿ ಕೊಡುವ ಮಡಿವಸ್ತ್ರವನ್ನು ಧರಿಸಿ ಶುದ್ಧವಾಗುವ ಪದ್ಧತಿಯಿದೆ. ೧೯ ಅಥವಾ ೨೮ನೇ ದಿನ ನಾಮಕರಣ ಶಾಸ್ತ್ರ ಮಾಡುತ್ತಾರೆ. ಅಂದು ಹಲಸಿನ ಎಲೆಯ ಚಮಚದಿಂದ ಚಿನ್ನದ ತುಂಡೊಂದನ್ನು ಹಾಕಿದ ಬಟ್ಟಲಿನಲ್ಲಿರುವ ಹಾಲನ್ನು ಆ ಮಗುವಿಗೆ ಕುಡಿಸಿ ಅಕ್ಷತೆ ಹಾಕುತ್ತಾರೆ.

ರಾಮಕ್ಷತ್ರಿಯರಲ್ಲಿ ೧೨ನೇ ದಿನ ಪುರೋಹಿತರು ನಾಮಕರಣ ವಿಧಿ ನಡೆಸಿಕೊಡುತ್ತಾರೆ. ಸಿಂಗರಿಸಿದ ತೊಟ್ಟಿಲಲ್ಲಿ ಮಗುವನ್ನು ಮಲಗಿಸುವ ಮುನ್ನ–ಮಗುವಿನ ತಾಯಿ ಮತ್ತು ಹಿರಿಯ ಮುತ್ತೈದೆ ತೊಟ್ಟಿಲ ಇಕ್ಕೆಡೆ ನಿಂತು, ಅರಿಶಿನ ಲೇಪಿಸಿ ವಸ್ತ್ರ ಸುತ್ತಿದ ಕಲ್ಲುಗುಂಡನ್ನು ತೊಟ್ಟಿಲ ಮೇಲಿನಿಂದ ಕೊಟ್ಟು, ಅಡಿಯಿಂದ ತೆಗೆದುಕೊಳ್ಳುತ್ತಾ "ಗೋಪಾಲನ ತಕೋ", "ಗೋವಿಂದನ ಕೊಡು" ಎಂದು ಹೇಳುತ್ತಾರೆ. ಬಳಿಕ ಮಗುವನ್ನೂ ಹಾಗೆ ಮೂರು ಬಾರಿ ಕೊಟ್ಟು, ಆನಂತರ ತೊಟ್ಟಿಲಲ್ಲಿ ಮಲಗಿಸಿ ತೂಗುತ್ತಾರೆ. ರಾತ್ರಿ ಕಳಸಕ್ಕೆ ಷಷ್ಠಿ ದೇವರನ್ನಿಟ್ಟು ಸಿಂಗರಿಸಿ, ಸ್ತ್ರೀಯರು ಪುಗಡಿ ನೃತ್ಯ ಮಾಡುತ್ತಿದ್ದುದೂ ಹಿಂದೆ ರೂಢಿಯಲ್ಲಿತ್ತು.

ಮುಸ್ಲಿಮರಲ್ಲಿ ಮಗು ಹುಟ್ಟಿದಾಗ ಹೊಕ್ಕಳು ಬಳ್ಳಿ ಕತ್ತರಿಸಿ, ಮೈ ಸ್ವಚ್ಛ ಮಾಡಿದ ಮೇಲೆ ಹಿರಿಯರೊಬ್ಬರು ಮಗುವಿನ ಬಲಕಿವಿಯಲ್ಲಿ ಅಜಾನ್, ಎಡಕಿವಿಯಲ್ಲಿ ಇಕಾಮತ್ ಮಂತ್ರ ಉಚ್ಛರಿಸುತ್ತಾರೆ. ಅಲ್ಲದೆ ಮಗುವಿನ ಹೆಸರನ್ನು ಕಿವಿಯಲ್ಲಿ ಮೂರು ಮೂರು ಸಲ ಹೇಳುತ್ತಾರೆ. ಹುಟ್ಟಿದ ಏಳು ಅಥವಾ ಹದಿನೈದನೇ ದಿನದಂದು ಅಕೀಕಾ (ಕೇಶ ಮುಂಡನ ಸಂಸ್ಕಾರ) ಮತ್ತು ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡುತ್ತಾರೆ. ಮಗುವಿನ ಕೂದಲಿಗೆ ಎಣ್ಣೆ ಹಚ್ಚಿ ಆ ಕೂದಲನ್ನು ತೆಗೆದು ಬಾಳೆಎಲೆಯಲ್ಲಿ ಹಾಕುತ್ತಾರೆ. ಆ ಎಲೆಗೆ ಮಗುವಿನ ಕೈಯಿಂದಲೇ ತಾಯಿಯು ಹಣ ಹಾಕಿಸಿ, ಅದನ್ನು ಕೂದಲು ತೆಗೆದವರಿಗೆ ನೀಡುತ್ತಾರೆ. ಕೂದಲು ಇರುವ ಬಾಳೆಎಲೆಯನ್ನು ತೆಂಗಿನ ಮರಕ್ಕೆ ಕಟ್ಟುತ್ತಾರೆ ಅಥವಾ ಸಮುದ್ರಕ್ಕೆ ಎಸೆಯಲಾಗುತ್ತದೆ. ಅನುಕೂಲವಿದ್ದವರು ಅಂದು ನೆಂಟರಿಗೆ ಮಾಂಸಾಹಾರದ ಊಟ ಹಾಕುವುದೂ ಉಂಟು. ನಲವತ್ತನೇ ದಿನ ಬಾಣಂತಿಗೆ ಶಾಸ್ತ್ರೋಕ್ತವಾಗಿ ಸ್ನಾನ ಮಾಡಿಸುತ್ತಾರೆ. ಅಂದು ಆಕೆ ತಾಯಿ ಮನೆಯಿಂದ ಗಂಡನ ಮನೆಗೆ ಹೋಗುತ್ತಾಳೆ. ಸುನ್ನತ್ (ಖತ್ನಾ) ಮುಸ್ಲಿಮರ ಬಹು ಮುಖ್ಯ ಸಂಸ್ಕಾರಗಳಲ್ಲಿ ಒಂದಾಗಿದೆ. ಅಂದು ಅಕ್ಕಿಮುಡಿಯ ಮೇಲೆ ಕುಳಿತ ಸೋದರಮಾವನ ತೊಡೆಯ ಮೇಲೆ ಹುಡುಗನನ್ನು ಕುಳ್ಳಿರಿಸಿ, ಜೋರಾಗಿ ಸಲಾತ್ ಹಾಡುತ್ತಾ ವಸನ್ ಎಂಬ ವೃತ್ತಿಪರ ಅನುಭವಿಯಿಂದ ಈ 'ಖತ್ನಾ' ಕ್ರಿಯೆ ಮಾಡಲಾಗುತ್ತದೆ. ಗಾಯ ಒಣಗಿದ ಬಳಿಕ ಒಂದು ಶುಕ್ರವಾರ ಹುಡುಗನನ್ನು ಸಂಭ್ರಮದಿಂದ ಮಸೀದಿಗೆ ಕರೆದೊಯ್ಯುವ ಸಮಾರಂಭ ಮಾಡುತ್ತಾರೆ (ವಿವರಕ್ಕೆ: ಸಿರಿ ಪು.೪೩೨).

**ಪ್ರೌಢಾವಸ್ಥೆ :** ಶಾಲಿಯಾಗಳಲ್ಲಿ ಹುಡುಗ ಹಾಗೂ ಹುಡುಗಿಯು ಪ್ರೌಢಾವಸ್ಥೆಗೆ ಬರುವ ಮುನ್ನ ನಡೆಸುವ ಎರಡು ವಿಶೇಷ ಸಂಪ್ರದಾಯಗಳು ಉಲ್ಲೇಖನೀಯವಾಗಿವೆ. ಅವರಲ್ಲಿ ಹುಡುಗಿಯು ಋತುಮತಿಯಾಗುವುದಕ್ಕೆ ಮೊದಲು ಪಂದಲ್‌ಮಂಗಲಂ ಅಥವಾ ಚರಡ್‌ಕಟ್ಟಲ್ ಎಂಬ ಆಚರಣೆ ಮಾಡುತ್ತಾರೆ. ಒಂದು ಸಂಕ್ರಮಣದ ದಿನ ತಮ್ಮ ಸಮುದಾಯದ ದೇವಾಲಯದಲ್ಲಿ ಬಂಧುಗಳು ಹಾಗೂ ಆಚಾರವರ್ಗದ ಸಮ್ಮುಖದಲ್ಲಿ ಸೇರಿ ನಡೆಸುವ ಆಚರಣೆಯಲ್ಲಿ ಆಚಾರವರ್ಗದ ಹಿರಿಯವನು ಅಥವಾ ಮನೆಯ ಹಿರಿಯನು (ಮೂತೆ ಚೆಟ್ಟಿಯಾರ್) ದೇವರ ಮುಂದೆ ಇರಿಸಲಾದ ಬಿಳಿಯ ನೂಲನ್ನು ಹುಡುಗಿಯ ಕೊರಳಿಗೆ ಕಟ್ಟುತ್ತಾನೆ. ಹಾಗೂ ಐದು ವೀಳ್ಯದೆಲೆ ಮತ್ತು ಒಂದು ಅಡಕೆಯನ್ನು ಆಕೆಗೆ ಕೊಡುತ್ತಾನೆ. ಇದನ್ನು ಅಂಶ(ಪಾಲು) ನೀಡುವುದು ಎನ್ನಲಾಗುತ್ತದೆ. ಈ ಆಚರಣೆಯ ಬಳಿಕ ಆಕೆ ಹಿರಿಯ ಮಹಿಳೆಯರ ಸಾಲಿಗೆ ಸೇರಿದಂತೆ ಆಗುವುದಲ್ಲದೆ ಸಮುದಾಯದ ಕ್ಷೇತ್ರಗಳಿಂದ 'ಎಲೆಅಡಿಕೆ' ತೆಗೆದುಕೊಳ್ಳಲು ಅರ್ಹಳೆನಿಸುತ್ತಾಳೆ. ಗಂಡುಮಕ್ಕಳಿಗೆ ನಡೆಸುವ ಎಡಂಗಾಚಾರ ಅಥವಾ ವಾಲ್ಯಕಾರನಾಕಲ್ (ಯುವಕನನ್ನಾಗಿಸುವುದು) ಸಮುದಾಯದೊಳಗೆ ಹುಡುಗರಿಗೆ ಪ್ರೌಢತ್ವವನ್ನು ನೀಡುವ ಸಂಪ್ರದಾಯವಾಗಿದೆ. ೧೬ ರಿಂದ ೧೯ ವರ್ಷಗಳ ಒಳಗೆ ಈ ಸಂಸ್ಕಾರವನ್ನು ನಡೆಸುತ್ತಾರೆ. ಸಂಕ್ರಮಣದ ದಿನ ವೀಳ್ಯದೆಲೆ, ಅಡಕೆ ಹಾಗೂ ತೆಂಗಿನಕಾಯಿಯೊಂದಿಗೆ ಆ ಹುಡುಗನ ಸಹಿತವಾಗಿ ಬಂಧು ಬಾಂಧವರು ಸಮುದಾಯದ ದೇವಾಲಯದಲ್ಲಿ ಸೇರುತ್ತಾರೆ. ದೇವರಿಗೆ ಪ್ರದಕ್ಷಿಣೆ ಬಂದು ಆಚಾರವರ್ಗದ ಕೈಗೆ ಆ ಸಾಮಗ್ರಿಗಳನ್ನು ನೀಡಿ ದೇವರ ಮುಂದೆ ಇರಿಸುತ್ತಾರೆ. ಬಳಿಕ ಆ ತೆಂಗಿನಕಾಯಿಯನ್ನು ಹುಡುಗನು ಬಲಿಕಲ್ಲಿಗೆ ಒಡೆಯುತ್ತಾನೆ. ಕಾಯಿ ಒಡೆಯದೇ ಇದ್ದರೆ ಐದು ತೆಂಗಿನಕಾಯಿಯನ್ನು ತಪ್ಪೊಪ್ಪಿಗೆಯಾಗಿ ಕ್ಷೇತ್ರಕ್ಕೆ ನೀಡಬೇಕಾಗುತ್ತದೆ. ಇದು ಆದ ನಂತರ ಆತ ಕ್ಷೇತ್ರದ ಸದಸ್ಯರ ಯಾದಿಯಲ್ಲಿ ಸೇರಿಕೊಳ್ಳುತ್ತಾನೆ. ಈ ವಿಧಿಯನ್ನು ನಡೆಸದೇ ಇದ್ದರೆ ಅಂತಹ ಹುಡುಗನ ವಿವಾಹಕ್ಕೆ ಸಮುದಾಯದ ದೇವಾಲಯದಿಂದ ಅಗತ್ಯವಾದ ಸಮ್ಮತಿ ದೊರಕುವುದಿಲ್ಲ ಎಂಬ ವ್ಯವಸ್ಥೆ ಇದೆ.

ಗೌಡರಲ್ಲಿ ಋತುಮತಿಯಾದ ಹುಡುಗಿಯನ್ನು, ಮುತ್ತೈದೆಯರು ಮನೆಯ ಅಂಗಳದಲ್ಲಿ ಪೂರ್ವಾಭಿಮುಖವಾಗಿ ಕುಳ್ಳಿರಿಸುತ್ತಾರೆ. ಗರಿಕೆ ಪತ್ರೆಯಿಂದ ಎಣ್ಣೆ ತೆಗೆದುಕೊಂಡು ನೆತ್ತಿ ಹಾಗೂ ಕಾಲಿಗೆ ಹಚ್ಚಿ, ತಲೆ ಮೇಲೆ ನೀರು ಹಾಕುತ್ತಾರೆ. ಬಳಿಕ ಮಡಿಬಟ್ಟೆ ಉಡಿಸಿ, ಮನೆಯ ಹೊರ ಅಂಕಣದಲ್ಲಿ ಅಥವಾ ಕೊಟ್ಟಿಗೆಯಲ್ಲಿ ಕೂರಿಸುತ್ತಾರೆ. ಮೂರನೆಯ ದಿನ ಮಡಿವಾಳಿತಿಯು ಹುಡುಗಿಗೆ ಸ್ನಾನ ಮಾಡಿಸಿ, ಅಮೆ ತೆಗೆಯುವ ಕಾರ್ಯ ಮಾಡುತ್ತಾಳೆ. ಚೌಳು ನೀರಿನಿಂದ ಮನೆಯ ಶುದ್ಧಿ, ಪುಣ್ಯಾರ್ಚನೆ ಕಾರ್ಯಗಳೂ ನಡೆಯುತ್ತವೆ. ಬಳಿಕ ನೀರು ತುಂಬಿದ ಮಡಕೆಯಲ್ಲಿ ಒಂದು ಸೌಟು ಇರಿಸಿ, ಅದನ್ನು ಆಕೆಯ ಮೇಲೆ ಹೊರಿಸಿಕೊಂಡು ಬಂದು ಮನೆಯ ನೆಲ್ಲಕ್ಕಿಯಡಿಯಲ್ಲಿ ಇರಿಸುತ್ತಾರೆ. ಮೂರನೆಯ ದಿನ ಈ ಮಡಕೆ ಹಿಡಿಸುವ ಶಾಸ್ತ್ರವನ್ನು ಮಾಡದವರು ಹನ್ನೆರಡನೆಯ ದಿನವಾದರೂ ಮಾಡಲೇಬೇಕು. ಅಲ್ಲಿಯವರೆಗೂ ಆಕೆ ಯಾವ ಕೆಲಸ ಮಾಡುವುದೂ ನಿಷಿದ್ಧವಾಗಿರುತ್ತದೆ. ಹದಿನಾರನೇ ದಿನ ಆಕೆಯನ್ನು ಹೊಸ ವಸ್ತ್ರ ಆಭರಣಗಳಿಂದ ಅಲಂಕರಿಸಿ ತಮ್ಮ ಐನ್ ಮನೆಯ ಉಯ್ಯಾಲೆ ಅಥವಾ ನೆಲ್ಲಕ್ಕಿಯಡಿಯಲ್ಲಿ ಕುಳ್ಳಿರಿಸುತ್ತಾರೆ. ತಂದೆ–ತಾಯಿಗಳಲ್ಲದೆ ಅಂದು ಅಲ್ಲಿ ಸೇರಿದ ಬಂಧು–ಮಿತ್ರರು ಆಕೆಗೆ ಅಕ್ಷತೆ ಹಾಕಿ, ಉಡುಗೊರೆ ನೀಡುತ್ತಾರೆ. ಪ್ರತಿಯಾಗಿ ಆಕೆ ಅವರ ಕಾಲು ಹಿಡಿಯುತ್ತಾಳೆ. ಅಂದು ಎಲ್ಲರಿಗೂ ಔತಣವಿರುತ್ತದೆ.

ಹುಡುಗಿ ಋತುಮತಿಯಾದ ತಕ್ಷಣ ಯಾವುದಾದರೂ ಫಲ ಬಿಡುವ ಮರದ ಕೆಳಗೆ ಹೋಗಿ ಕುಳಿತುಕೊಳ್ಳುವುದು ಜೋಗಿಗಳಲ್ಲಿನ ಒಂದು ಸಾಂಕೇತಿಕ ವಿಧಿಯಾಗಿದೆ. ಮೈನೆರೆದ ಸುದ್ದಿಯನ್ನು ಕುಲದ ಮುಖ್ಯಸ್ಥ, ಬುದ್ಧಿವಂತ, ಕೋಲ್ಕಾರರಿಗೆ ತಿಳಿಸುವುದು, ಐದು ದಿನ ಊರವರೆಲ್ಲ ಆಕೆಗೆ ಬಗೆಬಗೆಯ ತಿಂಡಿಗಳನ್ನು ತಂದುಕೊಡುವುದು, ಕೊನೆಯ ದಿನದಂದು ಎಲ್ಲರೂ ಕಳ್ಳು ಕುಡಿದು, ಮಾಂಸದೂಟ ಉಂಡು ಸಂಭ್ರಮ ಆಚರಿಸುವುದು ಅವರ ಸಾಮೂಹಿಕ ಬದುಕಿನ ಪರಂಪರೆಯ ಕುರುಹೇ ಆಗುತ್ತದೆ. ಶಾಲಿಯಾ ಸಮುದಾಯದಲ್ಲಿ ಹುಡುಗಿಯು ಋತುಮತಿಯಾಗುವುದನ್ನು ಬಯಸ್ಸಾಯಿಕ್ಕಲ್ (ವಯಸ್ಸನ್ನು ಸೂಚಿಸುವುದು) ಎಂದು ಹೇಳಲಾಗುತ್ತದೆ. ಋತುಮತಿಯಾದ ವಿಷಯ ತಿಳಿದ ಐದು ಗೋತ್ರದ ಮಹಿಳೆಯರು ಹುಡುಗಿಯನ್ನು ಐದು ಅಥವಾ ಏಳು ಸೀಯಾಳಗಳ ಮೇಲೆ ಕೂರಿಸಿ ನಾಲ್ಕು ತಂಬಿಗೆ ಹಾಗೂ ಒಂದು ಕೊಡ ನೀರನ್ನು ಐದು ವೀಳ್ಯದೆಲೆ ಮತ್ತು ಅಡಕೆಯ ಮೂಲಕ ಆಕೆಯ ಮೇಲೆ ಹುಯ್ಯುತ್ತಾರೆ. ಬಳಿಕ ಐದು ಅಥವಾ ಏಳು ದಿನ ಆಕೆಯನ್ನು ಮನೆಯ ಹೊರಗಿನ ಗುಡಿಸಲಲ್ಲಿ ಇರಿಸಿ, ಕೊನೆಯ ದಿನ ಸ್ನಾನ ಮಾಡಿಸಿ, ಮಡಿವಾಳ್ತಿಯು ಕೊಟ್ಟ ಬಟ್ಟೆಯನ್ನು ಉಡುವ ಮೂಲಕ ಶುದ್ಧಿ ಆಚರಣೆ ಮಾಡುತ್ತಾರೆ.

ಮಲೆಕುಡಿಯರಲ್ಲಿ ಹುಡುಗಿ ಮೈನೆರೆದಂದು ಆಕೆಯನ್ನು ಸಿಪ್ಪೆ ಸುಲಿಯದ ಮೂರು ತೆಂಗಿನಕಾಯಿಗಳ ಮೇಲೆ ಕೂರಿಸಿ ಎಣ್ಣೆ ಮತ್ತು ಕುರ್ದಿ ನೀರಿನಿಂದ ಶುದ್ಧಿ ಮಾಡುವ ಆಚರಣೆ ನಡೆಸುತ್ತಾರೆ. ಈ ಕಾಯಿಗಳಲ್ಲಿ ಒಂದನ್ನು ನೆಟ್ಟು ಬೆಳೆಸುವುದು ಶುಭಸೂಚಕವೆಂದು ಭಾವಿಸುತ್ತಾರೆ. ಮೂರು ದಿನ ಆಕೆಯನ್ನು ಕೊಟ್ಟಿಗೆಯಲ್ಲಿ ಪ್ರತ್ಯೇಕ ಕೂರಿಸುತ್ತಾರೆ. ೧೨ನೇ ದಿನದಂದು ಆಕೆಗೆ ದೇಸೆ (ಸೇಸೆ) ಹಾಕುವುದು, ಬಂಧುಗಳಿಗೆ ಊಟ ಹಾಕುವುದು ಮಾಡುತ್ತಾರೆ. ವಿಶ್ವಕರ್ಮರಲ್ಲಿ ಮೈನೆರೆದಾಕೆಯನ್ನು ನಾಲ್ಕು ದಿವಸ ಪ್ರತ್ಯೇಕ ಕೋಣೆಯಲ್ಲಿರಿಸಿ ಐದನೇ ದಿನ ಮುತ್ತೈದೆಯರು ಆಕೆಗೆ ಕಲಶದ ನೀರಿನಿಂದ ಸ್ನಾನ ಮಾಡಿಸಿ, ಹೊಸ ವಸ್ತ್ರ ತೊಡಿಸುತ್ತಿದ್ದರು. ಆಕೆ ತೆಂಗು, ಹಲಸು ಮೊದಲಾದ ಮರಗಳಿಗೆ ನೀರು ಉಯ್ದು, ನಮಸ್ಕರಿಸಿ, ಅಡುಗೆ ಕೋಣೆಗೆ ಬಂದು, ಅಲ್ಲಿನ ಮಡಕೆ ಕುಡಿಕೆಗಳಿಗೂ ನಮಸ್ಕರಿಸುತ್ತಿದ್ದಳು. ಊಟವಾದ ಬಳಿಕ ಸೋದರ ಮಾವ ಆಕೆಯನ್ನು ತನ್ನೊಂದಿಗೆ ಮನೆಗೆ ಕರೆದೊಯ್ಯುತ್ತಿದ್ದ. ಅಲ್ಲಿ ಆಕೆಗೆ ತೆಂಗಿನಕಾಯಿಗಂಜಿ, ಕೊತ್ತಂಬರಿ ಗಂಜಿ, ಮಣ್ಣಿ (ಅಕ್ಕಿಯ ಒಂದು ತಿಂಡಿ) ಮತ್ತಿತರ ವಿಶೇಷ ತಿಂಡಿಗಳನ್ನು ಮಾಡಿಕೊಡುತ್ತಿದ್ದರು. ಒಂದು ವಾರದ ಬಳಿಕ ಆಕೆ ಮನೆಗೆ ಹಿಂದಿರುಗುತ್ತಿದ್ದಳು. ಇದು ಹಿಂದಿನ ಕಾಲದಲ್ಲಿ ನಡೆಯುತ್ತಿದ್ದ ಪದ್ಧತಿ. ಇದನ್ನು ಆಗ "ಮದುಮಗಳ ಮದುವೆ" ಎಂದು ಕರೆಯುತ್ತಿದ್ದರು. ಈಗ ಈ ಪದ್ಧತಿಗಳು ಬದಲಾಗಿವೆ

ಮುಸ್ಲಿಮರಲ್ಲಿ ಮೈನೆರೆದ ಹುಡುಗಿ ಏಳುದಿನ ಹೊರಗೆ ಓಡಾಡುವಂತಿಲ್ಲ. ಏಳನೆಯ ದಿನ ಆಕೆಗೆ ಕ್ರಮಬದ್ಧವಾಗಿ ಸ್ನಾನ ಮಾಡಿಸಿ, ಒಡವೆ, ವಸ್ತ್ರಗಳಿಂದ ಅಲಂಕರಿಸಿ ಬಂಧುಗಳಿಗೆ ವಿಶೇಷ ಔತಣವನ್ನು ಮಾಡಿಸುತ್ತಾರೆ.

**ಸೀಮಂತ:** ಗರ್ಭಿಣಿಯನ್ನು ಹೆರಿಗೆಗಾಗಿ ತವರಿಗೆ ಕರೆದೊಯ್ಯುವ ಮುನ್ನ ಗಂಡನ ಮನೆಯಲ್ಲಿ ಆಕೆಗೆ ಬಯಕೆ ಶಾಸ್ತ್ರ ಮಾಡುವುದು ಎಲ್ಲಾ ಸಮುದಾಯಗಳಲ್ಲಿಯೂ ಇರುವ ಸಾಮಾನ್ಯ ಸಂಪ್ರದಾಯವಾಗಿದೆ. ಆದರೆ, ಇದರ ಆಚರಣಾ ನಡವಳಿಕೆಗಳು ಜಾತಿಯಿಂದ ಜಾತಿಗೆ ಕೆಲವೊಮ್ಮೆ ಹೇಗೆ ವಿಭಿನ್ನವಾಗಬಹುದು ಎಂಬುದಕ್ಕೆ ಈ ಮುಂದಿನ ಮಾದರಿಗಳನ್ನು ಗಮನಿಸಬಹುದಾಗಿದೆ.

ಕೊರಗರಲ್ಲಿ ಚೊಚ್ಚಲ ಬಸಿರಿಗೆ ಏಳನೇ ತಿಂಗಳಿಗೆ ಗಂಡನ ಮನೆಯಲ್ಲಿ ಬಯಕೆ ಶಾಸ್ತ್ರ ಮಾಡುತ್ತಾರೆ. ಅಂದು ಆಕೆಯನ್ನು ಅಲಂಕರಿಸಿ ಪೂರ್ವಕ್ಕೆ ಎದಿರು ಕುಳ್ಳಿರಿಸಿ, ಬಾಳೆಎಲೆ ತುಂಬಾ ಕಜ್ಜಾಯ ಬಡಿಸುತ್ತಾರೆ (ಆಕೆ ತಿಂದು ಉಳಿದುದನ್ನು ತೌರಿಗೆ ತೆಗೆದುಕೊಂಡು ಹೋಗುತ್ತಾಳೆ). ಬೇಯಿಸಿದ ಮೊಟ್ಟೆ ಹಾಗೂ ನುಗ್ಗೆಸೊಪ್ಪಿನ ಪಲ್ಯ, ಮೀನಿನ ಪದಾರ್ಥಗಳು ಅಂದಿನ ವಿಶೇಷ ಊಟದಲ್ಲಿ ಬಳಕೆಯಾಗುತ್ತವೆ. ಇದೆಲ್ಲಾ ಆಗಿ, ತೌರಿಗೆ ಹೊರಡುವಾಗ ಅಂಗಳದಲ್ಲಿ ಕರಿಮೆಣಸು, ಜೀರಿಗೆ, ಬೆಳ್ಳುಳ್ಳಿಗಳನ್ನು (ತಲಾ ಸುಮಾರು ಅರ್ಧ ಸೇರಿನಂತೆ) ಆಕೆಯ ಸೆರಗಿನಲ್ಲಿ ಹಾಕುತ್ತಾರೆ. ಹೀಗೆ ತಾತಾಯಿ ಮುಂಚಿ – ಎಂದು ಕೊಟ್ಟ ಮೇಲೆ ಆಕೆ ಗಂಡನ ಮನೆಯ ಕಡೆ ತಿರುಗಿ ನೋಡದಂತೆ ತವರುಮನೆ ಕಡೆ ಹೋಗಬೇಕೆಂಬ ನಂಬಿಕೆ ಇದೆ. ಶಾಲಿಯಾಗಳಲ್ಲಿ ಗರ್ಭಿಣಿಗೆ ಏಳನೇ ತಿಂಗಳಲ್ಲಿ ಪುಳಿಕುಡಿ ಎಂಬ ಶಾಸ್ತ್ರ ಮಾಡುತ್ತಾರೆ. ಅಂದು ತುಳಸಿಕಟ್ಟೆಯಲ್ಲಿ ಆಕೆಯ ಗಂಡ ಒಂದು ಹುಳೀ ಮರದ ಗೆಲ್ಲನ್ನು ನೆಟ್ಟು ಅದಕ್ಕೆ ಕಬ್ಬಿಣದ ಉಂಗುರವನ್ನು ಸಿಕ್ಕಿಸುತ್ತಾನೆ. ಅದರ ಮುಂದೆ ಪೂರ್ವಾಭಿಮುಖವಾಗಿ ಕುಳಿತ ಗರ್ಭಿಣಿಯ ಎದಿರು ಹಣತೆ ಇಟ್ಟು ತಟ್ಟೆಯಲ್ಲಿ ಹುಳಿರಸ ಮಿಶ್ರಿತ ಹಾಲನ್ನು ಇಡಲಾಗುತ್ತದೆ. ಹಿರಿಯ ಮಹಿಳೆಯರು ಆಕೆಗೆ ಅದನ್ನು ಕುಡಿಸುತ್ತಾರೆ. ಬಳಿಕ ಆಕೆಯನ್ನು ಸಣ್ಣ ಹುಡುಗನೊಂದಿಗೆ ಕೂರಿಸಿ ಸಿಹಿ ತಿಂಡಿ ಬಡಿಸುತ್ತಾರೆ.

**ವಿವಾಹ**

ತುಳುನಾಡಿನ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಅನನ್ಯತೆಗಳನ್ನು ಅರ್ಥಮಾಡಿಕೊಳ್ಳಲು ಅಲ್ಲಿನ ವಿವಿಧ ಸಮುದಾಯಗಳಲ್ಲಿನ ವಿವಾಹಾಚರಣೆಗಳನ್ನೂ ಅಧ್ಯಯನ ಮಾಡಬೇಕಾಗುತ್ತದೆ. ಇತರೆಡೆಯಂತೆ ಇಲ್ಲಿನವರೂ ವಿವಾಹವೆಂಬುದು ಜೀವನಾವರ್ತನದ ಒಂದು ಮಂಗಳಕಾರ್ಯವೆಂದೂ, ವ್ಯಕ್ತಿಯ ಬದುಕಿನ ಬಹು ಮುಖ್ಯ ಘಟ್ಟವೆಂದೂ ನಂಬಿದ್ದಾರೆ. ಅದಕ್ಕನುಗುಣವಾಗಿ ಅವರ ವಿವಾಹ ವಿಧಿಗಳಲ್ಲಿ ಫಲಸಮೃದ್ಧಿ ಆಶಯದ ಅನೇಕ ಸಾಂಕೇತಿಕ ಆಚರಣೆಗಳು, ನಂಬಿಕೆ, ನಿಷೇಧಗಳು ರೂಢಿಯಲ್ಲಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿನ ವಿವಾಹ ಸಂಪ್ರದಾಯದ ಕೆಲಮಾದರಿಗಳ ಸ್ಥೂಲ ಪರಿಚಯ ಮಾಡಿಕೊಡಲಾಗಿದೆ:

ತಮ್ಮ ಪರಿಚಿತ ಸಂಬಂಧದಲ್ಲಿಯೇ ನೆಂಟಸ್ತಿಕೆ ಮಾಡಲು ಅಪೇಕ್ಷಿಸುವುದು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸಮುದಾಯಗಳಲ್ಲಿಯೂ ಸಾಮಾನ್ಯವಾಗಿದ್ದಿತು. ಅದು ಆಗದಾಗ ಮಧ್ಯವರ್ತಿ ಅಥವಾ ಪರಿಚಿತರ ಮೂಲಕ ತಮಗೆ ಸೂಕ್ತವಾಗಬಹುದಾದ ಕನ್ಯೆಯನ್ನು ಅನ್ಯ ಊರ ಸಜಾತಿ ಕುಟುಂಬದಲ್ಲಿ ಗುರುತಿಸುತ್ತಾರೆ. ಹುಡುಗನ ತಂದೆ, ತಾಯಿ ಹುಡುಗಿಯನ್ನು ಒಪ್ಪಿದ ಮೇಲೆ ಹುಡುಗನೂ ಹೋಗಿ ನೋಡುತ್ತಾನೆ. ಆ ಬಳಿಕ ಹುಡುಗಿಯ ಮನೆಯವರೂ ಹುಡುಗನ ಮನೆ ನೋಡಲು ನಿಗದಿಯಾದ ದಿನ ಮೂವರು ಗಂಡಸರು, ಇಬ್ಬರು ಮುತ್ತೈದೆಯರೊಂದಿಗೆ ಹೋಗುತ್ತಾರೆ. ದೇವಸ್ಥಾನದಲ್ಲಿ ಹೂ ತೆಗೆಸುವುದು, ಗಣ ಕೂಟ ಇತ್ಯಾದಿಗಳೆಲ್ಲಾ ತೃಪ್ತಿಯಾದರೆ ವೀಳ್ಯಶಾಸ್ತ್ರ ಇಟ್ಟುಕೊಳ್ಳುತ್ತಾರೆ.

ಹುಡುಗಿಯ ತಂದೆತಾಯಿಗಳು ವೀಳ್ಯಶಾಸ್ತ್ರಕ್ಕೆ ಮೊದಲು ಹುಡುಗಿಯೊಂದಿಗೆ ಆಕೆಯ ಸೋದರ ಮಾವನ ಮನೆಗೆ ಹೋಗಿ, ಈ ವಿವಾಹದ ಸುದ್ದಿಯನ್ನು ತಿಳಿಸಿ, ಆತನಿಂದ ಸಮ್ಮತಿ ಪಡೆದು, ಆತನನ್ನು ಶುಭಕಾರ್ಯಕ್ಕೆ ಆಹ್ವಾನಿಸುವ ಪದ್ಧತಿ, ಊರ ಮುಖ್ಯಸ್ಥರಿಗೆ, ಕುಲ ಪ್ರಮುಖರಿಗೆ ವೀಳ್ಯ ಕೊಟ್ಟು ಬರುವ ನಡವಳಿಕೆಯೂ ಇದೆ. ವೀಳ್ಯಶಾಸ್ತ್ರ ಅಥವಾ ನಿಶ್ಚಿತಾರ್ಥಕ್ಕೆ ಹೋದಾಗ ಹುಡುಗಿಯ ಮನೆಯಲ್ಲಿ ಭವಿಷ್ಯದ ಶುಭಾಶುಭವನ್ನು ಅರಿಯುವ ನಂಬಿಕೆಯಲ್ಲಿ ದೀಪದ ಶಕುನ ನೋಡುವ ನಡವಳಿಕೆ ಬಯಲು ಸೀಮೆಯಲ್ಲಿದೆ. ಬಹು ಮಟ್ಟಿಗೆ ಇದೇ ಕ್ರಮವನ್ನು ಹೋಲುವ ಸಂಪ್ರದಾಯ ತುಳುನಾಡಿನ ಗೌಡರಲ್ಲಿಯೂ ಇದೆ. ಅಲ್ಲಿಯೂ ವರನ ಮನೆಯವರು ಅಂದು ಸ್ನಾನ–ಮಡಿ ಮಾಡಿ, ಮನೆ ದೇವರ ಹೆಸರಲ್ಲಿ ದೇವರ ದೀಪ ಹಚ್ಚಿ, ಶುಭವನ್ನು ಪ್ರಾರ್ಥಿಸಿ, ಶಕುನ ನೋಡಿ ಮನೆಯಿಂದ ಹೊರಡುತ್ತಾರೆ. ಹುಡುಗಿಯ ಮನೆಯಲ್ಲಿ ದೇವರ ಕೋಣೆಯಲ್ಲಿ ಹಣತೆ ಹಚ್ಚಿ, ಕೋಣೆಯ ಎದುರಿಗೆ ನಾಲ್ಕು ಚಾಪೆ ಹರಡಿ ಮೇಲೆ ಎರಡು ಮಣೆ ಇಡುತ್ತಾರೆ. ಒಂದು ಮಣೆ ಮೇಲೆ ನಂದಾದೀಪ ಇಟ್ಟು, ಪಕ್ಕದಲ್ಲಿ ಐದು ವೀಳ್ಯದೆಲೆ, ಒಂದು ಅಡಕೆ ಹಾಗೂ ಸ್ವಲ್ಪ ಬೆಳ್ತಿಗೆ ಅಕ್ಕಿ ಹಾಕಿದ ಬಟ್ಟಲು ಇಡುತ್ತಾರೆ. ದೀಪದ ಇನ್ನೊಂದು ಪಕ್ಕ ನೀರು ತುಂಬಿದ ಕಂಚಿನ ಚೊಂಬು, ಐದು ಎಲೆ, ಒಂದು ಅಡಕೆ, ಸ್ವಲ್ಪ ಅಕ್ಕಿ ಹಾಕಿದ ಕಂಚಿನ ಹರಿವಾಣ ಇಡುತ್ತಾರೆ. ಊದುಗಡ್ಡಿ ಹಚ್ಚುತ್ತಾರೆ. ಬಳಿಕ ವೀಳ್ಯಶಾಸ್ತ್ರ ನೆರವೇರಿಸುವಂತೆ ಹಿರಿಯರನ್ನು ವಿನಂತಿಸುತ್ತಾರೆ. ಆಗ ಹುಡುಗ–ಹುಡುಗಿಯ ಕಡೆಯಿಂದ ಒಬ್ಬೊಬ್ಬ ಹಿರಿಯರು ಅಥವಾ ಹಿರಿಯರ ಗುಂಪು ಪೂರ್ವಕ್ಕೆ ಅಭಿಮುಖವಾಗಿ ಕುಳಿತು, ಈ ಮೂಲಕ ಎರಡೂ ಕುಟುಂಬಗಳು ಸಂಬಂಧ ಮಾಡುತ್ತಿರುವುದನ್ನು ಎಲ್ಲರಿಗೂ ಕೇಳುವಂತೆ ಹೇಳಿ ಪರಸ್ಪರ ವೀಳ್ಯ ಬದಲಾಯಿಸಿಕೊಳ್ಳುತ್ತಾರೆ. ಆಮೇಲೆ ಲಗ್ನ ಪತ್ರಿಕೆಯನ್ನು ಬರೆಸುತ್ತಾರೆ.

ವಿವಾಹ ಸಂಬಂಧದಲ್ಲಿ ವಧು–ವರರ ಬಳಿ ನಿರ್ಣಾಯಕ ಅಂಶವಾಗುವುದರಿಂದ, ನಿಶ್ಚಿತಾರ್ಥಕ್ಕೆ ಮೊದಲು ಅವರು ಒಂದೇ ಬಳಿಯವರು ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ. ಇದೇ ಕಾರಣಕ್ಕಾಗಿ ನಿಶ್ಚಿತಾರ್ಥದಲ್ಲಿ ಅಷ್ಟೇ ಅಲ್ಲದೆ ವಿವಾಹದಂದು ಮತ್ತೆ ವೀಳ್ಯ ಬದಲಾಯಿಸಿಕೊಳ್ಳುವ ಮುನ್ನ ಅಲ್ಲಿ ಸೇರಿದ ಎಲ್ಲರಿಗೂ ಕೇಳುವಂತೆ ಬಳಿಗಳ ಹೆಸರು ಪ್ರಸ್ತಾಪಿಸಲಾಗುತ್ತದೆ. ನಿಶ್ಚಿತಾರ್ಥವಾದ ಮೇಲೆ ವಿವಾಹಕ್ಕೆ ಕೆಲ ದಿನ ಮೊದಲು ವಧುವನ್ನು ತಮ್ಮ ಮನೆಅಂಗಳದ ತುಳಸಿಕಟ್ಟೆ ಬಳಿ ಕೂರಿಸಿ ಅರಿಸಿನ ಶಾಸ್ತ್ರ ಮಾಡಲಾಗುತ್ತದೆ. ಆಗ ಆಕೆಯ ಸನಿಹ ತೋರಣ ಹಾಗೂ ಮೂರ್ತಗಂಬಗಳನ್ನು ಇರಿಸಲಾಗಿರುತ್ತದೆ. ತ್ರಿಶೂಲದ ಆಕಾರದಲ್ಲಿನ ಹಾಲೆಮರದ 'ತೋರಣ' ಹಾಗೂ ಮೂರ್ತಗಂಬಗಳು ತುಳುನಾಡಿನ ವಿಶೇಷಗಳಾಗಿವೆ (ಘಟ್ಟದ ಮೇಲಿನವರಲ್ಲಿ ಇವು ಬಳಕೆಯಲ್ಲಿಲ್ಲ). ಹಾಗೆಯೇ, ಮದುವೆಯಂದು ಫಲಬಿಟ್ಟ ಅಡಕೆ ಮರವನ್ನೇ ಧಾರೆಮಂಟಪದಲ್ಲಿ ನೆಟ್ಟು ಅದರ ಸಮ್ಮುಖ ಧಾರೆಶಾಸ್ತ್ರ ಮಾಡುವ ಪದ್ಧತಿ ಮಲೆಕುಡಿಯರಲ್ಲಿದೆ. ವಧು–ವರರನ್ನು ಬೆಳ್ತಿಗೆ ಅಕ್ಕಿ ಮೇಲೆ ನಿಲ್ಲಿಸಿ ಧಾರೆ ಮುಹೂರ್ತ ಮಾಡುವುದೂ ಈ ಭಾಗದ ಸಾಂಕೇತಿಕ ಆಚರಣೆಗಳಲ್ಲಿ ಒಂದಾಗಿದೆ.

ಇತರರ ಹಾಗೆ ಬ್ರಾಹ್ಮಣರಲ್ಲಿಯೂ ಹಿಂದೆ ದಿನಕ್ಕೊಂದು ಶಾಸ್ತ್ರದಂತೆ ವಾರಗಟ್ಟಲೆ ಸಾಂಪ್ರದಾಯಿಕ ವಿವಾಹ ಕಾರ್ಯ ನಡೆಯುತ್ತಿದ್ದಿತು. ಆಗ ಬಾಲ್ಯವಿವಾಹವೂ ರೂಢಿಯಲ್ಲಿದ್ದಿತು. ಜಾತಕ, ಗಣಕೂಟಗಳು ಕೂಡಿಬಂದು, ವಿವಾಹ ನಿಶ್ಚಿತವಾದ ಮೇಲೆ ಮದುವೆ ಊಟಕ್ಕಾಗಿ

ಮಜ್ಜಿಗೆ ಸಂಗ್ರಹ, ಬಾಳೆಎಲೆ ಸಂಗ್ರಹ ಕಾರ್ಯಗಳು ಪ್ರಾರಂಭವಾಗುತ್ತಿದ್ದವು. ಮದುವೆಯ ಹಿಂದಿನ ದಿನ ವಧುವಿಗೆ ಕಲಶನಾಂದಿ ಅಥವಾ ಹೋಮ ಕಲಶ, ವರನಿಗೆ ಅವನ ಮನೆಯಲ್ಲಿ ಸಮಾವರ್ತನ ಶಾಸ್ತ್ರಗಳು ನೆರವೇರುತ್ತಿದ್ದವು. ಆಗ ವರನು ಅಡಕೆ ಹಾಳೆಯ ಚಪ್ಪಲಿ ಧರಿಸಿ, ಕೊಡೆ ಹಿಡಿದು ಕಾಶಿಗೆ ಹೊರಟಂತೆ ಮಾಡಿದಾಗ ಆತನನ್ನು ತಡೆದು, 'ಅಳಿಯ, ನಿಲ್ಲು ನಿನಗೆ ಮದುವೆ ಮಾಡಿಸುವ' ಎಂದು ಹೇಳಿ, ಕೈಗೆ ಅರಿಸಿನದ ದಾರ ಕಟ್ಟುವುದು ಶಾಸ್ತ್ರದ ಒಂದು ವಿಧಿಯಾಗಿದ್ದಿತು. ಈಗ ವಿವಾಹ ಕಾರ್ಯಗಳು ಕಲ್ಯಾಣ ಮಂಟಪಗಳಲ್ಲಿ ಜರುಗುವುದರ ಪರಿಣಾಮವಾಗಿ ಹಾಗೂ ಆಧುನಿಕ ಮನೋಭಾವದಿಂದಾಗಿ ಹಿಂದಿನ ಕೆಲವೊಂದು ಪದ್ಧತಿಗಳು ಮರೆಯಾಗಿವೆ. ಆದರೂ, ವೈದಿಕ ಸಂಪ್ರದಾಯದಂತೆ – ಲಾಜಹೋಮ, ಸಪ್ತಪದಿ ಮೊದಲಾದ ಶಾಸ್ತ್ರಗಳನ್ನು ವಿಧಿಬದ್ಧವಾಗಿ ನಡೆಸಲಾಗುತ್ತದೆ.

ಜೈನರಲ್ಲಿ ಅತ್ತಿಕೊಂಬೆ ಇರಿಸಿ ಪೂಜಿಸುವ ಸ್ತಂಭ ಮುಹೂರ್ತದಿಂದ ಪ್ರಾರಂಭಿಸಿ ತೋರಣ ಮುಹೂರ್ತ, ತಾಳಿಬಂಧಿ, ಧಾರೆ, ಹೋಮ, ನಾಗಬಲಿ ಮೊದಲಾದ ಚಡಂಗ (ವಿವಾಹ ವಿಧಿ) ಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಗುತ್ತದೆ. ನಾಗಬಲಿ ಎಂಬುದು ವಿವಾಹವಾದ ನಾಲ್ಕನೇ ದಿನ ಮಾಡುತ್ತಿದ್ದ ಒಂದು ವಿಧಿ. ಅಂದು ಮಂಗಲ ಸ್ನಾನ ಮಾಡಿದ ವಧೂವರರು ಬಸದಿಗೆ ಹೋಗಿ ಪೂಜಾಕಾರ್ಯ ಮುಗಿಸಿಕೊಂಡು ಬಳಿಕ ಲಗ್ನಮಂಟಪಕ್ಕೆ ಬರುತ್ತಾರೆ. ಜೈನಪುರೋಹಿತರು (ಇಂದ್ರರು) ಅಲ್ಲಿ ಮಂಡಲ ಬರೆದು ಅಷ್ಟದಳಕಮಲದ ಚಿತ್ರ ಬಿಡಿಸಿ, ಅದನ್ನು ಸಪ್ತಧಾನ್ಯ, ದರ್ಭೆ, ಪಂಚರತ್ನ ಮೊದಲಾದವುಗಳಿಂದ ಅಲಂಕರಿಸುತ್ತಾರೆ. ವಧುವಿನ ತಾಯಿಯು ಅಷ್ಟದಿಕ್ಪಾಲರನ್ನೂ, ತಕ್ಷಕ, ಚಕ್ರಿ, ಅನಂತ, ವಾಸುಕಿ ಮೊದಲಾದ ನಾಗದೇವತೆಗಳನ್ನೂ ಪೂಜಿಸಿ, ಸಂತಾನ ಸಮೃದ್ಧಿಗಳನ್ನು ಪ್ರಾರ್ಥಿಸುತ್ತಾಳೆ. ಮಂಟಪದ ದಕ್ಷಿಣ ದ್ವಾರದಲ್ಲಿ ವಧುವಿನ ಗೋತ್ರ–ಸೂತ್ರಾದಿಗಳನ್ನೂ, ಉತ್ತರ ದ್ವಾರದಲ್ಲಿ ವರನ ಗೋತ್ರ–ಸೂತ್ರಾಧಿಗಳನ್ನೂ ಬರೆದಿರುತ್ತಾರೆ. ಅಲ್ಲಿ ವಧುವಿನ ಅಪೇಕ್ಷೆಯಂತೆ ವರನು ಆಕೆಯ ಕೊರಳಿಗೆ ಸಂಬಂಧಮಾಲೆ ಹಾಕಿ, ಆಕೆಯ ಕೈಹಿಡಿದು ತನ್ನ ವಂಶಗೋತ್ರಕ್ಕೆ ಆಕೆಯನ್ನು ಕರೆದುಕೊಳ್ಳುತ್ತಾನೆ. ಈ ನಾಗಬಲಿ ಆಚರಣೆಯು ಜಿಲ್ಲೆಯ ಜೈನರು ನಾಗಾರಾಧನೆಯನ್ನು ಒಪ್ಪಿಕೊಂಡದ್ದರ ಪ್ರತೀಕವಾಗಿರುವಂತೆ, ವರನ ವಂಶಕ್ಕೆ (ಕುಟುಂಬಕ್ಕೆ) ವಧುವು ಪಾದಾರ್ಪಣೆ ಮಾಡಿದ್ದರ ಸಂಕೇತವೂ ಆಗುತ್ತದೆ.

ಮುಸ್ಲಿಮರಲ್ಲಿ ವಧುವನ್ನು ಮಲ್ಲಿಗೆಹೂವಿನಿಂದ ಅಲಂಕರಿಸುವ ಮೂಲಕ ಗಂಡಿನವರು ತಮ್ಮ ಒಪ್ಪಿಗೆ ಸೂಚಿಸುವ ಕ್ರಮವಿದೆ. ಎರಡೂ ಕಡೆಯವರು ಸೇರಿ 'ದೂವಾ' ಪ್ರಾರ್ಥನೆ ಮಾಡುತ್ತಾರೆ. ಮದುವೆಯ ಹಿಂದಿನ ರಾತ್ರಿ ವಧುವಿಗೆ ಶಾಸ್ತ್ರೋಕ್ತವಾಗಿ ಸ್ನಾನ ಮಾಡಿಸಿ, ಸಾಮಾನ್ಯವಾಗಿ ಬಿಳಿ ಸೀರೆ ಉಡಿಸುತ್ತಾರೆ. ತಾಯಿಯ ಅಣ್ಣ ಅಥವಾ ತಮ್ಮ ಮೊದಲು ವಧುವಿಗೆ ಮದರಂಗಿ ಇಡುವ ಶಾಸ್ತ್ರ ಮಾಡುತ್ತಾನೆ. ಬಳಿಕ ಸೋಬಾನೆ ಹಾಡಿನೊಂದಿಗೆ ಉಳಿದವರು ಮದರಂಗಿ ಇಡುವ ಶಾಸ್ತ್ರ ಮಾಡುತ್ತಾರೆ. ವಿವಾಹ ದಿನದ ಬೆಳಿಗ್ಗೆ ಮುತ್ತೈದೆಯರು ಕ್ರಮಬದ್ಧವಾಗಿ ವಧು, ವರರಿಗೆ ಧಾರೆ ನೀರಿನ ಸ್ನಾನ ಮಾಡಿಸುತ್ತಾರೆ. ವಧುವಿಗೆ ಮೆಹರ್ ಕೊಡುವುದು, ವಧೂವರರ ಒಪ್ಪಿಗೆ ಪಡೆಯುವುದು, ಸಾಕ್ಷಿಗಳ ಸಮ್ಮುಖದಲ್ಲಿ ರಿಜಿಸ್ಟರಿನಲ್ಲಿ ದಾಖಲಿಸುವುದು ಮೊದಲಾದ ಶಾಸ್ತ್ರಗಳೂ ಕ್ರಮಬದ್ಧವಾಗಿ ನಡೆಯುತ್ತವೆ.

ಬ್ಯಾರಿಗಳಲ್ಲಿ ವಧು ಒಪ್ಪಿಗೆಯಾದಲ್ಲಿ ಆಕೆಗೆ ಉಂಗುರ ತೊಡಿಸುವ ಶಾಸ್ತ್ರ ಮಾಡಲಾಗುತ್ತದೆ. ಇವರಲ್ಲಿ ನಿಶ್ಚಿತಾರ್ಥವನ್ನು 'ಕುರಿ' ಎಂದು ಕರೆಯುತ್ತಾರೆ. ವಿವಾಹದಂದು ವರನಿಗೆ ಕ್ಷೌರಿಕನು ಕ್ಷೌರ ಮಾಡುವ ಶಾಸ್ತ್ರವಿದ್ದು ಆಗ ಕ್ಷೌರಿಕನಿಗೆ ಅಕ್ಕಿ ವಸ್ತ್ರ ಹಾಗೂ ಹಣವನ್ನು ನೀಡಲಾಗುತ್ತದೆ. ವಿವಾಹದ ಹಿಂದಿನ ದಿನ ವಧುವಿಗೆ ಮಯಿಲಾಂಜಿ ಪಾಟ್ಟ್ ಗಳನ್ನು ಹಾಡುತ್ತಾ ಮದರಂಗಿ ಇಡುವ ಶಾಸ್ತ್ರ ಮಾಡುತ್ತಾರೆ. ಮುಂಜಾನೆ ಗಂಧ, ಅರಿಸಿನ, ತೆಂಗಿನಕಾಯಿ ಹಾಲು ಅರೆದು, ಅವನ್ನು ಮದುಮಗಳ ಮೈಗೆ ಹಚ್ಚುತ್ತಾರೆ. ಸ್ನಾನದ ಬಳಿಕ ಬಿಳಿಸೀರೆ, ಕುಪ್ಪಸ ಉಡಿಸಿ, ತಲೆಗೆ ಮಲ್ಲಿಗೆ ಹೂವಿನ ಜಲ್ಲಿ ಹಾಕಿ, ಆಭರಣಗಳಿಂದ ಅಲಂಕರಿಸುತ್ತಾರೆ. ವಿವಾಹದ ಸೂಚಕವಾಗಿ ವರನು ಬಂದಿಮಾಲೆಯನ್ನು ವಧುವಿನ ಕೊರಳಿಗೆ ಹಾಕುತ್ತಾನೆ.

ವಿಶೇಷ ಆಶಯದ ಇಂತಹ ಹಲವಾರು ನಂಬಿಕೆ, ಶಾಸ್ತ್ರಗಳು ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಕಾಣಬರುತ್ತವೆ. ಪುನರ್ ವಿವಾಹಗಳು ಹೆಚ್ಚಿನ ಶಾಸ್ತ್ರಾಚರಣೆಗಳಿರದೆ ನಡೆಯುತ್ತವೆ. ಈಚೆಗೆ ಸರಳ ವಿವಾಹ, ಸಾಮೂಹಿಕ ವಿವಾಹಗಳು ಅಲ್ಲಲ್ಲಿ ನಡೆಯುವುದುಂಟು. ಸರ್ಕಾರವು ಅಂತರ್ಜಾತೀಯ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಇಂತಹ ವಿವಾಹಗಳ ದಂಪತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ಇಪ್ಪತ್ತೈದು ಸಾವಿರ ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತಿದೆ (ವಿವರಕ್ಕೆ ೧೬ನೇ ಅಧ್ಯಾಯ ನೋಡಿರಿ). ಭಾರತ ಸರ್ಕಾರದ ವಿವಾಹ ಕಾಯ್ದೆಯಂತೆ ಎಲ್ಲಾ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ವಿವಿಧ ಉಪನೋಂದಣಿ ಕಚೇರಿಗಳಲ್ಲಿ ೨೦೦೧ ರಿಂದ ೨೦೦೫ರವರೆಗೆ ನೋಂದಣಿಯಾಗಿರುವ ದತ್ತು ಸ್ವೀಕಾರ ಹಾಗೂ ವಿವಾಹಗಳ ಅಂಕಿ–ಅಂಶಗಳನ್ನು ಕೋಷ್ಟಕ ೩.೧೦ರಲ್ಲಿ ನೀಡಲಾಗಿದೆ:

**ಕೋಷ್ಟಕ ೩.೧೦ : ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಉಪನೋಂದಣಿ ಕಛೇರಿಗಳಲ್ಲಿ ನೋಂದಣಿಯಾಗಿರುವ ವಿವಾಹ ಹಾಗೂ ದತ್ತು ಸ್ವೀಕಾರಗಳ ತಃಖ್ತೆ**

| ಉಪ ನೋಂದಣಿ ಕಛೇರಿಗಳ ಹೆಸರು | ೨೦೦೦–೦೧ | | | ೨೦೦೧–೦೨ | | | ೨೦೦೨–೦೩ | | | ೨೦೦೩–೦೪ | | | ೨೦೦೪–೦೫ | | |
|---|---|---|---|---|---|---|---|---|---|---|---|---|---|---|---|
| | ಹಿಂದೂ ವಿವಾಹ | ವಿಶೇಷ ವಿವಾಹ | ದತ್ತು ಸ್ವೀಕಾರ | ಹಿಂದೂ ವಿವಾಹ | ವಿಶೇಷ ವಿವಾಹ | ದತ್ತು ಸ್ವೀಕಾರ | ಹಿಂದೂ ವಿವಾಹ | ವಿಶೇಷ ವಿವಾಹ | ದತ್ತು ಸ್ವೀಕಾರ | ಹಿಂದೂ ವಿವಾಹ | ವಿಶೇಷ ವಿವಾಹ | ದತ್ತು ಸ್ವೀಕಾರ | ಹಿಂದೂ ವಿವಾಹ | ವಿಶೇಷ ವಿವಾಹ | ದತ್ತು ಸ್ವೀಕಾರ |
| ಪುತ್ತೂರು | ೫೬ | ೨೧ | – | ೬೭ | ೧೨ | – | ೬೨ | ೨೭ | ೨ | ೬೭ | ೧೪ | – | ೧೦೨ | ೧೭ | ೨ |
| ಮುಲ್ಕಿ | ೪೮ | ೨೯ | – | ೫೪ | ೨೯ | ೨ | ೬೬ | ೨೭ | ೨ | ೫೯ | ೨೫ | – | ೬೮ | ೧೯ | ೧ |
| ಮೂಡಬಿದಿರೆ | ೪೨ | ೨೧ | – | ೨೦ | ೧೨ | – | ೪೫ | ೨೬ | – | ೩೦ | ೧೨ | – | ೪೮ | ೩೩ | – |
| ವಿಟ್ಲ | ೧೩ | ೧೨ | ೬ | ೧೭ | ೧೨ | – | ೨೦ | ೬ | – | ೨೪ | ೭ | – | ೨೬ | ೭ | – |
| ಬೆಳ್ತಂಗಡಿ | | | | ೩೫ | ೭ | – | ೨೨ | ೧೦ | – | ೩೩ | ೨೭ | – | ೨೯ | ೨೩ | ೧ |
| ಸುಳ್ಯ | ೨೮ | ೧೨ | – | ೪೩ | ೬ | ೧ | ೩೩ | ೧ | ೨ | ೨೮ | ೪ | ೧ | ೧೮ | ೫ | ೧ |
| ಬಂಟ್ವಾಳ | ೨೦ | ೨೩ | – | ೩೩ | ೨೩ | ೧ | ೩೦ | ೩೬ | – | ೩೨ | ೨೦ | – | ೩೩ | ೨೭ | ೧ |
| ಮಂಗಳೂರು ನಗರ | ೩೧೬ | ೧೧೫ | – | ೩೮೯ | ೧೧೧ | ೨ | ೩೮೮ | ೧೨೩ | ೨ | ೪೮೮ | ೧೧೪ | ೩ | ೪೨೫ | ೮೯ | – |
| ಮಂಗಳೂರು ತಾಲೂಕು | ೮೯ | ೧೧೬ | ೧೭ | ೭೪ | ೮೬ | ೧೩ | ೧೧೪ | ೬೦ | ೧೭ | ೧೧೬ | ೮೬ | ೧೭ | ೧೪೮ | ೯೮ | ೨೦ |

## ಶವಸಂಸ್ಕಾರ

ಶವಸಂಸ್ಕಾರದ ಆಶಯಗಳು ಬಹುಮಟ್ಟಿಗೆ ರಾಜ್ಯದ ಎಲ್ಲೆಡೆ ಒಂದೇ ಆಗಿದ್ದರೂ ಸಂಸ್ಕಾರದ ವಿಧಿಕ್ರಿಯೆಗಳು ಮಾತ್ರ ಜಾತಿಯಿಂದ ಜಾತಿಗೆ ಪ್ರಾದೇಶಿಕ ಹಿನ್ನೆಲೆಯಲ್ಲಿ ಭಿನ್ನವಾಗುವುದು ಸಹಜವಾಗಿದೆ. ಈ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂಢಿಯಲ್ಲಿರುವ ಶವಸಂಸ್ಕಾರ ಪದ್ಧತಿಗಳನ್ನು ಪರಿಶೀಲಿಸಿದಾಗ ಕೆಲವೊಂದು ನಡವಳಿಕೆಗಳಲ್ಲಿ ಬಯಲು ಸೀಮೆಯವರೊಂದಿಗೆ ಸಾಮ್ಯಗಳು ಇದ್ದರೂ ಮಿಕ್ಕಂತೆ ಬಹಳಷ್ಟು ಸಂಗತಿಗಳಲ್ಲಿ ಭಿನ್ನತೆಗಳಿರುವುದು ತಿಳಿದುಬರುತ್ತದೆ.

ತುಳುನಾಡಿನಲ್ಲಿಯೂ ಶವಕ್ಕೆ ಎಣ್ಣೆ, ಸೀಗೇಕಾಯಿ ಹಾಕಿ ಬಿಸಿ ನೀರಿನಿಂದ ಸ್ನಾನ ಮಾಡಿಸಿ, ಹೊಸ ಬಿಳಿ ಬಟ್ಟೆಯನ್ನು ಮೈಗೆ ಹೊದಿಸುವ, ಎಲೆ–ಅಡಕೆ ಕುಟ್ಟಿ ಶವದ ಬಾಯಿಗೆ ಇಡುವ ಪದ್ಧತಿಗಳಿವೆ. ಇಲ್ಲಿ ಅಂತಿಮ ದರ್ಶನಕ್ಕೆ ಬರುವ ಬಂಧುಗಳೂ ಬಿಳಿ ಬಟ್ಟೆ ತಂದು, ಶವಕ್ಕೆ ಹೊದಿಸುತ್ತಾರೆ. ಗಮನಿಸಬೇಕಾದ ಇನ್ನೊಂದು ವಿಶೇಷವೆಂದರೆ, ಅನಂತರ ಆ ಬಟ್ಟೆಗಳಲ್ಲಿ ಒಂದನ್ನು ತೆಗೆದು, ಅಡ್ಡಡ್ಡ ಹರಿದು, ಆ ಹರಿದ ತುಂಡನ್ನು ಮಾಲೆಯಂತೆ ಮಾಡಿ ಸಂಸ್ಕಾರದ ವಿಧಿಗಳನ್ನು ನೆರವೇರಿಸುವವನ ಕೊರಳಿಗೆ ಹಾಕುತ್ತಾರೆ. ಬಿದಿರು ಚಟ್ಟದಲ್ಲಿ (ಕೆಲವೆಡೆ ಮಾವಿನ ಹಲಗೆಯ ಮೇಲೆ ಶವ ಮಲಗಿಸಿ) ಶವವನ್ನು ಸಂಸ್ಕಾರ ಮಾಡುವ ಸ್ಥಳಕ್ಕೆ ಒಯ್ಯಲಾಗುತ್ತದೆ. ಶವದ ತಲೆ ಇರುವ ಚಟ್ಟದ ಮುಂಭಾಗವನ್ನು ಮೃತನ ಕುಟುಂಬದವರು, ಹಿಂಭಾಗವನ್ನು ಊರವರು ಹಿಡಿದು ಶವ ಸಾಗಿಸುವ ಪದ್ಧತಿ ತುಳುನಾಡಿನ ಗೌಡರಲ್ಲಿ ಇದೆ.

ಶವವನ್ನು ಸಂಸ್ಕಾರಕ್ಕೆ ಕೊಂಡುಹೋಗುವ ಮೊದಲು ಮನೆಯ ಹೆಂಗಸರೆಲ್ಲಾ ಶವದ ಬಾಯಿಗೆ ನೀರು ಬಿಡುತ್ತಾರೆ. ಗಂಡಸರೆಲ್ಲಾ ಶವವನ್ನು ಕಾಟದ ಕಟ್ಟಿಗೆಯ ಮೇಲೆ ಮಲಗಿಸಿದ ಬಳಿಕ ನೀರುಬಿಡುತ್ತಾರೆ. ಎರಡೂ ಕೈ ಹಾಗೂ ಕಾಲುಗಳ ಹೆಬ್ಬೆರಳುಗಳನ್ನು ಬಟ್ಟೆಯ ದಾರದಿಂದ ಕಟ್ಟುವ ಪದ್ಧತಿಯಿದೆ. ಹಾಗೆಯೇ, ಮೃತನ ಪತ್ನಿ ಬಾಗಿಲ ದ್ವಾರಬಂಧದಲ್ಲಿ ತೆಂಗಿನಕಾಯಿಯಿಂದ ವೀಳ್ಯ ಗುದ್ದಿ, ಅದನ್ನು ಶವದ ಬಾಯಿಗೆ ಇಡುವ ನಡವಳಿಕೆಯೂ ಇದೆ. ಒಂದು ತೆಂಗಿನಕಾಯಿಯನ್ನು ಒಡೆದು, ಶವದ ತಲೆಯ ಮೇಲ್ಗಡೆ ಭಾಗದಲ್ಲಿ ಸುರಿದ ಅಕ್ಕಿಯ ಮೇಲೆ ಒಂದು ಹೋಳಿನಲ್ಲಿ, ಕಾಲಕೆಳಗೆ ಸುರಿದ ಭತ್ತದ ರಾಶಿಯ ಮೇಲೆ ಇನ್ನೊಂದು ಹೋಳಿನಲ್ಲಿ ದೀಪ ಹಚ್ಚಿಡುವ ಪದ್ಧತಿ ಇದೆ. ಶವ ಮಲಗಿಸಿದ ಜಗಲಿ ಮೇಲೆ ಹಣತೆ ಹಚ್ಚಿಡುವ ಪದ್ಧತಿಯೂ ಇದೆ. ನಿಗದಿತ ದಿನದಂದು ಅಸ್ಥಿ ಸಂಚಯವನ್ನು ಮಾಡಿ ನೆಲದಲ್ಲಿ ಗುಪ್ಪೆಯಾಗಿ ಹೂತು, ಅದರ ಮೇಲೆ ಮಣ್ಣಿನ ದೂಪೆ (ಗುಡ್ಡೆ) ಮಾಡಲಾಗುತ್ತದೆ.

ಮೃತನ ಹಿರಿಯ ಅಥವಾ ಕಿರಿಯ ಮಗ ಕುಂಟೆಗೆ ಹಿಡಿಯಬೇಕು. ಶವಕ್ಕೆ ಅಗ್ನಿ ಸಂಸ್ಕಾರ ಮಾಡಿದ ಮೂರನೇ ದಿನ ಶುದ್ಧ (ಬೂದಿಮುಚ್ಚು) ಮಾಡುತ್ತಾರೆ. ಅಂದು ಕುಂಟೆಗೆ ಹಿಡಿದವ ಹಾಗೂ ಮೃತನ ಮಗ ತಲೆ ಬೋಳಿಸಿಕೊಳ್ಳಬೇಕಾಗುತ್ತದೆ. ಬೊಜ್ಜದ ದಿನ ರಾತ್ರಿ ಮೃತರಿಗೆ ಮಾಂಸಾಹಾರ, ಬಗೆಬಗೆಯ ಸಿಹಿತಿಂಡಿಗಳನ್ನು ಒಳಗೊಂಡ ಅಗೆಲು (ಎಡೆ) ಹಾಕುತ್ತಾರೆ. ೧೬ನೇ ದಿನ ರಾತ್ರಿ ಮೃತರನ್ನು ಒಳಗೆ ಕರೆಯುವ ಕ್ರಮ ಮಾಡುತ್ತಾರೆ. ಆಮೇಲೆ ನದಿಯಲ್ಲಿ ಪಿಂಡ ಪ್ರದಾನ ಮಾಡುತ್ತಾರೆ. ಆ ಮುಂದೆ ವರ್ಷಕ್ಕೊಮ್ಮೆ ಮೃತರಿಗೆ ಅಗೆಲು ಹಾಕುವ ಮೂಲಕ ಹಿರಿಯರನ್ನು ಸ್ಮರಿಸುತ್ತಾರೆ. ದೀಪಾವಳಿಯಲ್ಲಿ ಅಮಾವಾಸ್ಯೆ ದಿನ ಹೆಣ್ಣಿಗೂ, ಅದರ ಮಾರನೇ ದಿನ ಗಂಡಸಿಗೂ ಮುಂಜಾನೆ ನಾಲ್ಕು ಗಂಟೆಯ ಸುಮಾರಿಗೇ ಶವಕ್ಕೆ ಅಗ್ನಿ ಸಂಸ್ಕಾರ ಮಾಡಿದ ಸ್ಥಳ ಹಾಗೂ ಮನೆಯಲ್ಲಿ ಎಲೆಯ ಮೇಲೆ ಅವಲಕ್ಕಿ, ಬೆಲ್ಲ, ಬಾಳೆಹಣ್ಣು, ತುಪ್ಪ ತೆಂಗಿನ ಕಾಯಿಗಳನ್ನು ಇಟ್ಟು ಅವಲಕ್ಕಿ ಬಡಿಸುವ ವಿಧಿ ಮಾಡುತ್ತಾರೆ.

ಮನೆಯಲ್ಲಿ ಶವವನ್ನು ಮಲಗಿಸಿದ ಸ್ಥಳದಲ್ಲಿ, ಶವದ ತಲೆಭಾಗದ ನೇರಕ್ಕಿರುವ ಛಾವಣಿಯನ್ನು ತೂತು ಮಾಡಿ, ಅದರಲ್ಲಿ ಒನಕೆಯೊಂದನ್ನು ದಾಟಿಸುವುದೂ ಕೆಲವರಲ್ಲಿದೆ. ಹೀಗೆ ಮಾಡಿದರೆ ಮೃತನ ಆತ್ಮವು ಆ ರಂಧ್ರದ ಮೂಲಕ ಮನೆಯಿಂದ ಅಗಸ ಸೇರುತ್ತದೆ ಎಂದು ಅವರು ನಂಬುತ್ತಾರೆ. ಶಾಲಿಯಾ ಸಮುದಾಯದವರಲ್ಲಿ ಶವಸಂಸ್ಕಾರ ಮಾಡಿದ ಬಳಿಕ ೧೨ ದಿನಗಳವರೆಗೆ ಮನೆಯಲ್ಲಿ ಶವ ಇರಿಸಿದ ಸ್ಥಳದಲ್ಲಿ ಚಾಪೆ ಹಾಕಿ ದೀಪ ಉರಿಸಿ ನೀರು ಇಡುತ್ತಾರೆ. ಅಲ್ಲದೇ ಪ್ರತಿದಿನ ಮುಸ್ಸಂಜೆ ಕುಟುಂಬದವರು ಸ್ನಾನ ಮಾಡಿ ಆ ಚಾಪೆಯಲ್ಲಿ ಕುಳಿತು ಅಳುವ ಪದ್ಧತಿ ಇದೆ. ಇದನ್ನು 'ಮುರಿಯೊಇಡಲ್' ಎನ್ನುತ್ತಾರೆ.

ವ್ಯಕ್ತಿಯು ಮೃತನಾದಾಗ ಶವಕ್ಕೆ ಸ್ನಾನ ಮಾಡಿಸುವುದು, ಕಫಾನ್ ಹೊದಿಸುವುದು, ಶವವನ್ನು ಮಸೀದಿ ಬಳಿ ತಂದಾಗ ನಮಾಜ್ ಮಾಡುವುದು, ಗೋರಿಯಲ್ಲಿ ಶವದ ಮುಖವನ್ನು ಪಶ್ಚಿಮಾಭಿಮುಖವಾಗಿ ಇರಿಸಿ ಮಲಗಿಸಿ, ದೇಹದ ಮೇಲಿನ ವಸ್ತ್ರಗಳ ಕಟ್ಟುಗಳನ್ನೆಲ್ಲಾ ಬಿಚ್ಚಿ, ಸಮಾಧಿ ಮಾಡಿ, ಮೃತನ ಶಾಂತಿಗಾಗಿ ಎಲ್ಲರೂ ಪ್ರಾರ್ಥಿಸುವುದು ಮೊದಲಾದುವು ಮುಸ್ಲಿಮರ ಶವಸಂಸ್ಕಾರದ ಕೆಲವು ಪ್ರಮುಖ ವಿಧಿಗಳಾಗಿವೆ.

**ಕುಲೆ ಆರಾಧನೆ:** ವ್ಯಕ್ತಿ ಮೃತನಾದ ಬಳಿಕ 'ಕುಲೆ' (ಅಥವಾ ಕೊಲೆ)ಯಾಗಿ ಪಿತೃಗಣವನ್ನು ಸೇರುತ್ತಾನೆ ಎಂಬ ನಂಬಿಕೆ ತುಳುವರಲ್ಲಿದೆ. ಸತ್ತವರು ಕುಲೆಗಳ ರೂಪದಲ್ಲಿ ಭೂಮಿಗೆ ಬಂದು ತಮ್ಮ ವಂಶಸ್ಥರನ್ನು ನೋಡಿಕೊಂಡು ಹೋಗುತ್ತಾರೆಂಬ ನಂಬಿಕೆಯೂ ಇದೆ. ಅಂತೆಯೇ, ಹಬ್ಬ–ಹರಿದಿನಗಳಲ್ಲಿ ತಯಾರಿಸಿದ ವಿಶೇಷ ಆಹಾರವನ್ನು ಕುಲೆಗಳಿಗೆ ಎಡೆ ಮಾಡಿ ಅವನ್ನು ಸಂಪ್ರೀತಗೊಳಿಸುವ, ಆ ಮೂಲಕ ತಮ್ಮ ಪೂರ್ವಜರನ್ನು ಗೌರವಿಸುವ ಕಾರ್ಯವನ್ನು ಎಲ್ಲರೂ ಮಾಡುತ್ತಾರೆ. ಆದರೆ ಮದುವೆಯಾಗದೇ ನಿಧನವಾದ ಪ್ರಾಯದ ಹೆಣ್ಣು ಅಥವಾ ಗಂಡು, ಕುಲೆಗಳಾದ ಮೇಲೆ ಆ ಅತೃಪ್ತಿಯಿಂದಲೇ ಇದ್ದು ತಮಗೆ ಪೀಡೆ ಕೊಡುತ್ತವೆ ಎಂದೂ, ಹಾಗೆ ಆಗದಿರಲೆಂದು ಅವಕ್ಕೆ ಮದುವೆ ಶಾಸ್ತ್ರವನ್ನು ಮಾಡಿಮುಗಿಸುವುದು ಅತ್ಯಗತ್ಯವೆಂದೂ ಸಾಮಾನ್ಯವಾಗಿ ನಂಬುತ್ತಾರೆ. ಅಂತೆಯೇ ಕುಲೆ ಮದುವೆ ಎಂಬ ಸಂಪ್ರದಾಯ ಕಲ್ಪಿಸಿಕೊಂಡಿದ್ದಾರೆ. ಅದರ ಪ್ರಕಾರ ತಮ್ಮ ವಂಶದಲ್ಲಿ ಸತ್ತುಹೋದ ಅವಿವಾಹಿತ ಗಂಡಸಿನ ಪ್ರತೀಕವಾಗಿ ಒಂದು ಬೈಹುಲ್ಲಿನ ಅಥವಾ ಹಾಲೆ ಮರದ ಗೊಂಬೆ ಮಾಡಿ, ಹಾಗೆಯೇ ಸತ್ತುಹೋದ ತಮ್ಮ ಸಮಾನ ಅಂತಸ್ಥಿನ ಮನೆತನದ ಒಂದು ಹೆಣ್ಣಿನ ಪ್ರತೀಕವಾಗಿ ಮತ್ತೊಂದು ಗೊಂಬೆ ಮಾಡಿ, ಈ ಎರಡೂ ಕುಲೆಗಳಿಗೆ ಜೀವಂತ ವ್ಯಕ್ತಿಗಳಾಗಿದ್ದಾಗ ಮಾಡುತ್ತಿದ್ದಂತೆಯೇ ಅಂದರೆ, ಬಳಿ ನೋಡುವುದು, ನಿಶ್ಚಿತಾರ್ಥ, ಒಡವೆ–ವಸ್ತ್ರ ಕೊಡುವುದು, ಧಾರೆ, ಊಟ ಹೀಗೆ ಸಾಂಪ್ರದಾಯಿಕವಾದ ಎಲ್ಲಾ ಶಾಸ್ತ್ರಗಳನ್ನು ಮಾಡಿ ವಿವಾಹ ಕಾರ್ಯ ಮುಗಿಸುತ್ತಾರೆ. ಆದರೆ, ಈ ವಿಧಿಗಳೆಲ್ಲಾ ಮನೆಯ ಹೊರಭಾಗದ ಸೂರಿನ ಅಡಿ ಅಥವಾ ಹೊಳೆಯ ಬದಿ ರಾತ್ರಿವೇಳೆ ನಡೆಯುತ್ತವೆ. ಇದನ್ನು ತುಳುವಿನಲ್ಲಿ 'ಕುಲೆತ ಮದಿಮೆ' ಎನ್ನಲಾಗುತ್ತದೆ. ತೀರ ಎಳೆಯ ಮಕ್ಕಳಿದ್ದಾಗಲೇ ಸತ್ತವರಿಗೆ ಅವರು ಬದುಕಿದ್ದಲ್ಲಿ ವಿವಾಹ ವಯಸ್ಸಿಗೆ ಬರುವಂತಹ ವಯಸ್ಸನ್ನು ಗುರುತಿಸಿ ಅಂಥಾ ಜಕಿಣಿಗಳಿಗೂ ವಿವಾಹ ಮಾಡಬೇಕೆಂಬ ನಂಬಿಕೆ ಇದ್ದು, ಅದನ್ನು ಕನ್ಯಾವು ಎನ್ನುತ್ತಾರೆ.

**ಜೋಗಿಗಳಲ್ಲಿ ಶವಸಂಸ್ಕಾರ:** ಜೋಗಿಗಳಲ್ಲಿನ ಶವಸಂಸ್ಕಾರ ಪದ್ಧತಿಯು ಇತರ ಸಮುದಾಯದವರಿಗಿಂತ ಕೆಲವು ಭಿನ್ನ ಆಚರಣೆಗಳನ್ನು ಹೊಂದಿರುವುದರಿಂದ ಅದರ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ: ಮುಖ್ಯವಾಗಿ, ಜೋಗಿಗಳಲ್ಲಿ ಶವವನ್ನು ಕುಳಿತ ಭಂಗಿಯಲ್ಲಿ ಸಮಾಧಿ ಮಾಡುವ ಪದ್ಧತಿ ಇದೆ. ಇತರರ ಹಾಗೆ ಇವರೂ ಹೆಣಕ್ಕೆ ಸ್ನಾನ ಮಾಡಿಸಿ, ಬಿಳಿ ಬಟ್ಟೆ ಹೊದಿಸಿ, ಹಣೆಗೆ ವಿಭೂತಿ ಇಡುತ್ತಾರೆ. ಮಂಟಪದ ರೂಪದಲ್ಲಿ ಬಿದಿರಿನ ಚಟ್ಟ ಕಟ್ಟಿ ಅದರಲ್ಲಿ ಶವ ಕೂರಿಸುತ್ತಾರೆ. ಬಂದವರೆಲ್ಲಾ ಪ್ರದಕ್ಷಿಣೆ ಮಾಡಿ, ಶವಕ್ಕೆ ಅಕ್ಕಿ ತಳಿಯುತ್ತಾರೆ. ವಾದ್ಯ ಸಮೇತ ಶವದ ಯಾತ್ರೆ ಹೊರಟಾಗ ಮುಂದೆ ಒಬ್ಬ ಅನ್ನದ ಮಡಕೆ ಹಿಡಿದು ನಡೆಯುತ್ತಾನೆ. ಹೂಳುವ ಸ್ಥಳದಲ್ಲಿ ಮಾಡಿದ ಗುಂಡಿಗೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ, ಬಳಿಕ ಶವವನ್ನು ದಕ್ಷಿಣಾಭಿಮುಖವಾಗಿ ಗುಂಡಿಯಲ್ಲಿ ಕೂರಿಸುತ್ತಾರೆ. ಶವದ ಕಿವಿಯಲ್ಲಿರುವ ಕುಂಡಲ ಇತ್ಯಾದಿ ಆಭರಣಗಳನ್ನೆಲ್ಲಾ ತೆಗೆಯುತ್ತಾರೆ. ಒಂದು ಕೋಳಿ ಪಿಳ್ಳೆ ಹಾಗೂ ಉಪ್ಪನ್ನು ಶವದ ಭುಜದ ಭಾಗದಲ್ಲಿರಿಸುತ್ತಾರೆ. ತಲೆಯ ಮೇಲೊಂದು ಬಾಳೆ ಎಲೆ ಕವುಚಿ ಇಟ್ಟು, ಮಣ್ಣು ತುಂಬಿ, ಸಮಾಧಿ ಗುಡ್ಡೆ ಮಾಡುತ್ತಾರೆ. ಆ ಗುಡ್ಡೆಯ ಎದಿರು ವಿಭೂತಿ, ಎಲೆ–ಅಡಕೆ, ಕಳ್ಳನ್ನೂ, ಉರಿವ ಹಣತೆಯನ್ನೂ ಇಡುತ್ತಾರೆ. ಮನೆಯಲ್ಲಿ ಹೆಣ ಇರಿಸಿದ್ದ ಜಾಗದಲ್ಲೂ ದೀಪ ಇಡುವ ಪದ್ಧತಿ ಇದೆ. ಸ್ನಾನ ಮಾಡಿ, ಕಳ್ಳು ಕುಡಿದು ಊಟ ಮಾಡುತ್ತಾರೆ.

ಮೂರನೇ ದಿನ ಅನ್ನ, ಮೀನು, ಕೋಳಿಮಾಂಸಾದಿಗಳನ್ನು ಸಮಾಧಿ ಬಳಿ ಇರಿಸಿ, 'ಬಂದು ತಿಂದು ಹೋಗು' ಎಂದು ಪ್ರಾರ್ಥಿಸಿ, ಅಲ್ಲಿಂದ ಸ್ವಲ್ಪ ಪಕ್ಕಕ್ಕೆ ಬಂದು ನಿಲ್ಲುತ್ತಾರೆ. ಬಳಿಕ ಆ ಎಡೆಯನ್ನು ಎತ್ತಿ ಹೊಳೆಗೆ ಎಸೆದು, ಸ್ನಾನ ಮಾಡಿ ಮನೆಗೆ ಹೋಗುತ್ತಾರೆ. ೧೧ನೇ ದಿನಕ್ಕೆ "ದಿವಸ ಮಾಡುವುದು". ಮನೆಯನ್ನು ಶುದ್ಧಿ ಮಾಡುವ ಅಂಗವಾಗಿ ಹಳೆಯ ಮಡಕೆಗಳನ್ನೆಲ್ಲಾ ಎಸೆದು ಹೊಸ ಮಡಕೆಗಳನ್ನು ತರುತ್ತಾರೆ. ಹಿರಿಯ ಮಗ ಸರ್ವಾಂಗವಪನ ಮಾಡಿಸಿಕೊಳ್ಳುವುದಲ್ಲದೆ ಬಿಳಿಯ ಬಟ್ಟೆ ಚೂರೊಂದನ್ನು ಕೊರಳಿಗೆ ಕಟ್ಟಿಕೊಳ್ಳುತ್ತಾನೆ. ಸಮಾಧಿಗೆ ಬಿಳಿಬಟ್ಟೆ ಹೊದಿಸುತ್ತಾರೆ. ವಿಧವೆ ಪತ್ನಿಯೂ ಒಂದು ಬಿಳಿಬಟ್ಟೆ ಹೊದಿಸುತ್ತಾಳೆ. ಮಾಂಸಾಹಾರದ ಎಡೆ ಹಾಕುತ್ತಾರೆ. ಆ ಕುಟುಂಬದಲ್ಲಿ ಈಗಾಗಲೇ ಮೃತರಾದ ಹಿರಿಯರ ಹೆಸರನ್ನೆಲ್ಲಾ ಹೇಳಿ, ಎಡೆ ಸ್ವೀಕರಿಸುವಂತೆ ಕರೆಯುತ್ತಾರೆ. ಬಳಿಕ ಆ ಎಡೆಯನ್ನು ತಾವೆಲ್ಲಾ ಅಲ್ಲೇ ತಿನ್ನುತ್ತಾರೆ ಅಥವಾ ಹೊಳೆಯಲ್ಲಿ ಬಿಡುತ್ತಾರೆ. ಸ್ನಾನ ಮಾಡಿ ಮನೆಗೆ ಬರುವಾಗ ಶುದ್ಧಿ ಕ್ರಿಯೆಯ ಅಂಗವಾಗಿ ಎಲ್ಲರೂ ಸಗಣಿ ತುಳಿಯುತ್ತಾರೆ. ಊರವರು ತಂದುಕೊಟ್ಟ ವೀಳ್ಯವನ್ನು ಅಗಿದು ಅಲ್ಲೇ ಉಗಿವ ಮೂಲಕ ಸಾವಿನ ಮೈಲಿಗೆ ಕಳೆಯಿತೆಂದು ಭಾವಿಸುತ್ತಾರೆ. ರಾತ್ರಿಗೆ ಮಾಂಸಾಹಾರ ಹಾಗೂ ಕಳ್ಳನ್ನು ಕುಲದೇವರು ಭೈರವನಿಗೆ ಎಡೆ ಮಾಡುತ್ತಾರೆ. ತಾವೂ ಕುಡಿದು, ತಿಂದು, ಭಂಗಿ ಸೇವನೆ ಮಾಡುತ್ತಾರೆ. ಮತ್ತೆ ತಿಂಗಳಿಗೆ ಇನ್ನೊಮ್ಮೆ ಹೀಗೆ ಬಳಗದವರೆಲ್ಲಾ ಸೇರಿ ಊಟ ಮಾಡುತ್ತಾರೆ. ಜೋಗಿಗಳಲ್ಲಿನ ಈ ಕ್ರಿಯಾವಿಧಿಗಳು ಬಯಲು ಸೀಮೆಯಲ್ಲಿ ಗುರುಮಠದ ದೀಕ್ಷೆ ಪಡೆದವರು ಹಾಗೂ ದೇಶಾಭಾಗದವರಲ್ಲಿನ (ದಾಸಯ್ಯಗಳ) ಬಹಳಷ್ಟು ಆಚರಣೆಗಳನ್ನು ಹೋಲುವುದು ವ್ಯಕ್ತವಾಗುತ್ತದೆ.

**ಜೈನ ಅರಸರ ಶವಸಂಸ್ಕಾರ ಪದ್ಧತಿ:** ಜೈನ ಅರಸರಲ್ಲಿ ಪಟ್ಟದ ಅರಸರ ಅಂತ್ಯಸಂಸ್ಕಾರ ಸಂದರ್ಭದಲ್ಲಿಯೇ ಹೊಸ ಅರಸನಿಗೆ ಪಟ್ಟವನ್ನು ಹಸ್ತಾಂತರಿಸುವ ಪದ್ಧತಿ ಇದ್ದು, ಅದರ ಕ್ರಮಗಳು ವಿಶಿಷ್ಟವಾಗಿವೆ. ಅರಸರು ನಿಧನಹೊಂದಿದ ಸುದ್ದಿ ತಿಳಿಯುತ್ತಿದ್ದಂತೆಯೆ ಸೀಮೆಯ ಗುತ್ತುಗಳ ಗುರಿಕಾರರು, ಕುಟುಂಬದವರ ಮುಂದಾಳ್ತನದಲ್ಲಿ ಶವಕ್ಕೆ ಸ್ನಾನ ಮಾಡಿಸಿ, ಕಚ್ಚೆ ಉಡಿಸಿ, ಪೇಟ ತೊಡಿಸಿ, ಕೈಬೆರಳಿಗೆ ಪಟ್ಟದ ಉಂಗುರ ತೊಡಿಸಿ ಮಲಗಿಸುತ್ತಾರೆ. ಬಳಿಕ ಪಟ್ಟಾಧಿಕಾರಕ್ಕೆ ನಿಯೋಜಿತನಾದ ಅರಸನಿಗೆ ಕಲಶದ ನೀರಿನ ಸ್ನಾನ ಮಾಡಿಸಿ, ಪಟ್ಟದ ಮಂಚದಲ್ಲಿ ಕೂರಿಸುತ್ತಾರೆ. ಅನಂತರ ಶವಕ್ಕೂ ಪಟ್ಟ ಸ್ವೀಕಾರ ಮಾಡಬೇಕಾದ ಅರಸನ ಕೈಗೂ ಒಂದು ನೂಲು ಕಟ್ಟಿ ಅದರ ಮೂಲಕ ಪಟ್ಟದ ಉಂಗುರವನ್ನು ಇವರ ಕೈಗೆ ವರ್ಗಾಯಿಸುತ್ತಾರೆ. ಬಳಿಕ ನೂತನ ಅರಸರಿಗೆ ಗುರಿಕಾರರು ಪೇಟ ತೊಡಿಸುವ, ಪಟ್ಟದ ಉಂಗುರ ತೊಡಿಸುವ, ಕೈಗೆ ಪಟ್ಟದ ಕತ್ತಿ ಕೊಡುವ ಹಾಗೂ ನೂತನ ನಾಮಕರಣ ಮಾಡುವ ಕ್ರಿಯೆಗಳು ಜರುಗುತ್ತವೆ.

ಪಟ್ಟದ ಬಳಿಕ ಅವರನ್ನು ಅರಮನೆಯಿಂದ ದೀವಟಿಕೆ, ಬಿಳಿಛತ್ರಿ ಬಿರುದಾವಳಿಗಳೊಂದಿಗೆ ವಾದ್ಯಸಮೇತ ಬಸದಿಗೆ ಕರೆದೊಯ್ದು ಇರಿಸುತ್ತಾರೆ. ಅವರ ಅನುಮತಿ ಪಡೆದು ಇತ್ತ ಮೃತ ಅರಸರ ಶವದ ದಹನ ಕ್ರಿಯೆಯನ್ನು ಪಟ್ಟದ ಬಾಕಿಮಾರು ಗದ್ದೆಯಲ್ಲಿ ನಡೆಸುತ್ತಾರೆ. ಇವರಿಗೆ ಪಿರಮಿಡ್ ಆಕಾರದಲ್ಲಿ ಸಮಾಧಿ ನಿರ್ಮಿಸುವ ಪದ್ಧತಿ ಇದೆ. ನೂತನ ಅರಸರು ಯಾರದೇ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳುವಂತಿಲ್ಲ. ೧೨ ದಿನಗಳವರೆಗೆ ಬಸದಿಯಲ್ಲೇ ಉಳಿಯುವ ನೂತನ ಅರಸರನ್ನು ೧೩ನೇ ದಿನ ಅರಮನೆಗೆ ಕರೆತರುತ್ತಾರೆ. ೧೬ನೇ ದಿನ ಬಸದಿಯಲ್ಲಿ ಅಭಿಷೇಕಾದಿಗಳು ನಡೆಯುತ್ತವೆ. ಪಟ್ಟಾಭಿಷೇಕಕ್ಕೆ ಒಳ್ಳೆಯ ದಿನ ಗೊತ್ತು ಮಾಡಿ, ಅಂದು ಸೋಮನಾಥೇಶ್ವರಿ ದೇವಾಲಯದಿಂದ ಕಲಶವನ್ನು ಮೆರವಣಿಗೆಯಲ್ಲಿ ಅರಮನೆಗೆ ತರುತ್ತಾರೆ. ಅರಸರನ್ನು ಪಟ್ಟದ ಉಯ್ಯಾಲೆ ಮೇಲೆ ಕೂರಿಸಿ, ಮಂತ್ರಪೂರ್ವಕವಾಗಿ ಕಲಶದ ನೀರಿನ ಅಭಿಷೇಕ ಮಾಡಲಾಗುತ್ತದೆ. (ವಿವರಕ್ಕೆ ಮನೀಷಾ ೨೦೦೦–೨೦೦೧, ಪು.೩೩ ಹಾಗೂ ದಕ್ಷಿಣದ ಸಿರಿನಾಡು ಪು. ೬೯).

**ಆಹಾರ ವಿಶೇಷಗಳು**

ಕರಾವಳಿಯ ಜನರು ಅಡುಗೆ ತಯಾರಿಗೆ ಹೆಸರಾದವರು. ಇಲ್ಲಿಯ ಬ್ರಾಹ್ಮಣರು ಶಿಕ್ಷಣ ಹಾಗೂ ಬ್ಯಾಂಕಿಂಗ್ ಅನ್ನು ವೃತ್ತಿ ಮಾಡಿಕೊಂಡಂತೆ ಹೋಟೆಲ್ ವೃತ್ತಿಯನ್ನು ಉದ್ಯಮದ ಹಂತಕ್ಕೆ ಏರಿಸಿದವರೆಂದು ಹೆಸರಾಗಿರುವುದು ಎಲ್ಲೆಡೆ ತಿಳಿದ ವಿಷಯ. ದಕ್ಷಿಣ ಕನ್ನಡ ಜಿಲ್ಲೆಯ ಆಹಾರ ಪಾನೀಯಗಳು ವೈವಿಧ್ಯಕ್ಕೂ, ವಿಶಿಷ್ಟ ಸ್ವಾದಕ್ಕೂ ಹೆಸರಾಗಿವೆ. ವೈದಿಕರು ತಮ್ಮ ಧಾರ್ಮಿಕಾಚರಣೆಗಳ ಅಂಗವಾಗಿ ಮಾಡುವ ಷಡ್ರಸಾನ್ನ ಭೋಜನದಲ್ಲಿ ಅಕ್ಷರಶಃ ಆರೂ ಬಗೆಯ ರಸದ ಸ್ವಾದ ನೀಡುವ ಆಹಾರ ವಿಶೇಷಗಳು ಸೇರಿರುತ್ತವೆ. ಅನ್ನ–ಸಾರಿನ ಜೊತೆಗೆ ಹಲವು ಬಗೆಯ ಉಪ್ಪಿನಕಾಯಿಗಳು, ಹಪ್ಪಳ ಸಂಡಿಗೆಗಳು, ಸಿಹಿ ಉಂಡೆಗಳು, ತೊವ್ವೆ ಹುಳಿ, ಗೊಜ್ಜು, ತಂಬುಳಿ, ಕೋಸಂಬರಿ, ಪಲ್ಯಗಳು, ಪಾಯಸ, ಮಜ್ಜಿಗೆ... ಹೀಗೆ ಎಷ್ಟೆಲ್ಲಾ ತಯ್ಯಾರಿಗಳು ಮದುವೆಯಂತಹ ವಿಶೇಷ ಸಂದರ್ಭದ ಊಟದಲ್ಲಿ ಬಳಕೆಯಾಗುತ್ತವೆ. ಬಳಕೆ ಮಾಡುವ ಪ್ರಧಾನ ವಸ್ತುಗಳನ್ನು ಅವಲಂಬಿಸಿ ಖಾದ್ಯಗಳಲ್ಲೂ ಹಲವು ಬಗೆ ಮತ್ತು ರುಚಿಯನ್ನು ತರುವ ತಿಳುವಳಿಕೆಯೂ ಇಲ್ಲಿನ ಜನರಿಗಿದೆ. ಉದಾ. ತಂಬುಳಿಯಲ್ಲಿ–ದಾಳಿಂಬೆಸಿಪ್ಪೆ ತಂಬ್ಳಿ, ದಾಸವಾಳ ಹೂವಿನ ತಂಬ್ಳಿ ಮಾಡುವುದು; ಚಟ್ನಿಯಲ್ಲಿ– ಕೆಸುವಿನ ಎಲೆ ಚಟ್ನಿ, ಕುಂಬಳಕಾಯಿ ತಿರುಳಿನ ಚಟ್ನಿ ತಯಾರಿಸುವುದು. ಎಳ್ಳಿಕಾಯಿ, ಮಾವಿನಕಾಯಿ, ನಿಂಬೆಕಾಯಿಗಳಿಂದ ಉಪ್ಪಿನಕಾಯಿಗಳನ್ನು ಮಾಡುವುದು ಇತರೆಡೆಯೂ ಪರಿಚಿತವಾದದ್ದೇ. ಆದರೆ, ಕರಾವಳಿಯ ಕೆಲವೆಡೆ ಅತ್ತಿಹಣ್ಣು, ದಡುಲಿಕಾಯಿ, ನೆಲ್ಲಿಕಾಯಿಗಳಿಂದಲೂ ಉಪ್ಪಿನಕಾಯಿಗಳನ್ನು ತಯಾರಿಸುತ್ತಾರೆಂಬುದು ಉಲ್ಲೇಖನೀಯವಾಗುತ್ತದೆ.

ಕರಾವಳಿ ಭಾಗದವರು ಅನ್ನವನ್ನು ನಿತ್ಯದ ಆಹಾರವಾಗಿ ಸಾಮಾನ್ಯವಾಗಿ ಬಳಸುತ್ತಾರೆ. ಈ ಅನ್ನವನ್ನು ಕುಚ್ಚಲಕ್ಕಿ ಅಥವಾ ಬೆಳ್ತಿಗೆ ಅಕ್ಕಿಯಿಂದ ಮಾಡುತ್ತಾರೆ. ಸಾಮಾನ್ಯವಾಗಿ ಎಲ್ಲರೂ ಮುಂಜಾನೆಯ ಆಹಾರವಾಗಿ ಕುಚ್ಚುಲಕ್ಕಿ ಗಂಜಿಯನ್ನು ಉಪ್ಪಿನಕಾಯಿ ನೆಂಚಿಗೆಯೊಂದಿಗೆ ಬಳಸುತ್ತಿದ್ದುದು ಹಿಂದೆ ಪದ್ಧತಿಯಾಗಿದ್ದಿತು. ಈಗಲೂ ಸಾಮಾನ್ಯ ವರ್ಗದವರು ಗಂಜಿಯನ್ನೇ ಪ್ರಧಾನ ಆಹಾರವಾಗಿ ಸೇವಿಸುತ್ತಾರೆ; ಅಭ್ಯಾಸ ಇರುವವರು ಮೀನಿನ ಖಾದ್ಯವನ್ನು ಅದರೊಂದಿಗೆ ಬಳಸುತ್ತಾರೆ. ಮೀನು ಇಲ್ಲಿನವರ ಪ್ರಮುಖ ಆಹಾರವೂ ಆಗಿದೆ. ಕರಾವಳಿಯ ಹವಾಮಾನಕ್ಕೆ ಬೆಳ್ತಿಗೆ ಅಕ್ಕಿಗಿಂತ ಕುಚ್ಚುಲಕ್ಕಿಯ ಸೇವನೆ ಬಹಳ ಒಳ್ಳೆಯದೆಂದು ತಿಳಿಯಲಾಗಿದೆ. ಈ ಭಾಗದವರು ಅಡುಗೆಗೆ ತೆಂಗಿನೆಣ್ಣೆಯನ್ನೇ ಸಾಮಾನ್ಯವಾಗಿ ಬಳಸುತ್ತಾರೆ. ಹಲಸು, ಕೆಸು ಮೊದಲಾದ ಎಲೆಗಳು, ವಿವಿಧ ಸೊಪ್ಪು, ಕಾಳು, ತರಕಾರಿಗಳಿಂದ ಮಾಡುವ ಕೆಲವೊಂದು

ಆಹಾರ ಪದಾರ್ಥಗಳು ಔಷಧೀಯ ಗುಣವನ್ನು ಹೊಂದಿರುತ್ತವೆ ಎಂದು ಸಾಂಪ್ರದಾಯಿಕವಾಗಿ ನಂಬಲಾಗಿದೆ. ಮೆಣಸಿನಕಾಯಿಗಿಂತ ಕಾಳು ಮೆಣಸು ಬಳಸಿದ ಸಾರಿನಲ್ಲಿ ಔಷಧೀಯ ಗುಣ ಹೆಚ್ಚಾಗಿರುತ್ತದೆ. ಸುವರ್ಣಗೆಡ್ಡೆ ಬಾಳೆಹೂವಿನಂತಹ ಸಸ್ಯವಿಶೇಷಗಳಿಂದ ಮಾಡಿದ ಆಹಾರ ಮೂಲವ್ಯಾಧಿಯವರಿಗೆ ಒಳ್ಳೆಯದು. ಹಾತಪೆ ಗಂಜಿ ಬೆನ್ನು ನೋವು ಇದ್ದವರಿಗೆ ಗುಣಕಾರಿ–ಇತ್ಯಾದಿಯಾಗಿ ಹೇಳುವುದನ್ನು ಇಲ್ಲಿ ನಿದರ್ಶನವಾಗಿ ಸ್ಮರಿಸಬಹುದು (ಮನೀಷಾ–೨೦೦೪, ಪು. ೬೭–೭೧).

ಕೆಲವು ಸಮುದಾಯಗಳು ತಮಗೇ ವಿಶಿಷ್ಟವಾದ ತಿಂಡಿ–ತಿನಿಸುಗಳನ್ನು ತಯಾರಿಸುವ ಪ್ರಾವೀಣ್ಯ ಪಡೆದಿರುವುದೂ ಗಮನಾರ್ಹವಾಗಿದೆ. ಉದಾಹರಣೆಗೆ ಕಟ್ಟುಮಂಡಿಗೆ ಎಂಬುದು ಜೈನರು ಸೀಮಂತ ಕಾರ್ಯದಲ್ಲಿ ತಯಾರಿಸಿ, ಬಳಸುವ ಮುಖ್ಯ ಸಿಹಿ ತಿಂಡಿಯಾಗಿದೆ. ಉಂಡುಲಗ, ಪೇರಡ್ಡೆ, ಮನಾರ, ಹಾತಪೆಗಂಜಿ, ರಾಗಿಮಣ್ಣಿ, ಅಕ್ಕಿಮಣ್ಣಿ, ಅಪ್ಪಿಹುಳಿ (ಹಾಲುಭಾವೆ), ಕೋರಿರೊಟ್ಟಿ ಮೊದಲಾದವೂ ಕೆಲವು ಸಮಾಜದ ವಿಶೇಷ ಭಕ್ಷ್ಯಗಳಾಗಿವೆ. ಹಾಗೆಯೇ ಬ್ರಾಹ್ಮಣರು ಗೋಟುಸಾರು, ಸಮ್ಮಂದ, ಉಂಡ್ಲುಗ, ದ್ವಾದಶಿಗಂಜಿ ಮೊದಲಾದುವನ್ನು ತಯಾರಿಸುವ ಅಭ್ಯಾಸ ಹೊಂದಿದ್ದಾರೆ. ಸಾಮಾನ್ಯವಾಗಿ ಎಲ್ಲರೂ ಹಬ್ಬ–ಹರಿದಿನಗಳಲ್ಲಿ ಪತ್ರೊಡೆ, ಕೊಟ್ಟೆಕಡುಬು, ಒಬ್ಬಟ್ಟು, ಪಂಚಕಜ್ಜಾಯ ಮೊದಲಾದುವನ್ನು ಮಾಡುವುದುಂಟು. ಚಿತ್ಪಾವನರು ವಟಸಾವಿತ್ರಿ ವ್ರತದಂದು ಹಲಸಿನ ಹಣ್ಣಿನ ಉಂಬರ ಎಂಬ ವಿಶೇಷ ಖಾದ್ಯವನ್ನು ಮಾಡುತ್ತಾರೆ.

ಬಿಲ್ಲವರು ಅಷ್ಟಮಿ ಹಬ್ಬದಂದು ಎಲೆಯ ತಿಂಡಿಯನ್ನೇ ಪ್ರಧಾನವಾಗಿ ಸಿದ್ಧಪಡಿಸಬೇಕೆಂಬ ಸಂಪ್ರದಾಯದ ಹಿನ್ನೆಲೆಯಲ್ಲಿ ಮನೆಗಳಲ್ಲಿ ಸಾಮಾನ್ಯವಾಗಿ ಬುಟ್ಟಿ ಹಾಗೂ ಹೊಂಗಾರಿನ ಎಲೆಗಳನ್ನು ಬಳಸಿ ಉಡಾರಿಗೆ, ಮುಂಡೇವು ಎಲೆಗಳನ್ನು ಬಳಸಿ ಮೂಡೆ ಅಥವಾ ಹಲಸಿನ ಎಲೆಗಳನ್ನು ಬಳಸಿ ಗುಂಡ ಎಂಬ ತಿಂಡಿಗಳನ್ನು ಮಾಡುತ್ತಾರೆ. ಮ್ಯಾಲರು ತಿಥಿ ದಿನದಂದು ಬಾಳೆಕಾಯಿಯ ಪಲ್ಯ ಮಾಡುವುದು ಮುಖ್ಯವಾಗುತ್ತದೆ.  ತಮ್ಮ ದೇವರಿಗೆ ಕೋಳಿ ಪಲ್ಯ, ದೋಸೆ ಹಾಗೂ ಕಳ್ಳನ್ನೂ ಎಡೆ ಮಾಡುವುದು ಅವರ ಪದ್ಧತಿಯಾಗಿದೆ.

ಜಿಲ್ಲೆಯ ಜನತೆ ಕೆಲವು ಸೊಪ್ಪು ಹಾಗೂ ಕಷಾಯಗಳನ್ನು ಸಾಂಪ್ರದಾಯಕ ಔಷಧಿಯಾಗಿಯೂ ಬಳಸುವುದುಂಟು. ಚಗಟೆ, ಕಾಡು ಕೆಸುವಿನಂತಹ ಸೊಪ್ಪುಗಳು, ಅಡ್ಕಬಾರೆ ಕಾಯಿಯನ್ನು ತಿಂದರೆ ಆರೋಗ್ಯಕ್ಕೆ ಒಳ್ಳೆಯದೆಂದು ನಂಬುತ್ತಾರೆ. ಆಟಿ ತಿಂಗಳಿನಲ್ಲಿ ಆಟಿ ಹುಲ್ಲಿನ ಕಷಾಯ ಕುಡಿದರೆ ಹೊಟ್ಟೆಯಲ್ಲಿನ ಹುಳು ಸಾಯುತ್ತವೆಂಬ ತಿಳುವಳಿಕೆ ಇದೆ. ಹಾಗೆಯೇ ಹಾಲೆಮರದ ಮದ್ದು ಸರ್ವರೋಗ ನರೋಧಕ ಶಕ್ತಿ ಹೊಂದಿದೆ ಎನ್ನುತ್ತಾರೆ.  ಅಂತೆಯೇ ಆಟಿ ಅಮಾವಾಸ್ಯೆಯಂದು ಮುಂಜಾನೆ ನಸುಕು ಇರುವಾಗಲೇ ಹಾಲೆ ಮರದ ಬಳಿ ಹೋಗಿ, ವಿವಸ್ತ್ರಾಗಿ ಮರದ ಬುಡವನ್ನು ಕಲ್ಲಿನಿಂದ ಜಜ್ಜಿ, ತೊಗಟೆ ತೆಗೆದು, ಅದಕ್ಕೆ ಶುಂಠಿ, ಕಾಳುಮೆಣಸು ಸೇರಿಸಿ, ಚೆನ್ನಾಗಿ ಕುಟ್ಟಿ, ಹಿಂಡಿ ತೆಗೆದ ರಸವನ್ನು ಕುಡಿವ ಪದ್ಧತಿಯೇ ಇದೆ.  ಇದನ್ನು ಮದ್ದು ಕುಡಿಯುವುದು ಎನ್ನುತ್ತಾರೆ.

ಕದಿರು ಹಬ್ಬದಂದು ಕ್ರೈಸ್ತರು ಮಾಂಸಾಹಾರಕ್ಕೆ ಬದಲು ಶಾಖಾಹಾರವನ್ನು ಬಾಳೆ ಎಲೆಯಲ್ಲಿ ಊಟ ಮಾಡುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ. ಸಾಂತ್‌ಮರಿಯ ಉತ್ಸವದಲ್ಲಿ ಕೆಂಪು ಕಲ್ಲುಸಕ್ಕರೆಯನ್ನು ವಿಶೇಷವಾಗಿ ಬಳಸುತ್ತಾರೆ. ಆಟಿ ಮಾಸದ ಅಮವಾಸ್ಯೆಯಲ್ಲಿ ಪಿತೃಗಳಿಗೆ ಎಡೆ ಹಾಕುವವರು ಅಂದು ಅನ್ನ, ಕೆಸು, ಚಗಟೆ, ನುಗ್ಗೆಸೊಪ್ಪುಗಳ ಪಲ್ಯದೊಂದಿಗೆ ಮೀನಿನ ಸಾರನ್ನು ಸಾಮಾನ್ಯವಾಗಿ ಮಾಡುತ್ತಾರೆ. ಕೆಲವರು ತಮ್ಮ ಹಿರಿಯರು ವಿಶೇಷವಾಗಿ ಬಳಸುತ್ತಿದ್ದ ವೀಳ್ಯ, ತಂಬಾಕು, ಶರಾಬುಗಳನ್ನೂ ಎಡೆಯೊಂದಿಗೆ ಇಡುತ್ತಾರೆ. ಆಟಿ ಹಾಗೂ ಸೋಣ ಸಂಕ್ರಾಂತಿಗಳಂದು ಹಲಸಿನಬೀಜ ಬೇಯಿಸಿ, ಮನೆಯ ಹೊಸ್ತಿಲಿಗೆ ಇಟ್ಟು ಪೂಜೆ ಮಾಡಿ, ತಾವೂ ತಿನ್ನುತ್ತಾರೆ. ಬ್ಯಾರಿಗಳಲ್ಲಿ ಕೋಳಿಚೋರು (ಅನ್ನ, ಸಾಂಬಾರು) ಅಲ್ಲದೆ, ಒಣದ್ರಾಕ್ಷಿ, ಗೋಡಂಬಿಗಳಲ್ಲದೆ ಬಣ್ಣ ಹಾಕಿದ ಕುಷ್ಕ, ಪನ್ನೀರು ಹಾಕಿ, ವಿಶೇಷವಾಗಿ ತಯಾರಿಸಿದ ಎಸ್ಸೆನ್ಸ್‌ಡೆಚೋರು, ಈದ್‌ಮಿಲಾದ್‌ನಂತಹ ಹಬ್ಬಾಚರಣೆಗಳಲ್ಲಿ ಮಾಡುವ ಜರ್ದಾ ಪಲಾವ್, ಮಿಟ್ಟಾ ಪಲಾವ್ ಮೊದಲಾದ ತುಪ್ಪಾನ್ನಗಳು, ಬಾದಷಹ, ದಮ್ ಬಿರಿಯಾನಿ, ಮೊಗಲಾನಿ ಮೊದಲಾದವು ಅವರವರ ಅನುಕೂಲಕ್ಕೆ ತಕ್ಕಂತೆ ವಿಶೇಷ ಆಹಾರವಾಗಿ ಬಳಕೆಯಾಗುತ್ತದೆ. ರಮ್ಜಾನ್ ತಿಂಗಳಲ್ಲಿ ರುಬ್ಬಿದ ಅಕ್ಕಿಹಿಟ್ಟಿನಿಂದ ಮಾಡುವ ಎರಡು ಮೂರು ರೀತಿಯ ರೊಟ್ಟಿಗಳು, ಚುಟ್ಟುಬರ್ತ್ತೆ ಕರಿ, ಮೊಲವು ಕರಿ, ಬೆಳ್ತೆಕರಿ, ಪಚ್ಚಕ್ಕರಿ ಮೊದಲಾದ ಮೀನಿನ ಎಸರುಗಳು ಮತ್ತಿತರ ಮೀನಿನ ಪದಾರ್ಥಗಳು ಬ್ಯಾರಿಗಳಲ್ಲಿನ ಆಹಾರ ರುಚಿ, ವೈವಿಧ್ಯಕ್ಕೆ ಹೆಸರಾಗಿವೆ.

**ಉಡುಗೆ–ತೊಡುಗೆ**

ಒಂದು ಪ್ರದೇಶದ ಹವಾಗುಣ, ಅಲ್ಲಿನವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಅಲ್ಲದೆ ಧಾರ್ಮಿಕ ನಂಬುಗೆಗಳು ಅಲ್ಲಿನ ನಿವಾಸಿಗಳ ಉಡುಗೆ–ತೊಡುಗೆಗಳ ಮೇಲೆಯೂ ಪ್ರಭಾವ ಬೀರುತ್ತವೆ. ಇದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯೂ ಅಗತ್ಯವಾದ ನಿದರ್ಶನಗಳನ್ನು ಒದಗಿಸುತ್ತದೆ.

ಕರಾವಳಿಯ ಧಗೆಯಿಂದಾಗಿ ಇಲ್ಲಿನ ಗಂಡಸರು ಮನೆಯಲ್ಲಿದ್ದಾಗ ಬಹುಮಟ್ಟಿಗೆ ತುಂಡು ಪಂಚೆ ಉಟ್ಟು, ಮೈಮೇಲೆ ಒಂದು ಅಂಗವಸ್ತ್ರವನ್ನಷ್ಟೇ ಹಾಕಿಕೊಳ್ಳುವುದು ಸಾಮಾನ್ಯ. ಕೆಳವರ್ಗದ ಗಂಡಸರು ಸೊಂಟಕ್ಕೆ ಲಂಗೋಟಿಕಟ್ಟಿ, ತಲೆಗೆ ಮುಟ್ಟಾಳೆ ಇಟ್ಟುಕೊಂಡು ಕೃಷಿ ಕೆಲಸ ಮಾಡುತ್ತಿದ್ದುದು ಸಾಮಾನ್ಯವಾಗಿದ್ದಿತು. ಕೃಷಿ ಕೆಲಸದ ಮಹಿಳೆಯರೂ ಬಿಸಿಲಿನ ಝಳದಿಂದ ರಕ್ಷಣೆಗಾಗಿ ಮುಟ್ಟಾಳೆ ಧರಿಸುವುದು ಈಗಲೂ ರೂಢಿಯಾಗಿದೆ. ಮಳೆಯ ಸಂದರ್ಭದಲ್ಲಿ ಹೆಂಗಸರಾಗಲೀ, ಗಂಡಸರಾಗಲೀ, ತಲೆಯಿಂದ ಮೊಳಕಾಲವರೆಗೆ ರಕ್ಷಣೆ ಮಾಡುವ ಗೊರಬು, ಪನೋಳಿ ಅಥವಾ ಕಿಡಿಂಜೆಲು ಇಟ್ಟುಕೊಂಡು ಗದ್ದೆ ಕೆಲಸ ಮಾಡುತ್ತಾರೆ. ಗಂಡಸರು, ಅನುಕೂಲಸ್ಥರು ವಿಶೇಷ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಪಂಚೆ, ಶರ್ಟು, ಕೋಟು ಧರಿಸಿ, ತಲೆಗೆ ರುಮಾಲು ಅಥವಾ ಟೋಪಿ ಇಟ್ಟುಕೊಳ್ಳುವ ಪದ್ಧತಿ ಹೊಂದಿದ್ದರು. ಮದುವೆಯ ಸಂದರ್ಭದಲ್ಲಿ ವರನು ಬಿಳಿ ಕಚ್ಚೆಪಂಚೆ ಉಟ್ಟು, ಬಿಳಿ ಶರ್ಟು ತೊಟ್ಟು, ಶಲ್ಯ ಹಾಕಿಕೊಂಡು, ತಲೆಗೆ ಪೇಟ ಧರಿಸುವುದನ್ನು ಸಂಪ್ರದಾಯವಾಗಿ ಅನುಸರಿಸುತ್ತಾರೆ.

ಗ್ರಾಮೀಣ ಭಾಗದ ಕೃಷಿಕ ಮಹಿಳೆಯರು ಕೆಲವೆಡೆ ಗೇಂಟಿಕಟ್ಟಿ (ಒಗ್ಗೇರಿಕಟ್ಟಿ) ಸೀರೆ ಉಡುವುದುಂಟು. ತೋಟ, ಕಾಡುಗಳಲ್ಲಿ ಕೆಲಸ ಮಾಡುವವರಿಗೆ ಇದು ಅನುಕೂಲವಾದ ರೀತಿಯ ಉಡುಪಾಗಿತ್ತು ಎನ್ನಲಾಗುತ್ತದೆ. ಇಂಥಾ ಸರಳ ಉಡುಪಿಗೆ ಅವರ ಆರ್ಥಿಕ ಸ್ಥಿತಿಯೂ ಕಾರಣವಾಗಿರಬಹುದು. ಆದರೆ ಈ ಬಗೆಯ ಉಡುಪು ೧೬ನೇ ಶತಮಾನದಷ್ಟು ಹಳೆಯ ಪದ್ಧತಿಯಾಗಿತ್ತು ಹಾಗೂ ರಾಣಿ ಅಬ್ಬಕ್ಕ ಮತ್ತು ಆಕೆಯ ಸೇವಕರೂ ಇದೇ ಬಗೆಯ ವಸ್ತ್ರ ಧರಿಸುತ್ತಿದ್ದರು ಎಂಬುದುಕ್ಕೆ "ಸಿಪಾಯಿಗಳು... ಇಲ್ಲಿಯ ಪದ್ಧತಿಯಂತೆ ಹೆಚ್ಚು ಬಟ್ಟೆ ಹಾಕದೆ ಅರೆಬೆತ್ತಲೆಯಾಗಿದ್ದರು. ಸೊಂಟಕ್ಕೆ ಒಂದು ತುಂಡು ಬಟ್ಟೆ ಮತ್ತು ಹೆಗಲ ಮೇಲೆ ಅಡ್ಡ ಹೊದಿಗೆಯಾಗಿ ಕಟ್ಟಿಕೊಂಡ ಒಂದು ವಸ್ತ್ರ ಇಷ್ಟೇ – ಅವರ ಉಡುಪು... ರಾಣಿಯು... ಸೊಂಟದಿಂದ ಕೆಳಕ್ಕೆ ಮಂದವಾದ ಬಿಳಿಯ ಹತ್ತಿ ಸೀರೆ ಉಟ್ಟಿದ್ದಳು. ಕಾಲಿಗೆ ಪಾದರಕ್ಷೆಗಳಿರಲಿಲ್ಲ... ರಾಣಿ ತನ್ನ ಸೊಂಟದಿಂದ ಮೇಲಕ್ಕೆ ತಲೆಗೆ ಕಟ್ಟಿದ ಮತ್ತು ತೋಳುಗಳು ಹಾಗೂ ಎದೆಯ ಮೇಲೆ ಇಳಿಯ ಬಿಟ್ಟ ಬಟ್ಟೆಯಲ್ಲದೆ ಬೇರೆ ಬಟ್ಟೆ ಹಾಕಿರಲಿಲ್ಲ......" (ಸುದರ್ಶನ, ೧೯೭೭,ಪು. ೮೬)ಎಂಬ ಮಾತುಗಳಿಂದ ವೇದ್ಯವಾಗುತ್ತದೆ.

ಮುಸ್ಲಿಂ ಮಹಿಳೆಯರು ಬುರ್ಕಾ ಧರಿಸುವುದು, ಪುರುಷರು ನಮಾಜಿಗೆ ಹೋಗುವಾಗ ಟೊಪ್ಪಿ ಇಟ್ಟುಕೊಳ್ಳುವುದು, ಪಾದ್ರಿಗಳು ಉದ್ದನೆಯ ನಿಲುವಂಗಿ ತೊಟ್ಟುಕೊಳ್ಳುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಾಮಾನ್ಯವಾಗಿ ಕಂಡುಬರುತ್ತದೆ. ಪುರೋಹಿತರು ಪೌರೋಹಿತ್ಯದ ಸಂದರ್ಭದಲ್ಲಿ ಮಡಿ ಪಂಚೆ ಉಟ್ಟು, ಮೈಮೇಲೊಂದು ಉತ್ತರೀಯ ಹಾಕಿಕೊಳ್ಳುವುದು ಸಂಪ್ರದಾಯ ಎನಿಸಿಕೊಳ್ಳುತ್ತದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಳೆಯ ತಲೆಮಾರಿನ ಪುರುಷರು ಕಿವಿಗೆ ಒಂಟಿ ಎಂಬ ಆಭರಣ ಧರಿಸಿಕೊಳ್ಳುತ್ತಿದ್ದರು. ಮಲೆಕುಡಿಯ ಗಂಡಸರು ಸಾಂಪ್ರದಾಯಿಕವಾಗಿ ಕಿವಿಗೆ ಕುಂಡಲ, ಕುಡ್ಕೆ, ಕೊಡಂಗೆಯಂತಹ ಆಭರಣ ಇಟ್ಟು, ಉದ್ದ ಕೂದಲ ತಲೆಗೆ ಹೂ ಮುಡಿಯುತ್ತಿದ್ದುದೂ ಉಂಟು. ಹಿಂದೆ ಮಕ್ಕಳನ್ನು ಸರ, ನೇವಳ, ಕೈಕಪ್ಪ, ಉಂಗುರ, ಹುಲಿಯುಗುರು, ಕಚ್ಚೆತಾಳಿ (ಹೆಚ್ಚಾಗಿ ಜೈನರಲ್ಲಿ) ಮೊದಲಾದವುಗಳಿಂದ ಅಲಂಕರಿಸುತ್ತಿದ್ದರು. ಹುಟ್ಟಿದ ಮಗು ಸಾಯಬಾರದೆಂಬ ಆಶಯದಿಂದ ಮಗು ಹುಟ್ಟಿದ ತಕ್ಷಣ ಅದರ ಮೂಗಿನ ಒಂದು ಭಾಗವನ್ನು ತುಸು ಸೀಳುವ, ಸ್ವಲ್ಪ ಕಾಲದ ಬಳಿಕ ಅದಕ್ಕೆ ಚಿನ್ನದ ರಿಂಗನ್ನು ಇಡುವ ನಡವಳಿಕೆ ಜೋಗಿಗಳಲ್ಲಿ ಇದ್ದಿತು.

ತುಳುವಿನ ಕನ್ಯಾಪು ಪಾಡ್ದನದಲ್ಲಿ ಕಿವಿಗೆ ಎಣ್ಣೆ ಓಲೆ, ಎಸಳು ಬುಗುಡಿ, ಹರಳಕೊಪ್ಪ, ಮುಳ್ಳು ಬಲಸರ, ಮುದ್ದಾದ ಮುಖಕ್ಕೆ ಪಚ್ಚೆ ಕಲ್ಲಿನ ಮೂಗುತಿ, ಹಣೆಗೆ ಮುತ್ತು ಬೈತಲೆ, ತಲೆಗೆ ಉದ್ರಿಗೊಂಡೆ, ರಾಕುಟಿ, ಸಣ್ಣ ಬೆರಳಿಗೆ ಬಿನ್ಯೋಟಿ ಉಂಗುರ, ಸೊಂಟಕ್ಕೆ ಪಟ್ಟಿ ಸರಪಳಿ, ಕಾಲಿಗೆ ಉರಿಗೆಜ್ಜೆ, ಕೈಗೆ ಕಂಕಣ ಬಳೆ, ಪೆರ್ನಡೆ ಬಳೆಗಳನ್ನು ತೊಟ್ಟ ವರ್ಣನೆ ಇದ್ದು, ಇದು ಪ್ರಾಚೀನ ತುಳು ಮಹಿಳೆಯರು ಧರಿಸುತ್ತಿದ್ದ ಸಾಂಪ್ರದಾಯಿಕ ಆಭರಣಗಳ ದಾಖಲೆಯೂ ಆಗಿದೆ. (ಗ್ರಾಮೀಣ ಉಡುಗೆ ತೊಡುಗೆಗಳು, ಪು. ೨೪೦). ಕಾಲಾಂತರದಲ್ಲಿ ಇಲ್ಲಿನ ಸ್ತ್ರೀಯರು ಅವರವರ ಅನುಕೂಲಕ್ಕೆ ತಕ್ಕಂತೆ ತಾಳೆಗರಿಯ ಓಲೆ, ಚಿನ್ನದ ಓಲೆ, ಮೂಗುತಿ, ಸೊಂಟಪಟ್ಟಿ, ವಿವಿಧ ಬಗೆಯ ಸರಗಳು, ಅಡ್ಡಿಗೆ, ಪಾಗಡೆ, ಬುಗುಡಿ, ಕೊಪ್ಪು, ಚಿಂತಾಕ, ಡಾಬು, ಬೈತಲೆಬಟ್ಟು, ಕಾಲ ಬೆರಳಿಗೆ ಮಿಂಚು, ಸುತ್ತುಉಂಗುರ ಮೊದಲಾದ ಆಭರಣ

ಧರಿಸುವುದು ಸಾಮಾನ್ಯವಾಗಿತ್ತು. ವಿವಾಹ ಕಾಲದಲ್ಲಿ ಬ್ರಾಹ್ಮಣ ವಧುವು ತಲೆಗೆ ರಾಕಟೆ, ಅಡ್ಡೇದಗೆ, ಜಡೆಗೊಂಡೆ, ಮಲ್ಲಿಗೆ ಮುಗುಟಿನ ಮಾಲೆ, ಕೈಗೆ ತ್ರಾಸುಬಳೆ, ಮುರುಗಿನ ಬಳೆ, ತೋಳಿಗೆ ದೋರೆ, ಚಳಕಿ, ಕಿವಿಗೆ ತಾಂಗ ಸರಪುಳಿಯ ಗಿಣಿಓಲೆ, ಪಾದಕ್ಕೆ ಪಾಡಗ, ಪೈಜಣಿ ಮೊದಲಾದ ಆಭರಣಗಳನ್ನು ಧರಿಸುತ್ತಿದ್ದುದುಂಟು. ವರನು ಕಿವಿಗೆ ಒಂಟಿ ಧರಿಸಿದರೆ ವಧುವು ಕಿವಿಗೆ ಓಲೆಯಲ್ಲದೆ ಮೂಗಿಗೆ ಮೂಗುತಿಯನ್ನು ಧರಿಸುವುದು ಮಂಗಳಕರವೆಂದು ಭಾವಿಸುತ್ತಾರೆ. ಮೂಗು ಚುಚ್ಚಿಸಿಕೊಳ್ಳದ ಕನ್ಯೆ ಧಾರೆ ಎರೆಸಿಕೊಳ್ಳಲು ಅನರ್ಹಳೆಂಬ ಕಟ್ಟುಪಾಡು ಇವರಲ್ಲಿದೆ. ವಿಶ್ವಕರ್ಮ ಮಹಿಳೆಯರು ಕೊತ್ತುಂಬರಿ ಸರ, ಕಾಯಿಪಲ್ಲೆಸರ, ಚಕ್ರಸರ ಮೊದಲಾದ ವಿಶಿಷ್ಟ ವಿನ್ಯಾಸದ ಆಭರಣಗಳನ್ನೂ ಬಳಸುತ್ತಾರೆ. ಜಿಲ್ಲೆಯ ಕ್ರೈಸ್ತರು ಧರಿಸುವ ಶಿಲುಬೆ ಆಭರಣ ಗಾಥಿಕ್ ಶೈಲಿಯಲ್ಲಿರುವುದನ್ನು ಗುರುತಿಸಲಾಗಿದೆ. ಪೆಸ್ಪೆತ್, ಕಾರ್‌ಪೂಲ್ ಸರಪಳಿ, ಅಂಕುಡೊಂಕು ಬಳೆ ಮೊದಲಾದವು ಇವರು ಧರಿಸುವ ಇತರ ಕೆಲವು ಆಭರಣಗಳಾಗಿವೆ. ಕೇರಳ ಮೂಲದ ಮುಸ್ಲಿಮರು ಕೈಗೆ ಇಡಿಕಾಜಿ ಕೊತ್ತುಂಬಳೆ, ಕಿವಿಗೆ ಅಲಿಕ್ಕತ್ತ್, ಪರಪಲೆ ಅಲಿಕತ್ತ್, ಕೊಂಬನ್ನಾರ್, ಮೂನೆಟ್ಟಿ, ಸೊಂಟಕ್ಕೆ ಕೊಯ ಮಲಿಕ್ಕ್, ಕಂಠಕ್ಕೆ ಜಡೆಯ ಮುಡಿಪ್ಪಾಲೆ ಮುಂತಾದ ಆಭರಣಗಳನ್ನು ಧರಿಸುವುದು ಪದ್ಧತಿ. ಕ್ಯಾಥೋಲಿಕ್ ಪಂಥದ ಮಹಿಳೆಯರು ಇತ್ತೀಚೆಗೆ ಸ್ಥಳೀಯ ಪ್ರಭಾವಕ್ಕೆ ಅನುಗುಣವಾಗಿ ಹಣೆಯಲ್ಲಿ ಬೊಟ್ಟು ಇಡುವುದು, ವಿವಾಹಿತೆಯರು ಕೊರಳಿಗೆ ಕರಿಮಣಿ ಸರ ಧರಿಸುವುದು ಕಂಡುಬರುತ್ತದೆ.

**ವಿಧಿ–ನಿಷೇಧಗಳು**

ಸಾಂಪ್ರದಾಯಿಕವಾಗಿ ಭೂತಗಳ ವೇಷ ಧರಿಸಲು ನಿಗದಿಯಾದ ಪಂಬದ ಕಲಾವಿದರು ತಲೆಯಲ್ಲಿ ಜುಟ್ಟು ಬಿಡುತ್ತಾರೆ. ಕಾಲುಂಗುರ, ಓಲೆ, ಕಾಲುಕಡಗ ಹಾಗೂ ಕೈಗೆ ಬಳೆಗಳನ್ನು ಧರಿಸುತ್ತಾರೆ. ರಾಜನ್ ದೈವ ಪಾತ್ರಧಾರಿಗಳು ಅಂಗಿ ಧರಿಸದೇ ಓಡಾಡುವ ನಿಯಮ ಪಾಲಿಸುತ್ತಾರೆ. ಭೂತದ ವೇಷ ಹಾಕುವ ಕಲಾವಿದರು ಆ ಸಂದರ್ಭದಲ್ಲಿ ಆಹಾರಶುದ್ಧಿಯನ್ನು ಪರಿಪಾಲಿಸುವುದು ಅಗತ್ಯ ಅಥವಾ ಉಪವಾಸ ಇರಬೇಕಾಗುತ್ತದೆ. ಆರಾಧನೆಯ ಅಂಗವಾಗಿ ಎಣ್ಣೆ ತೆಗೆದುಕೊಂಡ ಬಳಿಕ ಎಳನೀರು ಬಿಟ್ಟು ಬೇರೇನೂ ಸೇವಿಸುವಂತಿಲ್ಲ.

**ಪತ್ತನಾಜೆ :** ತುಳು ನಾಡಿನಲ್ಲಿ ದೀಪಾವಳಿಯಾಗುತ್ತಿದ್ದಂತೆಯೇ ಭೂತಕೋಲ, ಕೋಳಿ ಅಂಕ, ಯಕ್ಷಗಾನ, ನಾಗಮಂಡಲ, ಢಕ್ಕೆ ಬಲಿ ಮೊದಲಾದ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಮುಂದೆ, ವೃಷಭ ಮಾಸದ ಹತ್ತನೇ ದಿನದ ಪತ್ತನಾಜೆ ಬಳಿಕ ಮಳೆಗಾಲ ಆರಂಭವಾಗಿ ಕೃಷಿ ಚಟುವಟಿಕೆಗಳಲ್ಲಿ ರೈತರು ತೊಡಗುವುದರಿಂದ ಆ ಎಲ್ಲಾ ಆರಾಧನೆ ಆಚರಣೆಗಳಿಗೆ ತಾತ್ಕಾಲಿಕವಾಗಿ ವಿರಾಮ ಕೊಡಲಾಗುತ್ತದೆ. ಅಂದರೆ, ಆ ದಿನ ಭೂತಕೋಲಗಳಲ್ಲಿ ಬಳಕೆಯಾಗುವ ಗಗ್ಗರ, ಆಭರಣಾದಿಗಳನ್ನು ಭಂಡಾರ (ಪೆಟಾರಿ)ದಲ್ಲಿಡುತ್ತಾರೆ. ಯಕ್ಷಗಾನ ಮೇಳಗಳು ತಿರುಗಾಟ ಮುಗಿಸಿ, ತಾವು ಹೊರಟ ದೇವಾಲಯಕ್ಕೇ ಹಿಂದಿರುಗಿ ಸೇವೆಯ ಆಟದೊಂದಿಗೆ ಗೆಜ್ಜೆ ಬಿಚ್ಚಿ ತಿರುಗಾಟಕ್ಕೆ ಮಂಗಳ ಹಾಡುವುದೂ ಈ ಪತ್ತನಾಜೆ ದಿನವೇ. ದೇವಾಲಯಗಳಲ್ಲಿ ಗ್ರಾಮದ ಅಥವಾ ಮಾಗಣೆಯ ದೈವಕ್ಕೆ ಸೀಯಾಳದ ಅಭಿಷೇಕ ಮಾಡಿ ಒಳ್ಳೆಯ ಮಳೆ–ಬೆಳೆಗಾಗಿ ಪ್ರಾರ್ಥಿಸುವುದು, ಕೋಟೆಕಾರು ಪಿಲಿಚಾಮುಂಡಿ ಕ್ಷೇತ್ರದಲ್ಲಿ ವರ್ಷದ ಕೊನೆಯ ಬಂಡಿ ಉತ್ಸವ ನಡೆಯುವುದೂ ಪತ್ತನಾಜೆ ದಿನವೇ. ಪತ್ತನಾಜೆ ದಿನದ ಬಳಿಕ ಆಟ, ಉತ್ಸವಗಳನ್ನು ಮಾಡುವಂತಿಲ್ಲ ಎಂಬ ನಿಷೇಧ ಹಿಂದೆ ಇದ್ದಿತು. ಇತ್ತೀಚೆಗೆ ಆಟಗಳನ್ನು (ಯಕ್ಷಗಾನ) ಮಾತ್ರ ಪತ್ತನಾಜೆಯ ನಂತರವೂ ಮನರಂಜನೆಗಾಗಿ ಆಡುವುದೂ ಉಂಟು.

**ಪೊಲಿ :** ತುಳು ಸಂಸ್ಕೃತಿಯಲ್ಲಿ ವಿಶೇಷವಾಗಿ ಬಳಕೆಯಾಗುವ ಶಬ್ದ 'ಪೊಲಿ'. ಕದಿರು ಹಬ್ಬ ಮತ್ತಿತರ ಆಚರಣಾ ವಿಧಿಗಳಲ್ಲಿ 'ಪೊಲಿ ಪೊಲಿ' ಎಂದು ಉಚ್ಚರಿಸುವುದು ಸಾಮಾನ್ಯವಾಗಿರುತ್ತದೆ. ಇದು ದವಸಧಾನ್ಯಗಳ ಸಂಪತ್ತು, ಹುಲುಸನ್ನು, ಸಮೃದ್ಧತೆಯನ್ನು ಸೂಚಿಸುವ ಪದ. ಕೊಡಗಿನ ಹುತ್ತರಿ ಹಬ್ಬದಲ್ಲಿಯೂ ಈ ಶಬ್ದ ಕೇಳಿಬರುತ್ತದೆ. ಘಟ್ಟದ ಮೇಲಿನ ಕೃಷಿಕರಲ್ಲಿನ ಹುಲಿಗ್ಯೋ, ಓಲಿಗ್ಯ ಇತ್ಯಾದಿ ಶಬ್ದರೂಪಗಳು ಇದರ ಸಂವಾದಿಗಳಾಗಿವೆ. ಹೀಗಾಗಿ ಇದೊಂದು ಕೃಷಿ ಸಂಸ್ಕೃತಿಯಿಂದ ಬಂದ, ದ್ರಾವಿಡ ಸಂಸ್ಕೃತಿಗೆ ಸಾಮಾನ್ಯವಾದ, ಶುಭದ ಆಶಯದ ನುಡಿ ಎನ್ನಬಹುದು.

**ಆಟಿ ಮಾಸ :** ರಾಜ್ಯದ ಇತರೆಡೆ ಆಷಾಢ ಎಂದು ಗುರುತಿಸುವ ರೀತಿಯಲ್ಲಿಯೇ ತುಳು ನಾಡಿನಲ್ಲಿ 'ಆಟಿ' ಮಾಸವಿದೆ. ಜುಲೈ ತಿಂಗಳ ಕರ್ಕಾಟಕ ಸಂಕ್ರಮಣದಿಂದ ಆಗಸ್ಟ್‌ನ ಸಿಂಹ ಸಂಕ್ರಮಣದವರೆಗಿನ ಕಾಲಾವಧಿಯ ಆಟಿ ಮಾಸವು ತುಳುವರ ಬದುಕಿನಲ್ಲಿ ಹಲವೊಂದು ವಿಶೇಷ ನಂಬಿಕೆ, ಆಚರಣೆಗಳಿಗೆ ಕಾರಣವಾಗಿದೆ. ಸುರಿವ ಜಡಿಮಳೆ, ಶೀತ, ಕ್ರಿಮಿಕೀಟಗಳ ಹಾವಳಿ, ಆಹಾರದ ಕೊರತೆಗಳಿಂದ ಜನ ತಲ್ಲಣಗೊಳ್ಳುವುದು ಹಿಂದೆ ಸಾಮಾನ್ಯವಾಗಿದ್ದಿತು. ಹೊಸದಾಗಿ ಮದುವೆಯಾದ ಗಂಡ–ಹೆಂಡತಿ ಈ ತಿಂಗಳಲ್ಲಿ ಒಂದೆಡೆ ಇರಬಾರದು ಎಂಬ ನಂಬಿಕೆಯಿಂದ, ಆಕೆ ತಪ್ಪದೇ ತೌರಿಗೆ ಬರಬೇಕೆಂಬ ಸಂಪ್ರದಾಯ ಹುಟ್ಟಿಕೊಂಡಿದೆ. ಕೃಷಿ ಕಾರ್ಯದ ಬಳಿಕ ಸಾಕಷ್ಟು ಬಿಡುವು

ಇರುವುದರಿಂದ, ಮನೆಯ ದೂಳು–ದುಂಬು ಕೊಡವಿ, ಮನೆಯಲ್ಲಿನ ಕಸದ ಮಾರಿಯನ್ನು ಹೊರಹಾಕಬೇಕೆಂದೂ ಅವರು ಭಾವಿಸುತ್ತಾರೆ. ಈ ತಿಂಗಳಲ್ಲಿ ಯಾವುದೇ ಶುಭಕಾರ್ಯಗಳನ್ನು ಮಾಡುವುದಿಲ್ಲ. ಬದಲಿಗೆ, ಇದನ್ನು ಸತ್ತವರ ತಿಂಗಳು ಎಂದು ಪರಿಗಣಿಸುತ್ತಾರೆ ಮತ್ತು ಅವರ ಪ್ರೀತ್ಯರ್ಥ ಎಡೆ ಇಟ್ಟು ಪೂಜಿಸುತ್ತಾರೆ. ಇದಕ್ಕೆ ಆಟಿದ ಅಗೆಲು ಎನ್ನುತ್ತಾರೆ. ಈ ಸಂದರ್ಭದಲ್ಲಿ ಆಟಿಕಳೆಂಜ ಎಂಬ ನೃತ್ಯ ಪ್ರದರ್ಶನವನ್ನು ನಲ್ಕೆ ಸಮುದಾಯದವರು ಮಾಡುತ್ತಾರೆ. ಆಟಿ ತಿಂಗಳ ದೋಷಗಳನ್ನು ಪರಿಹಾರ ಮಾಡುವುದು ಇದರಿಂದ ಸಾಧ್ಯವೆಂಬುದು ಸಾಮಾನ್ಯ ನಂಬಿಕೆಯಾಗಿದೆ. ಆಟಿಕಳೆಂಜ ಎಂದರೆ ಆಟಿಯ ದೋಷವನ್ನು ಕಳೆಯುವುದು ಎಂದರ್ಥ. ಆಟಿ ಅಮಾವಸ್ಯೆಯ ದಿನ ಕೃಷಿಕರು ತಮ್ಮ ಗದ್ದೆಗೆ ಕಳ್ಳಿ ನೆಡುವ ಅಥವ ಕಾಪು ಇಡುವ ಸಂಪ್ರದಾಯವೂ ಇದೆ. ಮುಳಿಹುಲ್ಲು, ಕಳ್ಳಿ, ಓಟೆ, ಈಚಲ, ನೆಕ್ಕಿಯಂತಹ ಕೆಲವು ಸೊಪ್ಪನ್ನು ಬಿದಿರಿನ ಅಂಡೆಯಲ್ಲಿಟ್ಟು ಅದನ್ನು ಕಾಸರಕನ ಮರದ ಗೆಲ್ಲಿನಲ್ಲಿ ಕಟ್ಟುತ್ತಾರೆ. ಸೊನ ಅಥವಾ ಕಾಸರಕನ ಗೆಲ್ಲನ್ನು ಗದ್ದೆಯ ಮಧ್ಯೆ ನೆಟ್ಟರೆ ಬೆಳೆಗೆ ದೃಷ್ಟಿ ತಾಗುವುದಿಲ್ಲ – ಎಂಬ ನಂಬಿಕೆ ಅವರಲ್ಲಿದೆ. ಮನೆಯವರೆಲ್ಲಾ ಬಾಳೆಎಲೆಯಲ್ಲಿ ತೇರು ಹೂ, ವೀಳ್ಯದೆಲೆ, ಅಡಕೆ, ನಾಣ್ಯ ಹಾಗೂ ಹಣತೆ ಇಟ್ಟು, ಅದನ್ನು ತಮ್ಮ ತಲೆಯ ಮೇಲಿಟ್ಟುಕೊಂಡೇ ಕೆರೆಯ ನೀರಿನಲ್ಲಿ ಮುಳುಗಿ ತೇಲಿಬಿಡುತ್ತಾರೆ. ಆಟಿ ಅಮಾವಸೆಯಂದು ಹಾಲೆಮರದ ತೊಗಟೆಯಿಂದ ತಯಾರಿಸಿದ 'ಮದ್ದು' (ರಸ) ಕುಡಿಯುವ ಪದ್ಧತಿಯೂ ಇದೆ (ಸೀಮೆ, ಪು. ೨೧).

**ಸೋಣ:** ತುಳುವರು ಶ್ರಾವಣವನ್ನು ಸೋಣವೆಂದು ಗುರುತಿಸುತ್ತಾರೆ. ಆಟಿಯು ಅವರಿಗೆ ಹಲವು ನಿಷಿದ್ಧಗಳ ಮಾಸವಾದರೆ, ಸೋಣವು ಪವಿತ್ರವಾದುದೆಂದು ಭಾವಿಸಲಾಗಿದೆ. ಅಂತೆಯೇ, ಇದರಲ್ಲಿ ಹಲವು ಹಬ್ಬ ಆಚರಣೆಗಳು ನಡೆಯುತ್ತವೆ. ಆಟಿ ತಿಂಗಳಲ್ಲಿ ಆಟಿಕಳೆಂಜ ಬಂದರೆ, ಸೋಣದಲ್ಲಿ ಸೋಣ ಜೋಗಿ ಅಥವಾ ಜೋಗಿ ಪುರುಷನ ಕುಣಿತ ಕಾಣಬರುವುದು ವಿಶೇಷವಾಗಿದೆ. ನಲಿಕೆಯವರು ತಮ್ಮ ಚಿಕ್ಕ ಮಕ್ಕಳಿಗೆ ಕೆಂಪು ಪ್ರಧಾನವಾದ ಉಡುಗೆ–ತೊಡುಗೆ ವೇಷ ಹಾಕಿಸಿ, ತೆಂಬರೆ ಬಾರಿಸಿಕೊಂಡು ಹಾಡು ಹೇಳುತ್ತಾ ಮನೆ ಮನೆ ಮುಂದೆ ಕುಣಿಸಿ ದಾನ ಪಡೆಯುತ್ತಾರೆ. ಜೋಗಿ ಬರುವ ಸಮಯಕ್ಕೆ ಮನೆಯವರು ತಮ್ಮ ತುಳಸಿಕಟ್ಟೆ ಮುಂದೆ ದಾನದ ವಸ್ತುಗಳಿರುವ ಗೆರಸೆಯನ್ನು, ಮಸಿ ನೀರು, ಭತ್ತ, ದೀಪವನ್ನು ಇಟ್ಟಿರುತ್ತಾರೆ. ಜೋಗಿಯು ಮಸಿ ನೀರನ್ನು ಎಲ್ಲೆಡೆ ಚಿಮುಕಿಸುತ್ತಾನೆ. ಹಾಡಿಗೆ ತಕ್ಕಂತೆ ಕುಣಿತ ಮಾಡಿ, ದಾನಿಗಳಿಗೆ ಶುಭ ಹಾರೈಸುತ್ತಾನೆ. ಗೆರಸೆಯಲ್ಲಿನ ದಾನ ಪಡೆದು, ಮುಂದಿನ ಮನೆಗೆ ಹೋಗುತ್ತಾರೆ. ಸೋಣ ಸಂಕ್ರಮಣದಂದು ಜಿಲ್ಲೆಯ ಎಲ್ಲಾ ದೈವಸ್ಥಾನಗಳ ಬಾಗಿಲು ತೆಗೆದು ಪೂಜಿಸುತ್ತಾರೆ (ಆಟಿ ತಿಂಗಳಲ್ಲಿ ದೈವ ಸ್ಥಾನಗಳಲ್ಲಿ ಪೂಜೆ ಇರುವುದಿಲ್ಲ).

## ಹಬ್ಬ–ಆರಾಧನೆ

ಹಿಂದೂಗಳಿಗೆ ಯುಗಾದಿಯು ಹೊಸ ವರ್ಷಾರಂಭವಾದುದರಿಂದ, ಜಿಲ್ಲೆಯಲ್ಲಿಯೂ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಸೌರಮಾನ ಪದ್ಧತಿಯವರು 'ವಿಷು' ಹಬ್ಬ ಮಾಡುತ್ತಾರೆ. ಯುಗಾದಿ ಹಬ್ಬದಂದು ಮನೆದೇವರ ಮುಂದೆ ಹಣ್ಣು ತರಕಾರಿ ಹಾಗೂ ಒಂದು ಕನ್ನಡಿ ಇಟ್ಟು, ಪೂಜೆ ಮಾಡಿ, ಮಾರನೇ ಬೆಳಿಗ್ಗೆ ಎದ್ದೊಡನೆ ಆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ಪದ್ಧತಿ ಕೆಲವರಲ್ಲಿದೆ. ಆ ದಿವಸ ಮನೆಯ ಯಜಮಾನ ಸ್ನಾನ ಮಾಡಿ, ಮಡಿಯುಟ್ಟು ಮನೆಯ ಪ್ರಧಾನ ಸ್ಥಾನದಲ್ಲಿ ಕುಳಿತುಕೊಂಡಾಗ ಮನೆಯ ಕಿರಿಯರೆಲ್ಲಾ ಆತನಿಗೆ ನಮಸ್ಕರಿಸುತ್ತಾರೆ. ಅದೇ ದಿನ ಗೇಣಿ ಒಕ್ಕಲುಗಳು ಬಂದು ಬೆಳೆ ಕಾಣಿಕೆಯ ರೂಪದಲ್ಲಿ ಕಾಯಿ–ಪಲ್ಲೆಗಳನ್ನು ಒಪ್ಪಿಸುವ ಪದ್ಧತಿ ಇದ್ದಿತು. ಜಿಲ್ಲೆಯಲ್ಲಿನ ಮರಾಠಿ ಕ್ಷತ್ರಿಯರ 'ದೇವರಮನೆ'ಯವರು ತಮ್ಮ ಮನೆ ಅಂಗಳದಲ್ಲಿ ಬಿದಿರಿನ ಕಂಬದ ತುದಿಗೆ ತಾಮ್ರದ ಚೊಂಬನ್ನು ಕವುಚಿಹಾಕಿ, ಮಾವಿನ ಎಲೆ, ಕೇಸರಿ ವಸ್ತ್ರ ಕಟ್ಟುತ್ತಾರೆ. ಬೆಳಿಗ್ಗೆ ಹೀಗೆ ಮಾಡಿ, ಪೂಜೆ, ಊಟ ಆದ ಮೇಲೆ ಮಧ್ಯಾಹ್ನಕ್ಕೆ ಕಂಬ ತೆಗೆಯುತ್ತಾರೆ. ಕೃಷ್ಣ ಜನ್ಮಾಷ್ಟಮಿ ಅಥವಾ ಗೋಕುಲಾಷ್ಟಮಿ ಇಲ್ಲಿನವರು ಆಚರಿಸುವ ದೊಡ್ಡ ಹಬ್ಬಗಳಲ್ಲಿ ಒಂದು. ಕೃಷ್ಣ ದೇವಾಲಯಗಳಲ್ಲಿ ವಿಶೇಷ ಪೂಜೆ ಇರುತ್ತದೆ. ವಿವಿಧ ಸ್ಪರ್ಧೆಗಳಿರುತ್ತವೆ. ಮಕ್ಕಳು ಕೋವಿಯಂತೆ ಸದ್ದು ಮಾಡುವ ಪೆಟ್ಲೋಳಿಗಳನ್ನು ಹಿಡಿದು ಆಟವಾಡುತ್ತಾರೆ. ವಿವಿಧ ವೇಷಗಳನ್ನು ಹಾಕುವುದೂ ಉಂಟು. ಉಡುಪಿಯಂತೆ ಮಂಗಳೂರಿನಲ್ಲಿಯೂ ಮೊಸರು ಕುಡಿಕೆ ಒಡೆಯುವ (ವಿಟ್ಲಪಿಂಡಿ) ಕಾರ್ಯಕ್ರಮಕ್ಕೆ ಬಹಳ ಜನ ಸೇರುತ್ತಾರೆ.

ಇತರೆಡೆಯಂತೆ ಗಣೇಶನ ದೊಡ್ಡ ವಿಗ್ರಹಗಳನ್ನಿಡುವ ಬದಲು ಹಬ್ಬದಂದು ತಂದ ಹುತ್ತದ ಮಣ್ಣು ಅಥವಾ ಸಗಣಿಯಿಂದ ಗಣೇಶನ ಮೂರ್ತಿ ಮಾಡಿ ಅಥವಾ ಕಲಶ ಇಟ್ಟು ಪೂಜಿಸಿ ಹಬ್ಬ ಮಾಡುವುದೇ ಈ ಭಾಗದಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ. ಸಾರ್ವಜನಿಕ ಗಣೇಶೋತ್ಸವಗಳೂ ನಡೆಯುತ್ತವೆ. ಗೌರಮ್ಮನಿಗೆ ಸಪ್ಪೆ ಆಹಾರವನ್ನು ನೈವೇದ್ಯ ಮಾಡುತ್ತಾರೆ. ಚೌತಿಯಲ್ಲಿ ಗಣೇಶನಿಗೆ ಕಬ್ಬು ನೈವೇದ್ಯ ಮಾಡದೇ ತಾವು

ಮೊದಲು ತಿನ್ನಬಾರದೆಂಬ ನಂಬಿಕೆಯೂ ಅಲ್ಲಲ್ಲಿ ಇದೆ. ಹೀಗೆಯೇ ಪಿತೃಪಕ್ಷ, ನವರಾತ್ರಿಗಳೂ ನಡೆಯುತ್ತವೆ. ಅಯ್ಯಪ್ಪ ವ್ರತಾಚರಣೆ ಈಚಿನ ಬೆಳವಣಿಗೆಯಾಗಿದೆ.

**ದೀಪಾವಳಿ:** ಬಲೀಂದ್ರ ಪೂಜೆ ಅಥವಾ ದೀಪಾವಳಿಯು ಜಿಲ್ಲೆಯ ಮತ್ತೊಂದು ಮುಖ್ಯ ಹಬ್ಬವಾಗಿದೆ. ತುಳುವರ ಪ್ರಕಾರ ಬಲೀಂದ್ರನು ಭೂಮಿ ತಾಯಿಯ ಪುತ್ರ ಅವನ ಕುರಿತು ಹಲವು ಪಾಡ್ದನಗಳು ಇವೆ. ಹಬ್ಬದ ಅಂಗವಾಗಿ, ತಮ್ಮ ದನಕರುಗಳ ಮೈತೊಳೆದು ಸಂಜೆಗೆ ಗದ್ದೆಗಳ ಬಳಿ ಅವುಗಳೊಂದಿಗೆ ಹೋಗುತ್ತಾರೆ. ತಮ್ಮ ತಮ್ಮ ಗದ್ದೆಗಳಲ್ಲಿ ಉರಿಯುತ್ತಿರುವ ಕೋಲುಗಳನ್ನು ನೆಟ್ಟು ಚೆಂದೋಳಿಗೆ ಹೂ, ಎಲೆ–ಅಡಿಕೆ, ಅವಲಕ್ಕಿ, ತೆಂಗಿನಕಾಯಿ ಇತ್ಯಾದಿಗಳನ್ನು ಇಟ್ಟು ಕೈಮುಗಿದು, 'ಆಷಾಡದ ಅಮಾವಾಸ್ಯೆ, ಶ್ರಾವಣ ನಂತರದ ಸಂಕ್ರಮಣ ಕಳೆದು, ಪುಯಿಂತೆಲ್ ತಿಂಗಳಿನ ಮೂರು ದಿನದ ಕೊಡಿ ಹಬ್ಬಕ್ಕೆ ಬಾ ಕಲ್ಕಿ ಬಲಿಯೇಂದ್ರ'ಎಂದು ಎಲ್ಲರೂ ಕೂಗುತ್ತಾರೆ. ತಮ್ಮ ಮನೆಯ ಮುಂದೆ ಬಲಕಿಮರ (ಬಲೀಂದ್ರ ಮರ) ನೆಟ್ಟು, ಅದರ ತುದಿಯಲ್ಲಿ ಹಣತೆ ಹಚ್ಚಿ ಅದನ್ನೂ ಪೂಜಿಸುತ್ತಾರೆ–ಹೀಗೆ ತುಳುವರಿಗೆ ದೀಪಾವಳಿ ಎಂದರೆ ಬಲೀಂದ್ರನ ಪೂಜೆ; ಬಲೀಂದ್ರನ ಪೂಜೆ ಎಂದರೆ ತಮ್ಮ ಬೆಳೆ–ಬೇಸಾಯದ ಆರಾಧನೆಯೇ ಆಗುತ್ತದೆ.

**ಕೆಡ್ಡಸ:** ಜಿಲ್ಲೆಯ ಕೃಷಿಕರು ಭೂತಾಯಿಯ ಬಗೆಗಿನ ಅತೀವ ಪ್ರೀತಿ, ಗೌರವಗಳಿಂದ ಮಾಡುವ ಒಂದು ಹಬ್ಬ ಇದು. ಈ ಅವಧಿಯಲ್ಲಿ (ಸಾಮಾನ್ಯವಾಗಿ ಫೆಬ್ರವರಿಯಲ್ಲಿ) ಭೂ ತಾಯಿಯು ಋತುಮತಿಯಾಗುತ್ತಾಳೆಂಬ ನಂಬಿಕೆ ಇದ್ದು, ಆ ಮೂರೂ ದಿನಗಳಲ್ಲಿ ಉಳುಮೆ ಅಥವಾ ಅಗೆತದ (ಕೃಷಿ) ಕಾರ್ಯಗಳನ್ನು ಮಾಡುವುದು ನಿಷಿದ್ಧವಾಗಿರುತ್ತದೆ. ನಾಲ್ಕನೇ ದಿನ ಆಕೆ ಸ್ನಾನ ಮಾಡಿ ಶುಚಿಯಾಗುತ್ತಾಳೆಂದೂ ನಂಬುತ್ತಾರೆ. ಮೊದಲ ದಿನ ಅಕ್ಕಿ, ಹುರುಳಿ, ಕಡಲೆಯಂತಹ ಕಾಳುಗಳನ್ನು ಹುರಿದು, ಎಣ್ಣೆ ಬೆರೆಸಿ ಭೂಮಿಗೆ ಇಡುವುದು ಪದ್ಧತಿಯಾಗಿದೆ. ಈ ಹಬ್ಬದ ಭಾಗವಾಗಿ ಬೇಟೆಯಾಡುವುದೂ ಒಂದು ಆಚರಣೆಯಾಗಿದೆ. ಜಿಲ್ಲೆಯಲ್ಲಿನ ಜೈನರು, ಕ್ರಿಶ್ಚಿಯನ್ನರು ಹಾಗೂ ಮುಸ್ಲಿಂ ಮೊದಲಾದ ಇತರ ಧರ್ಮೀಯರು ಇತರೆಡೆಯಂತೆಯೇ ಇಲ್ಲಿಯೂ ತಮ್ಮ ಪದ್ಧತಿಗಳಿಗನುಗುಣವಾಗಿ ವಿವಿಧ ಹಬ್ಬಗಳನ್ನಾಚರಿಸುತ್ತಾರೆ.

**ಕದಿರು ಹಬ್ಬ:** ಪುದ್ದರ್ ಅಥವಾ ಹೊಸ ಅಕ್ಕಿ ಹಬ್ಬ ಎಂಬ ಹೆಸರೂ ಈ ಹಬ್ಬಕ್ಕಿದೆ. ಕೃಷಿಕರು ಹೊಸ ಬೆಳೆಯ ತೆನೆಯನ್ನು ಭಕ್ತಿ ಸಂಭ್ರಮಗಳೊಂದಿಗೆ ಆಚರಣಾತ್ಮಕವಾಗಿ ಮನೆಗೆ ತರುವುದನ್ನೇ ಕದಿರುಹಬ್ಬ (ಕೊರಲ್ ಪರ್ಬ) ಅಥವಾ ಮನೆ ತುಂಬಿಸುವುದು (ಇಲ್ಲ್ ದಿಂಜಾವುನಿ) ಎಂದು ಕರೆಯಲಾಗುತ್ತದೆ. ಹಬ್ಬದಂದು ಮನೆಯನ್ನೂ, ಅಂಗಳವನ್ನೂ ಸಾರಿಸಿ ಚೊಕ್ಕಟ ಮಾಡುತ್ತಾರೆ. ಗೆರಸೆ, ಕಳಸಹುಕ್ಕೆ, ಬಳ್ಳ ಮೊದಲಾದ ಭತ್ತದ ಅಳತೆ ಸಾಧನಗಳನ್ನು ತೊಳೆದು ಶುದ್ಧಿ ಮಾಡಿ, ಜೇಡಿಮಣ್ಣಿನ ರಂಗೋಲಿಗಳಿಂದ ಅಲಂಕರಿಸುತ್ತಾರೆ. ಹಬ್ಬದ ಹಿಂದಿನ ದಿನ ಅಥವಾ ಮುಂಜಾನೆ ದಡ್ಡಲ್ ನಾರು, ಮಾವು, ಹಲಸು, ಬಿದಿರಿನ ಸೊಪ್ಪು, ತುಂಬೆಹೂ, ಉಂರ್ದೆಬಳ್ಳಿಗಳನ್ನು ತಂದು, ಗದ್ದೆಯಿಂದ ತಂದ ಭತ್ತದ ತೆನೆಯ ಜೊತೆಗೆ ತುಳಸಿಕಟ್ಟೆಯಲ್ಲಿ ಇಟ್ಟಿರುತ್ತಾರೆ. ಹಬ್ಬದ ಮುಂಜಾನೆ ಮನೆಯ ಯಜಮಾನ ಸ್ನಾನ–ಮಡಿಯಲ್ಲಿ ಬಂದು, ಆ ತೆನೆ ಮತ್ತಿತರ ಸೊಪ್ಪುಗಳನ್ನು ಅರ್ಚಿಸಿ, ನಮಿಸಿ ಅವನ್ನು ಹಿಡಿದು ತುಳಸಿಕಟ್ಟೆಗೆ ಪ್ರದಕ್ಷಿಣೆ ಮಾಡಿ, 'ಪೊಲಿಯೋ ಪೊಲಿ ಪೊಲಿ ಪೊಲಿ' ಎಂದು ಹೇಳುತ್ತಾ ಮನೆ ಬಾಗಿಲಿಗೆ ಬರುತ್ತಾನೆ. ಗೃಹಿಣಿ ಆತನ ಕಾಲಿಗೆ ನೀರು ಹಾಕಿ, ಸ್ವಾಗತಿಸುತ್ತಾಳೆ. ಆತನು ಚಾವಡಿಯ ಮಣೆಯ ಮೇಲೆ ಆ ಕದಿರನ್ನು ಇಟ್ಟಾಗ, ಮನೆಯವರೆಲ್ಲರೂ ಧನ–ಧಾನ್ಯ ಸಮೃದ್ಧಿಗಾಗಿ ಪ್ರಾರ್ಥಿಸುತ್ತಾರೆ. ಹಲಸಿನ ಎಲೆಯ ಮೇಲೆ, ಮಾವಿನ ಎಲೆ, ದಡ್ಡಲ್ ಕೆತ್ತೆ ಉಂರ್ದೆಬೇರು, ಬಿದಿರು ಎಲೆ ಹಾಗೂ ಸ್ವಲ್ಪ ಭತ್ತದ ತೆನೆಯನ್ನು ಇಟ್ಟು, ದಡ್ಡೆಲ್ ಅಥವಾ ತೆಂಗಿನ ಸೋಗೆಯ ನಾರಿನಿಂದ ಕಟ್ಟಿ, ಆ ಒಂದೊಂದು ಕಟ್ಟನ್ನು ದೇವರ ಕೋಣೆ, ವಾಸ್ತು ಕಂಬ, ಭೂತದ ಮಂಚ, ಕುರ್ಚಿ, ಮೇಜು, ಬಾವಿ, ಹಲಸು, ಅಡಿಕೆ ಮತ್ತಿತರ ಮರ ಹೀಗೆ ಎಲ್ಲಕ್ಕೂ ಕಟ್ಟುತ್ತಾರೆ. ಪೂಜಿಸಿದ ತೆನೆಯಿಂದ ಬೆಸಸಂಖ್ಯೆಯಲ್ಲಿ ಭತ್ತದ ಕಾಳು ತೆಗೆದು, ಸುಲಿದು, ಆ ಅಕ್ಕಿಯನ್ನು ಪಾಯಸಕ್ಕೆ ಅಥವಾ ಹಾಲಿಗೆ ಹಾಕಿ ಸೇವಿಸುತ್ತಾರೆ. ಅಡುಗೆ ಆದಮೇಲೆ ಪಿತೃಗಳಿಗೆ 'ಅಗೆಲ್' ಹಾಕಿದ ಬಳಿಕ ತಾವೆಲ್ಲಾ ಊಟ ಮಾಡುತ್ತಾರೆ. ಹಬ್ಬಕ್ಕಾಗಿ ಕುಂಬಾರ ತಯಾರಿಸಿಕೊಟ್ಟ ಹೊಸ ಮಡಕೆಯಲ್ಲಿಯೇ ಅಂದು ಪುದ್ವಾರ್ ಅನ್ನ ಮಾಡುತ್ತಾರೆ. ಯಜಮಾನನು ತನ್ನ ಪತ್ನಿಯೊಂದಿಗೆ ತಾಂಬೂಲ ಹಾಗೂ ಪುದ್ವಾರ್ ಊಟ ಇರುವ ಬಾಳೆಎಲೆಯನ್ನು ಒಲೆಯ ಬೆಂಕಿಗೆ ಇಡುವುದೂ ಉಂಟು. ಆ ವರ್ಷ ಮನೆಯಲ್ಲಿ ವಿವಾಹಕಾರ್ಯ ಆಗಿದ್ದರೆ, ಪುದ್ವಾರ್ ಆಚರಣೆಗೆ ಬೀಗರನ್ನು ಕರೆಯುತ್ತಾರೆ. ಆ ವರ್ಷ ಹುಟ್ಟಿದ ಮಗು ಇದ್ದರೆ ಮಗುವಿಗೆ ಅನ್ನ ಕೊಡುವ ಶಾಸ್ತ್ರದ ಅಂಗವಾಗಿ ಅನ್ನದ ಅಗುಳನ್ನು ಮಗುವಿನ ಬಾಯಿಗಿಡುತ್ತಾ 'ಈ ಅನ್ನವನ್ನು ಉಂಡು ನೀನು ಈ ಅನ್ನದ ಬೇರನ್ನು ಕೂಡ ಒಕ್ಕಲು ಮಾಡು ಮಗನೆ' ಎಂದು ಹಾರೈಸುವುದೂ ಇದೆ. ಅಂದು ಮನೆಯಲ್ಲಿ ಮಾಂಸಾಹಾರ ನಿಷಿದ್ಧವಾಗಿದೆ.

ಬ್ಯಾರಿಗಳೂ ಹೊಸತು ಉಣ್ಣುವ ಹಬ್ಬ ಮಾಡುತ್ತಾರೆ. ಅಂದು ಮನೆಯ ಮಗನು ಹೊಳೆಯ ನೀರು ಭರತಕ್ಕೇರುವ ಹೊತ್ತಿನಲ್ಲಿ ಭತ್ತದ ತೆನೆಯನ್ನು ತಲೆಯ ಮೇಲಿಟ್ಟುಕೊಂಡು ಬಲಗಾಲು ಮುಂದೆ ಮಾಡಿ 'ಬಿಸ್ಮಿಲ್ಲಾ ಹಿರ್ರಹ್ ಮಾನಿರ್ರಹೀಮ್' ಎಂದು ಹೇಳುತ್ತಾ

ಮನೆಯೊಳಗೆ ಬಂದು, ಮಧ್ಯಭಾಗದಲ್ಲಿ ತೆನೆ ಕಟ್ಟುತ್ತಾನೆ. ಅಂದು ಹೊಸಅಕ್ಕಿ ಪಾಯಸದೊಂದಿಗೆ ಮೀನಿನ ಪದಾರ್ಥವೂ ಇರುತ್ತದೆ. ಆದರೆ, ಮಾಂಸಾಹಾರ ನಿಷಿದ್ಧ.

ಹೀಗೆ, ಎಲ್ಲಾ ಸಮುದಾಯದವರಿಗೂ ಸಾಮಾನ್ಯವಾಗಿರುವ ಹಲವಾರು ಹಬ್ಬಗಳಿರುವಂತೆ ಜಾತಿ ವಿಶಿಷ್ಠವಾದ ಹಬ್ಬಗಳೂ ಕೆಲವು ಇವೆ. ಉದಾ: ಚಿತ್ಪಾವನ ಮಹಿಳೆಯರು ಗಣೇಶನ ಹಬ್ಬದ ಮುನ್ನಾದಿನ ಹರತಾಳಿಕಾ ಎಂಬ ವ್ರತಾಚರಣೆ ಮಾಡುತ್ತಾರೆ. ದಿನಪೂರ್ತಿ ನೀರಾಹಾರ ಉಪವಾಸದಿಂದ ಶಿವನನ್ನು ಪೂಜಿಸುವ ಈ ಹಬ್ಬವು ಇತರ ಜನಸಮುದಾಯದವರು ಮಾಡುವ ಗೌರಿಹಬ್ಬಕ್ಕಿಂತ ವಿಭಿನ್ನವಾಗಿರುತ್ತದೆ ಎನ್ನಲಾಗಿದೆ. ಬೊಡ್ಡಣ ಅಥವಾ ಮರಿಗೆ ಪೂಜೆ ಎಂಬುದು ಈ ಸಮುದಾಯದ ಮಹಿಳೆಯರು ಸಾಮೂಹಿಕವಾಗಿ ನಡೆಸುವ ಪೂಜಾ ಪದ್ಧತಿಯಾಗಿದೆ. ಮರದಿಂದ ಮಾಡಿದ ಮರಿಗೆ (ಪಾತ್ರೆ)ಯಲ್ಲಿ ಜೋಗೇಶ್ವರಿಯ ಪ್ರತಿಮೆ ಇರಿಸಿ, ಅದರ ಸುತ್ತಲೂ ಮಹಿಳೆಯರು ಕುಳಿತು, ಕಾಹೇಣರಿಗಳನ್ನು (ಮಂತ್ರ) ಹೇಳುತ್ತಾ ಅರಿಸಿನ, ಕುಂಕುಮ, ಹಾಲು, ಮೊಸರು ಇತ್ಯಾದಿಗಳಿಂದ ಅರ್ಚಿಸುತ್ತಾರೆ. ಈ ಪೂಜೆಯಲ್ಲಿ ಭಾಗವಹಿಸುವ ಸ್ತ್ರೀಯರ ಸಂಖ್ಯೆ ಹಾಗೂ ಅನುಸರಿಸುವ ನೇಮ–ನಿಯಮ, ಉಡುಗೆ–ತೊಡುಗೆಗಳ ಬಗೆಗೆ ಕೆಲವು ನಿರ್ಬಂಧಗಳಿರುತ್ತವೆ. ರಾಂಗಣೆ ಎಂಬ ವ್ರತದಲ್ಲಿ ಮುಂಜಾನೆ ಐದು ಮನೆಗಳಿಗೆ ಮೌನವಾಗಿ ಹೋಗಿ, ಆ ಮನೆಗಳ ಮುಹೂರ್ತ ದ್ವಾರಗಳನ್ನು ಪೂಜಿಸಿ, ತೆಂಗಿನಕಾಯಿಯನ್ನು ಆ ಮನೆಯೊಳಗೆ ಉರುಳಿ (ರಾಂಗ)ಸಲಾಗುತ್ತದೆ (ಇಂತಹ ಇನ್ನೂ ಕೆಲವು ವಿಶಿಷ್ಟ ವ್ರತಾಚರಣೆಗಳಿಗಾಗಿ ಮನೀಷಾ ೨೦೦೦–೨೦೦೧ ನೋಡಬಹುದು). ಚಿತ್ಪಾವನರ ಈ ವ್ರತಾಚರಣೆಗಳಲ್ಲಿ ಮರಾಠಿ ಮೂಲದ ಸಾಂಸ್ಕೃತಿಕ ಪ್ರಭಾವವನ್ನು ಗುರುತಿಸಬಹುದಾಗಿದೆ.

**ಚೂಡಿ ಪೂಜೆ:** ಕೆಲವು ಹಬ್ಬ–ಆಚರಣೆಗಳು ಬಂಧುತ್ವವನ್ನು ಬೆಳೆಸುವ ಮಾಧ್ಯಮವಾಗಿ ಕಾರ್ಯನಿರ್ವಹಿಸುವುದೂ ಇದೆ. ಬನ್ನಿಹಬ್ಬ, ಸಂಕ್ರಾಂತಿಯಂತೆ ತುಳುನಾಡಿನ ಗೌಡಸಾರಸ್ವತರು ಮಾಡುವ ಚೂಡಿ ಪೂಜೆ ಇದಕ್ಕೊಂದು ಉದಾಹರಣೆಯಾಗುತ್ತದೆ. ಮದುವೆಯಾದ ವರ್ಷ ಮದುಮಗಳು ಶ್ರಾವಣದಲ್ಲಿ ಮಾಡುವ ಈ ಪೂಜೆಗೆ ತಮ್ಮ ಹಿತ್ತಿಲು, ಬಯಲಲ್ಲಿ ಬೆಳೆವ ಅಣುವಾಳಿ, ಲಯಮಡ್ಡ, ದಿಬ್ರಾಂಕುರ, ಆರತಿ ಮೊದಲಾದ ಗಿಡಗಳಿಂದ ಹೂಗಳನ್ನು ತಂದು ಬಾಳೆನಾರಿನಿಂದ ಚೂಡಿ (ಸೂಡಿ) ಕಟ್ಟುತ್ತಾರೆ. ತುಳಸಿಕಟ್ಟೆಯಲ್ಲಿ ತಾಂಬೂಲ, ಹಣ್ಣು, ಪಂಚಕಜ್ಜಾಯ ಇಟ್ಟು ಪೂಜಿಸಿ, ಮನೆಯ ಹೊಸ್ತಿಲಿಗೆ ಬಂದು, ಅಲ್ಲಿ ಎರಡೂ ಬದಿಗೆ ಚೂಡಿಗಳನ್ನಿಟ್ಟು, ಹೊಸ್ತಿಲು ಪೂಜೆ ಮಾಡಿ, ಬಲಗಾಲಿಟ್ಟು ಪ್ರವೇಶ ಮಾಡಿ, ಒಳಗೆ ದೇವರ ಬಳಿ ಚೂಡಿಗಳನ್ನಿಟ್ಟು, ಗಂಧ–ಕುಂಕುಮ ಹಚ್ಚಿ ನಮಸ್ಕರಿಸಿ, ಆ ಚೂಡಿ ಮುಡಿಯುತ್ತಾಳೆ. ಮನೆಯ ಹಿರಿಯರಿಗೂ, ಗಂಡನಿಗೂ ಚೂಡಿ ನೀಡಿ, ನಮಸ್ಕರಿಸುತ್ತಾಳೆ. ಅವರು ಅದರಲ್ಲಿ ಹಣ ಇಟ್ಟು ಆಶೀರ್ವದಿಸಿ ಆಕೆಗೆ ಕೊಡುತ್ತಾರೆ. ತಾವು ಪೂಜಿಸಿದ ಚೂಡಿಗಳನ್ನು ಅನ್ಯ ಮಹಿಳೆಯರೊಂದಿಗೆ ವಿನಿಮಯ ಮಾಡಿಕೊಳ್ಳುವುದೂ ಇದೆ. ಈ ನೆವದಲ್ಲಿ ಬಂಧುಗಳ ಮನೆಗೂ ಹೋಗಿ, ಚೂಡಿ ಕೊಟ್ಟು ಕುಶಲ ವಿಚಾರಿಸಿ ಬರುತ್ತಾರೆ. ದೂರದ ಊರಿನವರಿಗೆ ಒಣಗಿಸಿದ ಚೂಡಿಯನ್ನು ಕುಂಕುಮ ಇಟ್ಟು ಅಂಚೆ ಮೂಲಕ ಕಳುಹಿಸಿಕೊಡುವ ನಡವಳಿಕೆಯೂ ಇದ್ದು, ಇದು ಕೊಂಕಣಿ ಮಹಿಳೆಯರ ವಿಶಿಷ್ಟ ಆಚರಣೆಯೂ ಆಗಿದೆ (ರಾಶಿ, ಸೆ. ೧೯೯೦; ತುಳು ಜಾನಪದ ಪತ್ರಿಕೆ).

ಇತರೆಡೆಯಂತೆ ಜಿಲ್ಲೆಯಲ್ಲಿನ ಕ್ರೈಸ್ತ ಧರ್ಮೀಯರೂ ಸಾಂದರ್ಭಿಕವಾಗಿ ಅನೇಕ ಹಬ್ಬ–ಆಚರಣೆಗಳನ್ನು ನಡೆಸುತ್ತಾರೆ. ಇವುಗಳಲ್ಲಿ ಕೆಲವು ಜಗತ್ತಿನ ಇತರೆಡೆಯೂ ಸಾಮಾನ್ಯವಾಗಿ ಕಂಡುಬರುವ ಕ್ರೈಸ್ತರ ಹಬ್ಬದ ಮಾದರಿಗಳಾಗಿದ್ದರೆ, ಇನ್ನು ಕೆಲವು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿವೆ. ಮೊಂತಿಹಬ್ಬ ಇದಕ್ಕೊಂದು ನಿದರ್ಶನವಾಗಿರುತ್ತದೆ. ಕ್ರಿಸ್‌ಮಸ್ ಅನ್ನು ಏಸುವು ಜನಿಸಿದ ದಿನವೆಂದು ಡಿಸೆಂಬರ್ ೨೫ರಂದು ಜಗತ್ತಿನಾದ್ಯಂತ ಎಲ್ಲಾ ಕ್ರೈಸ್ತರೂ ಬಹು ಸಂಭ್ರಮದಿಂದ ಆಚರಿಸುತ್ತಾರೆ. ಜಿಲ್ಲೆಯ ಕ್ರೈಸ್ತರೂ ಅಂದು ವಿವಿಧ ಬಗೆಯ ತಿಂಡಿ–ತೀರ್ಥಗಳನ್ನು ತಯಾರಿಸಿ ಬಂಧು ಮಿತ್ರರೊಂದಿಗೆ ಊಟ ಮಾಡುವುದಲ್ಲದೆ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಹಬ್ಬದ ಅಂಗವಾಗಿ ಕ್ರಿಸ್‌ಮಸ್ ಮರವನ್ನು ಅಲಂಕರಿಸುವುದು, ಕ್ರಿಸ್‌ಮಸ್ ತಾತನ ವೇಷ ಹಾಕುವುದು ಮೊದಲಾದುವೂ ನಡೆಯುತ್ತವೆ. ಯೇಸುವು ಮರಣ ಹೊಂದಿದ ದಿನವನ್ನು ಶುಭ ಶುಕ್ರವಾರವೆಂದೂ, ಆತ ಪುನರುತ್ಥಾನ ಹೊಂದಿದ ಮೂರನೇ ದಿನವನ್ನು ಈಸ್ಟರ್ ಅಥವಾ ಪಾಸ್ಕಾ ಹಬ್ಬವೆಂದೂ ಆಚರಿಸುತ್ತಾರೆ.

**ಮೊಂತಿ ಹಬ್ಬ:** ಹೊಸ ಬೆಳೆಯ ಆರಾಧನೆಯ ಅಂಗವಾದ ಕದಿರುಹಬ್ಬ, ಹುತ್ತರಿಹಬ್ಬ ಅಥವಾ ಹೊಸ ದೇವರು ಹಬ್ಬಗಳು ನಾಡಿನ ವಿವಿಧ ಭಾಗದ ಕೆಲವು ಹಿಂದೂಗಳಲ್ಲಿರುವಂತೆ, ಕ್ರಿಶ್ಚಿಯನ್ನರಲ್ಲಿಯೂ ಇದ್ದು, ಅದನ್ನು ಅವರು ಮೊಂತಿ ಹಬ್ಬವೆಂದು ಕರೆಯುತ್ತಾರೆ.

ಮೇರಿಮಾತೆಯ ಜನ್ಮದಿನವನ್ನೇ ಪ್ರಕೃತಿಮಾತೆಯ ಆರಾಧನೆಯ ದಿನವನ್ನಾಗಿ ಪರಿಗಣಿಸಿ ಕುಟುಂಬದ ಎಲ್ಲರೂ ಒಟ್ಟಾಗಿ ಸೇರಿ, ಹಬ್ಬ ಆಚರಿಸುತ್ತಾರೆ. ಅಂದು ಚರ್ಚ್‌ನಿಂದ ಆಶೀರ್ವದಿಸಿ ತಂದ ಭತ್ತದ ತೆನೆಗಳಿಂದ ಬಿಡಿಸಿದ ಅಕ್ಕಿಯನ್ನು ಹಾಲಿನಲ್ಲಿ ಹಾಕಿ, ಬೇಯಿಸಿದ ಪಾಯಸವನ್ನು ಮನೆಯ ಯಜಮಾನ ಎಲ್ಲರಿಗೂ ಬಡಿಸುತ್ತಾನೆ. ಅಂದು ಎಲ್ಲರೂ ಬಾಳೆಎಲೆಯಲ್ಲಿ ಸಸ್ಯಾಹಾರವನ್ನು ಊಟ ಮಾಡುವ ಸಂಪ್ರದಾಯವಿದೆ.

ಜಿಲ್ಲೆಯ ಮುಸ್ಲಿಮರು ಮೊಹರಂ ಸಫರ್, ರಬ್ಬಿಲ್ ಅವ್ವಲ್, ರಜಬ್, ರಮ್‌ಲಾನ್ ಬಕ್ರೀದ್ ಮೊದಲಾದ ಹಬ್ಬಗಳನ್ನು ಮಾಡುತ್ತಾರೆ. ಕೆಲವು ಹಬ್ಬಗಳ ಅಂಗವಾಗಿ ಉಪವಾಸ, ಪ್ರಾರ್ಥನೆ, ಬಡವರಿಗೆ ದಾನ ಇತ್ಯಾದಿಗಳು ಸಾಂಪ್ರದಾಯಿಕವಾಗಿ ನಡೆಯುತ್ತವೆ.

**ಭೂತಾರಾಧನೆ:** ನಾಡಿನ ಇತರ ಭಾಗಗಳಲ್ಲಿ ದೇವರು ಹಾಗೂ ದೈವ ಎಂಬುದು ಬಹು ಮಟ್ಟಿಗೆ ಏಕಾರ್ಥದಲ್ಲಿ ಬಳಕೆಯಾದರೂ ತುಳುನಾಡಿನಲ್ಲಿ ಅವು ಎರಡೂ ವಿಭಿನ್ನ ಪರಿಕಲ್ಪನೆಗಳಾಗಿಯೇ ಬಳಕೆಯಲ್ಲಿವೆ. ಅವರ ಪ್ರಕಾರ ದೈವ ಎಂಬುದು ಸಾಮಾನ್ಯವಾಗಿ ದೇವರಿಗಿಂತ ತುಸು ಕೆಳಹಂತದ ಆರಾಧನಾ ಶಕ್ತಿಯಾಗಿದೆ. ಈ ದೈವವನ್ನೇ ಭೂತವೆಂದೂ ಹೇಳಲಾಗುತ್ತದೆ. ತುಳುನಾಡಿನ ಎಲ್ಲಾ ಜಾತಿ, ವರ್ಗಗಳು ಭೂತಾರಾಧನೆಯಲ್ಲಿ ಒಂದಲ್ಲಾ ಒಂದು ರೀತಿ ಭಾಗವಹಿಸುವವರೇ ಆಗಿದ್ದಾರೆ. ಇವರ ನಂಬಿಕೆಯ ಲೋಕದಲ್ಲಿ 'ಭೂತ'ಗಳೆಂದರೆ ಇತರ ಪ್ರದೇಶಗಳವರು ಸಾಮಾನ್ಯವಾಗಿ ಅರ್ಥೈಸುವಂತಹ 'ದೆವ್ವ' ಅಥವಾ 'ಪಿಶಾಚಿ' – ಎಂದಾಗದೆ, ಅವು 'ದೈವ'ಗಳು ಅಥವಾ 'ಸತ್ಯ'ಗಳು ಎಂದೇ ತಿಳಿಯಲ್ಪಟ್ಟಿವೆ. ಅವು ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಕಾರ್ಯ ಮಾಡುತ್ತವೆ. ಸೂರ್ಯ–ಚಂದ್ರರಿರುವವರೆಗೂ ಲೋಕದಲ್ಲಿ ಸತ್ಯ–ನ್ಯಾಯಗಳನ್ನು ಎತ್ತಿಹಿಡಿಯುತ್ತವೆ. ಕಾಲಕಾಲಕ್ಕೆ ಮಳೆ–ಬೆಳೆಗಳನ್ನು ನೀಡಿ ಜೀವಜಗತ್ತನ್ನು ಕಾಪಾಡುವುದೂ ದೈವಗಳೇ. ಆದ್ದರಿಂದ, ಅವನ್ನು ನಂಬಿ, ಆರಾಧಿಸದಿದ್ದರೆ ತಮಗೆ ತೀವ್ರತರವಾದ ಕೇಡುಂಟಾಗುತ್ತದೆ ಎಂದೂ ಅವರು ಬಲವಾಗಿಯೇ ನಂಬಿ ನಡೆಯುತ್ತಾರೆ.

ನ್ಯಾಯ ನೀತಿಗಾಗಿ ಬಾಳಿದರೂ ಅನ್ಯಾಯಕ್ಕೆ ಒಳಗಾಗಿ ಅಕಾಲ ಮೃತ್ಯುವಿಗೆ ಈಡಾದವರು ಭೂತದೈವವಾಗಿ ಪ್ರಕಟಗೊಂಡಿದ್ದಾರೆಂಬ ನಂಬಿಕೆ ಇಲ್ಲಿಯದು. ಕೊರಗತನಿಯನಂತಹ ಅತ್ಯಂತ ಕೆಳವರ್ಗದ ವ್ಯಕ್ತಿಯಿಂದ ಹಿಡಿದು ಸಿರಿಯಂತಹ ಮೇಲುವರ್ಗದ ಮಹಿಳೆಯರಿಗೆ ಬೇರೆಬೇರೆ ವ್ಯಕ್ತಿಗಳು ಭೂತವಾಗಿದ್ದಾರೆ. ಹಂದಿ, ಮಂಗಗಳಂತಹ ಪ್ರಾಣಿ, ಗಿಳಿಯಂತಹ ಪಕ್ಷಿಯೂ ಭೂತವಾಗಿದೆ. ಕೇವಲ ಹಿಂದೂಗಳಷ್ಟೇ ಅಲ್ಲದೆ, ಮುಸ್ಲಿಂ ವರ್ಗದಿಂದ ಬಂದ ವ್ಯಕ್ತಿಯೂ (ಅಲಿ) ಭೂತದೈವವಾಗಿ ಆರಾಧನೆಗೊಳ್ಳುತ್ತಿದೆ. ಇನ್ನು ಪೌರಾಣಿಕ ಹಿನ್ನೆಲೆಯಿಂದ ಬಂದ ರಕ್ತೇಶ್ವರಿ ಉಳ್ಳಾಕ್ಲಿ ಹಾಗೂ ಧೂಮಾವತಿ ಭೂತಗಳು 'ದೇವಿ'ಯ ಅಂಶವೆಂದೇ ನಂಬಲಾಗಿದೆ. ಹೀಗೆ ಬಹು ವೈವಿಧ್ಯಮಯವಾಗಿರುವ ಈ ಭೂತಗಳ ಸಂಖ್ಯೆ ೩೦೦ಕ್ಕೂ ಹೆಚ್ಚು ಎಂದು ತಿಳಿಯಲಾಗಿದೆ. ಇವಲ್ಲಿ ಸ್ಥಳೀಯವಾದ ಭೂತಗಳಿರುವಂತೆ ವಲಸೆ ಬಂದ ಭೂತಗಳೂ ಇವೆ. ಭೂತಾರಾಧನೆಯು ಮೂಲತಃ ಧಾರ್ಮಿಕ ಪರಿವೇಷವನ್ನು ಉಳ್ಳದ್ದಾಗಿದ್ದರೂ, ಅದು ಇನ್ನೊಂದು ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ. ಈ ಎರಡೂ ಸ್ಥಿತಿಗಳ ಪರಿಣಾಮವಾಗಿ ಅದು ಆರಾಧನೆಯೂ ಆಗಿದೆ, ಕಲೆಯೂ ಆಗಿದೆ, ನ್ಯಾಯ ದಾನ ಮಾಡುವ ಶಕ್ತಿಯನ್ನು ಹೊಂದಿದೆ, ಕೆಲವೊಂದು ರೋಗಗಳಿಗೆ ಚಿಕಿತ್ಸೆ ನೀಡುವ ವೈದ್ಯಪದ್ಧತಿಯೂ ಆಗಿದೆ; ಭೂತಾರಾಧನೆಯ ಅಂಗವಾಗಿ ಕೆಲವೊಂದು ಕ್ರೀಡೆಗಳೂ ಹುಟ್ಟಿಕೊಂಡಿವೆ.

ಭೂತಗಳನ್ನು ಸಾಮಾನ್ಯವಾಗಿ ಸಂಬಂಧಿಸಿದ ಭೂತದ ಮುಖವಾಡ ಹಾಗೂ ವೇಷಗಳ ರೂಪದಲ್ಲಿ ಆರಾಧಿಸಲಾಗುತ್ತದೆ. ಭೂತಾರಾಧನೆಯ ಭಾಗವಾದ ಮಂಚ, ಖಡ್ಗ, ಗಂಟೆ ಮೊದಲಾದ ಪರಿಕರಗಳನ್ನು ಪವಿತ್ರ ವಸ್ತುಗಳೆಂದು ಪರಿಗಣಿಸಲಾಗುತ್ತದೆ. ಭೂತದ ಮುಖವಾಡ, ಆಭರಣ, ಕತ್ತಿ ಮೊದಲಾದ ಅಂಥಾ ವಸ್ತುಗಳನ್ನು ಜತನದಿಂದ ಕಾಯ್ದಿಡುವುದಕ್ಕಾಗಿಯೇ ಒಂದು ಸ್ಥಳ ಅಥವಾ ಮರದ ಮಂಚ (ಭಂಡಾರ) ಇರುತ್ತದೆ. ಈ ಭಂಡಾರವನ್ನು ಸಾಮಾನ್ಯವಾಗಿ ಭೂತದ ಮಂಚದ ಮೇಲೆ, ನೆಲಕ್ಕೆ ತಾಗಿಸದಂತೆ ಇಡಲಾಗುತ್ತದೆ ಹಾಗೂ ಆರಾಧನೆಯ ಸಂದರ್ಭದಲ್ಲಿ ಮಾತ್ರ ಹೊರತೆಗೆಯಲಾಗುತ್ತದೆ. ಗುತ್ತಿನ ಮನೆಗಳಲ್ಲಿ ಅವರವರ ಭೂತಗಳಿಗಾಗಿ ನಿರ್ಮಿಸಿದ ಪ್ರತ್ಯೇಕ ಕೋಣೆಗಳಿರುತ್ತವೆ. ಭೂತಗಳಿಗಾಗಿ ಪ್ರತ್ಯೇಕ ಗುಡಿಗಳೂ ಇದ್ದು ಅವನ್ನು ಭೂತಸ್ಥಾನ ಗುಂಡ ಎನ್ನಲಾಗುತ್ತದೆ. ಭೂತಗಳ ವಾರ್ಷಿಕ ಆರಾಧನಾ ವಿಧಿಗಳನ್ನು ಭೂತಕೋಲದ ಹೆಸರಿನಲ್ಲಿ ನಡೆಸಲಾಗುತ್ತದೆ. ಇದು ಬಹುವ್ಯವಸ್ಥಿತವಾದ ಹಾಗೂ ಹಲವು ವಿಧಿಕ್ರಿಯೆಗಳಿಂದ ಕೂಡಿದ ಒಂದು ಪ್ರದರ್ಶಕ ನಡವಳಿಕೆಯೂ ಆಗಿರುತ್ತದೆ. ಭೂತಾರಾಧನೆಯಲ್ಲಿ ಹರಕೆ ಹೇಳಿದಾಗ ಅಥವಾ ವಿಶಿಷ್ಟ ಸಂದರ್ಭಗಳಲ್ಲಿ ಧರ್ಮನೇಮ ಎಂಬ ವಿಶಿಷ್ಟ ಉತ್ಸವವನ್ನು ಜರುಗಿಸುವ ಸಂಪ್ರದಾಯವಿದೆ. ಈ ದೈವಾರಾಧನೆಯ ಕೇಂದ್ರಗಳು ಗ್ರಾಮೀಣ ಪ್ರದೇಶದ ಎಲ್ಲಾ ಜಾತಿಗಳನ್ನು ಒಂದೆಡೆ ಸೇರಿಸುವ ವ್ಯವಸ್ಥೆಯೂ ಆಗಿದ್ದವು.

**ಸಿರಿ:** ತುಳುವರು ಅತ್ಯಂತ ಗೌರವದಿಂದ ನಡೆದುಕೊಳ್ಳುವ ಶಕ್ತಿಗಳಲ್ಲಿ ಸಿರಿಯೂ ಒಬ್ಬಳಾಗಿದ್ದಾಳೆ. ಬಂಟ ಸಮಾಜದಿಂದ ಬಂದ ಸಿರಿ ತನಗೆ ಅಗೌರವ ತೋರಿ, ಕೆಟ್ಟದ್ದಾಗಿ ನಡೆದುಕೊಂಡ ಗಂಡನನ್ನೇ ಧಿಕ್ಕರಿಸುವ ಮೂಲಕ ಸ್ತ್ರೀ ಸ್ವಾಭಿಮಾನದ ಪ್ರತೀಕವಾಗಿ ಬೆಳೆದವಳು. ಆದರೆ, ಕೊನೆಯವರೆಗೂ ಎಲ್ಲಿಯೂ ನೆಮ್ಮದಿಯ ಬದುಕು ಸಾಗಿಸಲಾಗದೆ, ಅನ್ಯಾಯವನ್ನೇ ಉಂಡು, ನೊಂದು ಮರಣಾನಂತರ ಆರಾಧನೆಯ ಶಕ್ತಿಯಾಗಿ ಮೂಡಿದವಳು. ಸ್ತ್ರೀ ಸಮೂಹದ ಅಪಾರ ಅನುಕಂಪೆಯನ್ನೂ ಗಳಿಸಿರುವ ಸಿರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಕವತ್ತಾರು, ನಡಿಗಲ್‌ಗಳಲ್ಲಿ ಆಲಡೆಗಳಿದ್ದು ಅಲ್ಲಿ ವಾರ್ಷಿಕ ಆರಾಧನೆಗಳು ಸಿರಿ ಜಾತ್ರೆಯ ಹೆಸರಲ್ಲಿ ನಡೆಯುತ್ತವೆ. ವಿಶೇಷವೆಂದರೆ, ಕೌಟುಂಬಿಕ ಬದುಕಿನಲ್ಲಿ ಏನೆಲ್ಲಾ ನೋವು, ಸಂಕಟಗಳಿಗೆ, ಮಾನಸಿಕ ಅಸ್ವಸ್ಥತೆಗೆ ಒಳಗಾದ ಅಸಂಖ್ಯಾತ ಮಹಿಳೆಯರು ಸಿರಿಗೆ ನಡೆದುಕೊಳ್ಳುತ್ತಾರೆ. ಜಾತ್ರೆಯಂದು ಇಡೀ ರಾತ್ರಿ ಅವರು ಸಾಮೂಹಿಕವಾಗಿ ಮೈದುಂಬಿ, ಕುಮಾರರ ಸಮ್ಮುಖದಲ್ಲಿ ಹೇಳಿಕೊಳ್ಳುವ ಅಂತರಂಗದ ತೊಳಲಾಟದ ಮಾತುಗಳು, ವರ್ತನೆಗಳು ಅಧ್ಯಯನಾಸಕ್ತರ ತೀವ್ರ ಗಮನವನ್ನೂ ಸೆಳೆಯುತ್ತವೆ. ಪೀಟರ್ ಜೆ.ಕ್ಲಾಸ್ ಮೊದಲಾದ ಕೆಲವು ವಿದೇಶೀ ವಿದ್ವಾಂಸರೂ ಈ ಕುರಿತು ಚರ್ಚೆಗಳನ್ನು ನಡೆಸಿದ್ದಾರೆ. ಫಿನ್ಲೆಂಡಿನ ಲೌರಿಹಾಂಕೋ ಎಂಬ ವಿದ್ವಾಂಸ ಮತ್ತು ಅವರ ತಂಡದವರು 'ಸಿರಿ'ಯ ತುಳು ಪಾಡ್ದನವನ್ನು ಇಂಗ್ಲಿಷ್‌ಗೆ ಅನುವಾದಿಸಿ ಪ್ರಕಟಿಸಿದ್ದಾರೆ. ೧೫,೬೮೩ ಚರಣಗಳಷ್ಟು ಸುದೀರ್ಘವಾಗಿರುವ ಈ ಪಾಡ್ದನ ಜಗತ್ತಿನ ಪ್ರಾಚೀನ ಮಹಾಕಾವ್ಯಗಳಿಗೆ ಸರಿಮಿಗಿಲೆನಿಸಿದೆ.

**ಕಂಬಳ:** ಇದು ಕೃಷಿ ಹಿನ್ನೆಲೆಯ ಫಲವಂತಿಕೆಯ ಆಚರಣೆಗಳಲ್ಲಿ ಒಂದಾಗಿದೆ. ಕಂಬಳದಲ್ಲಿ ನಾಲ್ಕು ವಿಧಗಳಿವೆ. ೧) ಬಾರೆ (ಳೆ) ಕಂಬಳ, ೨) ಪೂಕರೆ ಕಂಬಳ, ೩) ಅರಸು ಅಥವಾ ದೈವ, ದೇವರ ಕಂಬಳ ಮತ್ತು ೪) ಆಧುನಿಕ ಕಂಬಳ. ಕೋಣಗಳನ್ನು ಓಡಿಸಿದ ಬಳಿಕ ಬಾಳೆಗಿಡವನ್ನು ಗದ್ದೆಯ ಮಧ್ಯದಲ್ಲಿಟ್ಟು ಬಾಳೆಕಂಬಳ ಆಚರಿಸಲಾಗುತ್ತದೆ. ಪೂಕರೆ ಕಂಬಳದಲ್ಲಿ ಆಚರಣಾ ವಿಧಿಗಳು ಅಧಿಕವಾಗಿರುತ್ತವೆ. ಈ ಎರಡರಲ್ಲೂ ಕೋಣಗಳ ಸ್ಪರ್ಧೆ ಇರುವುದಿಲ್ಲ. ಆದರೆ ಕೋಣಗಳ ಓಟ ಇರುತ್ತದೆ. ಅರಸು ಮತ್ತು ದೈವ, ದೇವರ ಕಂಬಳದಲ್ಲಿ ಧಾರ್ಮಿಕ ಆಚರಣೆ ಮತ್ತು ಕೋಣಗಳ ಸ್ಪರ್ಧೆ ಎರಡಕ್ಕೂ ಮಹತ್ವ ನೀಡಲಾಗುತ್ತದೆ. ಆಧುನಿಕ ಕಂಬಳದಲ್ಲಿ ಟಿಕೇಟು ಕೊಂಡು ಕಂಬಳ ನೋಡುವ ವ್ಯವಸ್ಥೆಯೂ ಇರುವುದುಂಟು. ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ಬೇರೆಬೇರೆ ಕಡೆಗಳಲ್ಲಿ ಬೇರೆಬೇರೆ ರೀತಿಯಲ್ಲಿ ಆಚರಿಸುತ್ತಾರೆ. ಕಂಬಳದಲ್ಲಿ ಗದ್ದೆಯ ಉಳುಮೆಯ ದಿನ, ಮುಹೂರ್ತದ ದಿನ, ಕಂಬಳದ ಹಿಂದಿನ ದಿನ ಹಲವು ಆಚರಣೆಗಳು ಜರುಗುತ್ತವೆ. ಕೋಣಗಳನ್ನು ಕಂಬಳಗದ್ದೆಗೆ ಇಳಿಸುವ ದಿನ ದೇವಸ್ಥಾನ ಹಾಗೂ ಭೂತಸ್ಥಾನಗಳಲ್ಲಿ ವಿಶೇಷ ಪೂಜೆಗಳಾಗುತ್ತವೆ. ಕಂಬಳದ ಮುಹೂರ್ತದ ದಿನ ಕೆಲವೆಡೆ ದೈವಗಳ ಕೋಲ ನಡೆಯುವುದುಂಟು. ಕೆಲವೆಡೆ ಕೊರಗರು ಅಥವಾ ಮುಂಡಾಲರು ಪನಿಕಲ್ಲುನು ಎಂಬ ಆಚರಣೆ ನಡೆಸುತ್ತಾರೆ. ನಾಗನಿಗೆ ಹಾಲು ಎರೆಯುವುದು, ಬೆರ್ಮರ ಪೂಜೆ, ದೈವಗಳ ದರ್ಶನ ಸೇವೆ...... ಈ ಎಲ್ಲವೂ ಕಂಬಳಕ್ಕಿರುವ ಧಾರ್ಮಿಕ ಆಯಾಮವನ್ನು ಸೂಚಿಸುತ್ತವೆ.

**ನಾಗಮಂಡಲ:** ತುಳುನಾಡಿನ ವಿಶಿಷ್ಟ ಆರಾಧನಾ ಸಂಪ್ರದಾಯಗಳಲ್ಲಿ ನಾಗಮಂಡಲವೂ ಒಂದಾಗಿದೆ. ಸಾಮಾನ್ಯವಾಗಿ ಸಂತಾನಾಪೇಕ್ಷೆಯಿಂದ ಹರಕೆ ಮಾಡಿಕೊಂಡವರು ನಾಗನ ಸಂತೃಪ್ತಿಗಾಗಿ ನಡೆಸುವ ವಿಧಿ ಪೂರ್ವಕ ಆಚರಣೆಗಳಲ್ಲಿ ನಾಗಮಂಡಲ ಹೆಚ್ಚು ವೈಭವದಿಂದ ಕೂಡಿರುತ್ತದೆ. ಹರಕೆ ಹೊತ್ತ ಕುಟುಂಬದ ಸದಸ್ಯರೆಲ್ಲರೂ ಕೂಡಿ ತಮ್ಮ ಮನೆತನದ ನಾಗಬನದಲ್ಲಿ ನಡೆಸುವ ಈ ಆಚರಣೆಯಲ್ಲಿ ಸಾರ್ವಜನಿಕರೂ ಭಾಗವಹಿಸುವುದು ಸಾಮಾನ್ಯವಾಗಿರುತ್ತದೆ. ನಾಗಮಂಡಲಕ್ಕೆ ಹುಡಿಸೇವೆ ಎಂದೂ ಹೆಸರಿದೆ. ಆಚರಣೆಯ ಅಂಗವಾಗಿ ರಂಗೋಲಿ ಮತ್ತಿತರ ವಿವಿಧ ಬಣ್ಣದ ಪುಡಿಗಳಿಂದ ಹೆಡೆ ಬಿಚ್ಚಿದ ನಾಗನ ಚಿತ್ರವನ್ನು ನೆಲದ ಮೇಲೆ ಬಿಡಿಸಲಾಗುತ್ತದೆ. ಅಂತಹ ಚಿತ್ರದಲ್ಲಿ ನಾಗನ ದೇಹದ ಸುರುಳಿಗಳಲ್ಲಿ ಅಲ್ಲಲ್ಲಿ ಕ್ರಮಬದ್ಧವಾಗಿ ಪವಿತ್ರದ ಗಂಟುಗಳನ್ನು ಮೂಡಿಸಲಾಗುತ್ತದೆ. ಇಂತಹ ಗಂಟುಗಳು ೧೬ ಇದ್ದರೆ, ಅದನ್ನು ಪೂರ್ಣ ಮಂಡಲ ಸೇವೆ ಎಂದು ಕರೆಯಲಾಗುತ್ತದೆ. ಹೀಗೆಯೇ, ಎಂಟು ಗಂಟುಗಳ (ಅರ್ಧ ಮಂಡಲ) ಹಾಗೂ ನಾಲ್ಕು ಗಂಟುಗಳ (ಕಾಲು ಮಂಡಲ) ಸೇವೆಗಳೂ ಇರುತ್ತವೆ. ಪೂರ್ಣಮಂಡಲ ಸೇವೆಗೆ ಅಪಾರವಾದ ಖರ್ಚು ವೆಚ್ಚ ತಗಲುವುದರೊಂದಿಗೆ ಸಂಪ್ರದಾಯಕ್ಕೆ ಕಿಂಚಿತ್ ಊನವೂ ಆಗದಂತೆ ನೆರವೇರಿಸುವುದು ಬಹಳ ಶ್ರಮದಾಯಕವಾದುದರಿಂದ ಸಾಮಾನ್ಯವಾಗಿ ಅದನ್ನು ಎಲ್ಲರೂ ಮಾಡಿಸಲು ಹೋಗುವುದಿಲ್ಲ.

ನಾಗನು ವಿಷ್ಣುವಿಗೆ ಶಯನ, ಶಿವನಿಗೆ ಆಭರಣ; ನಾಗಬ್ರಹ್ಮ ಪರಿಕಲ್ಪನೆಯಲ್ಲಿ ಬ್ರಹ್ಮನ ಸಂಬಂಧವನ್ನೂ ಹೊಂದಿದೆ – ಎಂಬ ನಂಬಿಕೆಗಳ ಹಿನ್ನೆಲೆಯಲ್ಲಿ ನಾಗಮಂಡಲದ ಮೂಲಕ ತ್ರಿಮೂರ್ತಿಗಳನ್ನು ಸಂತೃಪ್ತಿಗೊಳಿಸುವ ಆರಾಧನೆ ಇದು ಎಂದೂ ಭಾವಿಸಲಾಗಿದೆ. ನಾಗನಿಗೆ ಸಂಗೀತ, ನರ್ತನಾದಿಗಳು ಅತಿ ಪ್ರಿಯವಾದುವು ಎಂದೂ ಹೇಳಲಾಗಿದೆ. ಮಂಡಲ ರಚನೆಯ ಬನದಲ್ಲಿ ಬೃಹತ್ತಾದ

ಚಪ್ಪರಮಂಟಪವನ್ನು ನಿರ್ಮಿಸಿ ಅದನ್ನು ಅಡಕೆ, ಬಾಳೆ, ತೆಂಗು, ಅನಾನಸ್, ಕಿತ್ತಲೆ, ನಿಂಬೆ ಮೊದಲಾದ ಫಲಗಳಿಂದಲ್ಲದೆ ಬಗೆಬಗೆಯ ಹೂಗಳಿಂದಲೂ ಚಿತ್ತಾರ ಆಕೃತಿಗಳಿಂದಲೂ ವೈಭವಯುತವಾಗಿ ಅಲಂಕರಿಸಲಾಗುತ್ತದೆ. ನಾಗಮಂಡಲದ ಚಿತ್ತಾರವನ್ನು ಅಕ್ಕಿಹಿಟ್ಟಿನ ಬಿಳಿ, ಕುಂಕುಮದ ಕೆಂಪು, ಇದ್ದಿಲು ಪುಡಿಯ ಕಪ್ಪು, ಅರಿಸಿನದ ಹಳದಿ ಹಾಗೂ ಕೆಲವೊಂದು ಎಲೆಗಳ ಪುಡಿಯಿಂದ ಮಾಡಿದ ಹಸಿರು ಬಣ್ಣಗಳಿಂದ ವಿಧಿಬದ್ಧವಾಗಿ ರಚಿಸಲಾಗುತ್ತದೆ. ಆರಾಧನೆಯಲ್ಲಿ ನಾಗನ ಪ್ರತೀಕವಾಗುವ ನಾಗಪಾತ್ರಿಯ ಜೊತೆಗೆ ಮೂವರು ವೈದ್ಯರು, ತಂತ್ರಿ ಹಾಗೂ ಕೆಲವು ಪುರೋಹಿತರು ಭಾಗವಹಿಸುತ್ತಾರೆ. ವೈದ್ಯರಲ್ಲಿ ಒಬ್ಬಾತ ಅರ್ಧನಾರೀಶ್ವರನ ವೇಷದಲ್ಲಿದ್ದು, ಡಮರುಧಾರಿಯಾದರೆ, ಇನ್ನಿಬ್ಬರು ಢಕ್ಕೆ ಹಾಗೂ ಚಿತ್ರವಾದ್ಯ ಎಂಬ ವಾದ್ಯಗಳನ್ನು ನುಡಿಸುತ್ತಾರೆ. ತನ್ನ ಗೀತ, ನೃತ್ಯಾದಿಗಳಿಂದ ಆವೇಶಭರಿತನಾದ ನಾಗಪಾತ್ರಿಯನ್ನು ಕೆರಳಿಸುವ, ಸಮ್ಮೋಹಗಳಿಸುವ ಕಾರ್ಯವನ್ನು ಅರ್ಧನಾರೀಶ್ವರ ವೇಷಧಾರಿಯು ಮಾಡುತ್ತಾನೆ. ಹಾಗೆ ನರ್ತಿಸುತ್ತಲೇ ನಾಗಮಂಡಲದಲ್ಲಿ ನಾಗನ ಪವಿತ್ರದ ಗಂಟುಗಳನ್ನು ಹಾಕುವುದು, ಅಂತ್ಯದಲ್ಲಿ ಅದೇ ಕ್ರಮದಲ್ಲಿ ಆ ಗಂಟುಗಳನ್ನು ಬಿಡಿಸುವುದೂ ನಡೆಯುತ್ತದೆ. ನೃತ್ಯಾಚರಣೆ ಮುಗಿದ ಮೇಲೆ ಮಂಡಲವನ್ನು ಮುಕ್ಕು ಮಾಡಿ, ಮಂಡಲ ಕಡಿಯುವ ಶಾಸ್ತ್ರ ಮಾಡುತ್ತಾರೆ. ನಾಗಮಂಡಲಗಳು ದೇವಾಲಯಗಳ ಪರಿಸರದಲ್ಲಿ ಸಾರ್ವಜನಿಕ ಮುಂದಾಳತ್ವದಲ್ಲಿಯೂ ಏರ್ಪಾಡಾಗುವುದುಂಟು. ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಜರುಗುವ ಢಕ್ಕೆ ಬಲಿಯು ನಾಗಾರಾಧನೆಯ ಒಂದು ವಿಧವಾಗಿದೆ.

**ಬೆರ್ಮೆರ್:** ತುಳುವರ ವಿಭಿನ್ನ ಪರಿಕಲ್ಪನೆಯ ದೈವಗಳಲ್ಲಿ ಬೆರ್ಮೆರ್ (ಬ್ರಹ್ಮ) ಸಹ ಒಂದು. ಈ ಬ್ರಹ್ಮನು ತ್ರಿಮೂರ್ತಿಗಳಲ್ಲೊಬ್ಬನಾದ ಚತುರ್ಮುಖ ಬ್ರಹ್ಮನೂ ಹೌದು; ನಾಗಸಂಬಂಧಿಯಾದ ನಾಗಬ್ರಹ್ಮನೂ ಹೌದು; ಜೈನ ಸಂಬಂಧಿಯಾದ ಯಕ್ಷಬ್ರಹ್ಮನೂ ಹೌದು. ಅವನ ಶಿಲ್ಪದಲ್ಲಿಯೂ ವೈವಿಧ್ಯವಿದೆ; ಅವನಿಗೆ ನಾಲ್ಕು ಮುಖಗಳಿದ್ದರೆ ಚತುರ್ಮುಖ ಬ್ರಹ್ಮನ ಸ್ವರೂಪ; ಸರ್ಪನ ಹೆಡೆಗಳಿಂದ ಅಲಂಕೃತನಾಗಿದ್ದರೆ ನಾಗಬ್ರಹ್ಮನ ಸ್ವರೂಪವಾಗುತ್ತದೆ. ವೀರರಸದ ಭಂಗಿಯಲ್ಲಿ ಯೋಧನಂತೆ ಅಶ್ವಾರೋಹಿಯಾಗಿದ್ದರೆ ಅದು ಯಕ್ಷಬ್ರಹ್ಮನ ಸ್ವರೂಪ; ಪಾಡ್ದನಗಳಲ್ಲಿ ಬೆರ್ಮೆರ್ ಪ್ರಸ್ತಾಪ ಸಾಮಾನ್ಯವಾಗಿ ಬರುತ್ತದೆ. ಕೋಟಿ ಚೆನ್ನಯರು ಬೆರ್ಮೆರ ಭಕ್ತರಾದುದರಿಂದ ಅವರ ಗರೋಡಿಗಳಲ್ಲಂತೂ ಬೆರ್ಮೆರ ಆರಾಧನೆ ಇದ್ದೇತೀರುತ್ತದೆ. ಜೀವ ಸಮೂಹ ಹಾಗೂ ಫಲ ಸಮೃದ್ಧಿಗಾಗಿಯಲ್ಲದೆ, ರಾಜ್ಯದ ನಿಯಾಮಕ ವ್ಯವಸ್ಥೆಗಳ ರಕ್ಷಣೆಯ ಆಶಯದಿಂದಲೂ ಪ್ರಾಚೀನ ತೌಳವ ಅರಸರು ಬೆರ್ಮೆರ್‌ನನ್ನು ಆರಾಧಿಸುತ್ತಿದ್ದರು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

**ಮಾರಿ:** ಮಾರಿಯಮ್ಮನ ಆರಾಧನೆಯು ತುಳುನಾಡಿನಲ್ಲಿ ಸಾರ್ವತ್ರಿಕವಾಗಿದೆ. ಕರ್ಕಾಟಕ ಸಂಕ್ರಾಂತಿಯ ಮೊದಲ ಮಂಗಳವಾರ ಮಾರಿಗೆ ಕುರಿ ಬಿಡುವುದರ ಮೂಲಕ ಮಾರಿಯ ವಾರ್ಷಿಕ ಪೂಜೆ ಊರಲ್ಲಿ ಪ್ರಾರಂಭವಾಗುತ್ತದೆ. ಅದರ ಮುಂದಿನ ಮಂಗಳವಾರ ಮಾರಿ ಪೂಜೆ. ಹೊಂಗಾರಿನ ಮರದಲ್ಲಿ ಮಾಡಿದ ಮಾರಿಯ ಪ್ರತಿಮೆಯನ್ನು ರಾತ್ರಿ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರುವಾಗ ರಾಣ್ಯದವರು ಮಾರಿಯನ್ನು ಬಯ್ಯುತ್ತಾ ಹಾಡುತ್ತಾರೆ. ಗುಡಿಯಲ್ಲಿ ಮಾರಿಯ ಪ್ರತಿಷ್ಠೆ, ಪೂಜೆ, ಬಲಿ ಇತ್ಯಾದಿ ಆಗುತ್ತದೆ. ಮಾರನೇ ದಿನ ಮಾರಿ ವಿಗ್ರಹವನ್ನು ಹತ್ತಿರದ ಕೆರೆಯಲ್ಲಿ ವಿಸರ್ಜಿಸುತ್ತಾರೆ. ಹೆಚ್ಚಿನ ಕಡೆ ಮೂರ್ತಿ ಇರದೆ ನಿಶ್ಚಿತ ಸ್ಥಳದಲ್ಲಿ ಮಾರಿಯ ಆರಾಧನೆಯನ್ನು ನಡೆಸಲಾಗುತ್ತದೆ. ಆ ಸ್ಥಳದಲ್ಲಿ ಕತ್ತಲಾದ ಬಳಿಕ ಹರಕೆ ಹೇಳಿದವರು ತಮ್ಮ ಕೋಳಿ, ಕುರಿ, ಹಂದಿಗಳನ್ನು ತಂದು ಬಲಿಕೊಡುತ್ತಾರೆ. ಆನಂತರ ಅದೇ ಸ್ಥಳದಲ್ಲಿ ಅನ್ನ ಮತ್ತು ಅಕ್ಕಿಯ ಉಂಡೆ ಮಾಡಿ ಕೋಳಿಯ ಪಲ್ಯದೊಂದಿಗೆ ಎಡೆ ಇಡುತ್ತಾರೆ. ಆ ಸ್ಥಳದಿಂದ ಊರ ಗಡಿಯ ಇನ್ನೊಂದು ನಿಶ್ಚಿತ ಸ್ಥಳಕ್ಕೆ ಮಾರಿ ಓಡಿಸಿಕೊಂಡು ಹೋಗುತ್ತಾರೆ.

**ನೇಮ, ಹರಕೆಗಳು**

ಆಸ್ತಿಕರು ವಿವಿಧ ನಿರೀಕ್ಷೆಗಳಿಂದ ದೇವರು, ದೈವಗಳಿಗೆ ನೇಮ, ಹರಕೆಗಳನ್ನು ಹೇಳಿಕೊಳ್ಳುವುದು ಸಾಮಾನ್ಯವಾಗಿದೆ. ಈ ಹರಕೆಯ ಭಾಗವಾಗಿ ನೇಮ, ಉತ್ಸವಗಳ ಸಂದರ್ಭಕ್ಕೆ ಕೃಷಿಕರು ತಾವು ಬೆಳೆದ ತೆಂಗು, ಬಾಳೆ ಮೊದಲಾದ ಫಸಲನ್ನು ಹೊರೆಕಾಣಿಕೆಯಾಗಿ ತಂದುಕೊಡುವುದು ತುಳುನಾಡಿನಲ್ಲಿ ಸಾಮಾನ್ಯವಾಗಿದೆ. ಈ ಹರಕೆ ಪದ್ಧತಿಗಳಲ್ಲಿ ಇತರೆಡೆಗಿಂತ ವಿಭಿನ್ನವಾದ ಒಂದು ನಡವಳಿಕೆ ಕಾಣಬರುವುದು ಸುರಿಯದ ಅಮ್ಮಾಡಿ ಬನದಲ್ಲಿ. ಹರಕೆ ಹೊತ್ತವರು ವಿಮಾನ, ಹೊಲಿಗೆಯಂತ್ರ ಮನೆ, ನಾಯಿ, ಕೋಳಿ, ಕಣ್ಣು ಮೂಗು ಮುಂತಾದುವನ್ನೆಲ್ಲಾ ಕುಂಬಾರರಿಂದ ಮಣ್ಣಿನ ಆಕೃತಿಗಳಾಗಿ ಮಾಡಿಸಿ, ಇಲ್ಲಿ ತಂದು ಒಪ್ಪಿಸಿದ್ದಾರೆ. ಎಷ್ಟೋ ವರ್ಷಗಳಿಂದ ನೀಡಿದ ಸುಟ್ಟ ಮಣ್ಣಿನ ಅಂತಹ ಅಸಂಖ್ಯ ರೂಪದ ಹರಕೆಗಳು ಇಲ್ಲಿ ರಾಶಿ ಬಿದ್ದಿವೆ. ಕಾಜೂರಿನ ದರ್ಗಾ ಷರೀಫ್‌ದು ಇನ್ನೊಂದು ಬಗೆ. ಇಲ್ಲಿಗೆ ಹರಕೆ ಹೇಳಿಕೊಂಡವರು ಉರೂಸ್ ಹೊತ್ತಿಗೆ ಲಕ್ಷಾಂತರ ಕೋಳಿಗಳನ್ನು, ನೂರಾರು ಮೇಕೆಗಳನ್ನು ತಂದು ಒಪ್ಪಿಸುತ್ತಾರೆ. ಅಗತ್ಯ ವಾದಷ್ಟುವನ್ನು ಬಲಿಕೊಟ್ಟು ಉಳಿದುವನ್ನು ಅಲ್ಲಿಯೆ ಹರಾಜು ಹಾಕುತ್ತಾರೆ. ಅದರಿಂದಲೇ ದರ್ಗಾಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತದೆ.

**ಮನೆಯ ಮಾದರಿಗಳು**

ಕರಾವಳಿ ಭಾಗದಲ್ಲಿ ಮಳೆ ಬಹು ಬಿರುಸಾಗಿಯೂ, ಹೆಚ್ಚಾಗಿಯೂ ಬೀಳುವುದರಿಂದ, ಹಾಗೆ ಬಿದ್ದ ಮಳೆ ಅದೇ ಹೊತ್ತಿಗೆ ಪೂರ್ಣವಾಗಿ ಕೆಳಗೆ ಜಾರಿ ಹೋಗುವಂತಹ ರೀತಿಯ ಕಡಿದಾದ ಚಾವಣಿಯ ಮನೆಗಳನ್ನು ನಿರ್ಮಿಸುವುದು ಅಗತ್ಯವಾಗಿದೆ. ಬಡವರು ನಿರ್ಮಿಸುವ ಗುಡಿಸಲು (ಬುಡಾರ)ಗಳೂ ಹೀಗೇ ಸುತ್ತಲೂ ಇಳಿಜಾರಾದ ಮುಳಿಹುಲ್ಲಿನ ಚಾವಣಿಯಿಂದಲೇ ಕೂಡಿರುತ್ತವೆ. ಮಳೆ ಇರುಚಲುನಿಂದ ರಕ್ಷಿಸುವ ಸಲುವಾಗಿಯೇ ಸಾಮಾನ್ಯವಾಗಿ ನಾಲ್ಕಾರ ಚಾವಣಿಗಳು ಗೋಡೆಗಳನ್ನು ಬಹುಮಟ್ಟಿಗೆ ಮರೆ ಮಾಡಿದಂತೆ ಇರುತ್ತವೆ. ನೆಲದ ತೇವಾಂಶ ಏರಿ ಮನೆ ಕುಸಿದುಬೀಳದಂತಿರಲು ಎತ್ತರವಾದ ಕಲ್ಲಿನ ಪಂಚಾಂಗವನ್ನು ನಿರ್ಮಿಸಿ, ಅದರ ಮೇಲೆ ಗೋಡೆಗಳನ್ನು ಕಟ್ಟುತ್ತಾರೆ. ಈ ಭಾಗದಲ್ಲಿ ದೊರೆಯುವ ಜಂಬಿಟ್ಟಿಗೆ ವಿಶಿಷ್ಟವಾಗಿದ್ದು, ಭೂಮಿಯಲ್ಲಿ ಮೇಣದಂತೆ ಮೆದುವಾಗಿದ್ದದ್ದು, ಗಾಳಿಗೆ ಬಂದ ಮೇಲೆ ಕಲ್ಲಿನಂತೆ ಗಟ್ಟಿಯಾಗಿಬಿಡುತ್ತದೆ. ಸಾಮಾನ್ಯವಾಗಿ ಈ ಕಲ್ಲನ್ನೇ ದಪ್ಪ ಇಟ್ಟಿಗೆಯಂತೆ ಗೋಡೆ ಕಟ್ಟಲು ಬಳಸುತ್ತಾರೆ. ಜಮೀನುದಾರರು ಸುಂದರವಾದ ಕಾಷ್ಠ ಶಿಲ್ಪದಿಂದಾದ ತೊಲೆ, ಕಂಬ, ಕಿಟಕಿ, ಬಾಗಿಲುಗಳ ದೊಡ್ಡ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದರು. ಇವನ್ನು ಸಾಂಪ್ರದಾಯಿಕವಾಗಿ ಬೀಡು, ಗುತ್ತು, ಅರಮನೆ ಮೊದಲಾದ ಹೆಸರುಗಳಿಂದ ಗುರುತಿಸುವುದು ರೂಢಿಯಾಗಿದೆ. ತುಳುನಾಡಿನ ಸಾಂಸ್ಕೃತಿಕ ಅಭಿವ್ಯಕ್ತಿಯಾದ ಸಿರಿ ಪಾಡ್ದನದಲ್ಲಿ ಸತ್ಯನಾಪುರದ ಅರಮನೆಯಲ್ಲಿ ಚಿಕ್ಕಚಾವಡಿ, ಚಿತ್ರಮಂಟಪ, ಗಾಳಿಗೋಪುರ, ಬರಹದ ಸಾಲೆ, ಏಳಂಕಣದ ಯಮಗುಂಡ, ತೂಗುಯ್ಯಾಲೆ ಮೊದಲಾದುವು ಇದ್ದದ್ದರ ವರ್ಣನೆ ಬರುತ್ತದೆ. ಹಳೆಯ ಮಾದರಿಯ ಇಂಥ ಎಷ್ಟೋ ಮನೆಗಳು ಈಗ ನಾನಾ ಕಾರಣಗಳಿಂದಾಗಿ ತಮ್ಮ ಸಾಂಪ್ರದಾಯಿಕ ರೂಪ ಕಳೆದುಕೊಳ್ಳುವ, ಇಲ್ಲವೇ ವಿನಾಶವಾಗುವ ಹಂತದಲ್ಲಿವೆ.

ಐನ್ಮನೆ ಅಥವಾ ಕಟ್ಟೆ ಮನೆ ಆಯಾ ಕುಲದ ಯಜಮಾನನಿರುವ ಅಥವಾ ತಮ್ಮ ಕುಲದೈವವನ್ನು ಇಟ್ಟುಕೊಂಡಿರುವ ಮುಖ್ಯ ಮನೆಯಾಗಿರುತ್ತದೆ. ಕುಟುಂಬದ ಎಲ್ಲಾ ಸದಸ್ಯರು ಹಬ್ಬ ಆಚರಣೆಗಳಲ್ಲಿ ಒಟ್ಟಿಗೆ ಸೇರುವ, ನ್ಯಾಯ ತೀರ್ಮಾನದ ಕೇಂದ್ರವೂ ಆಗಿರುವ ಈ ಮನೆಯನ್ನು ಯಾವುದೇ ಕಾರಣಕ್ಕೂ ಭಾಗ ಮಾಡಬಾರದೆಂಬ, ಹಾಳಾಗಲು ಬಿಡಬಾರದೆಂಬ ನಂಬಿಕೆ, ಗೌರವ ಆ ಮನೆತನಕ್ಕೆ ಸೇರಿದ ಎಲ್ಲಾ ಸದಸ್ಯರಿಗೆ ಇರುತ್ತದೆ. ನಾಲ್ಕು ಸುತ್ತಿನ ಒಳಾಂಗಣ ಮನೆಗಳು ಸುಳ್ಯ ಪರಿಸರದ ಗೌಡರಲ್ಲಿನ ವಿಶಿಷ್ಟ ರಚನೆಗಳಾಗಿವೆ. ಅವಿಭಕ್ತ ಕುಟುಂಬಗಳ ಈ ದೊಡ್ಡ ಗಾತ್ರದ ಮನೆಗಳಲ್ಲಿ ನಾಲ್ಕು ಸುತ್ತೂ ಕೊಠಡಿಗಳಿದ್ದು, ನಡುವೆ ಅಂಗಳವಿರುತ್ತದೆ. ಈ ಮನೆಯ ಒಂದೊಂದು ಅಂಗಕ್ಕೂ ಒಂದೊಂದು ಹೆಸರಿದ್ದು, ಅವು ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವುದು ಗಮನಿಸುವಂತಿದೆ. ಉದಾ: ನಡುಂಗಳ ಅತ್ಯಂತ ಪವಿತ್ರ ಸ್ಥಾನವೆಂದು ಪರಿಗಣಿತವಾಗಿದೆ. ಜಗಲಿ ಅಥವಾ ಕೈಯ್ಯಾಲೆ ಮನೆಯ ಮುಖ್ಯ ಭಾಗಗಳಲ್ಲಿ ಒಂದಾಗಿದ್ದೆ; ಸುಂದರವಾದ ಕೆತ್ತನೆಯ ಗೋಧಿ ಕಂಬಗಳಿಂದ ಕೂಡಿರುತ್ತದೆ. ಐಮರವು ಮನೆಯ ಯಜಮಾನ ಕೂರುವ ಅಧಿಕಾರ ಪೀಠವಾಗಿದೆ. ಉಂಬೊಳಗೆಯಲ್ಲಿರುವ ಕನ್ನಿಕಂಬಕ್ಕೆ ಧಾರ್ಮಿಕ ಮಹತ್ವ ಇದೆ. ಅವಿಭಕ್ತ ಕುಟುಂಬಗಳಿರುವ ಈ ಮನೆಗಳ ಒಂದು ವಿಶಿಷ್ಟ ವ್ಯವಸ್ಥೆ ಎಂದರೆ, ಒಂದೊಂದು ದಂಪತಿ ಜೋಡಿಯೂ ಬೇರೆ, ಬೇರೆ ಕೋಣೆಗಳಲ್ಲಿ ವಾಸ ಮಾಡಿದರೂ, ಆಯಾ ಕೋಣೆಯಲ್ಲಿನ ಒಲೆಯಲ್ಲಿ ತಮಗೆ ಬೇಕಾದಂತೆ ಸಾಂಬಾರು, ಚಹಾ ಇತ್ಯಾದಿ ಮಾಡಿಕೊಂಡರೂ, ಅನ್ನವನ್ನು ಮಾತ್ರ ಉಂಬೊಳಗೆ ಎಂಬ ಇಡೀ ಮನೆಗೆ ಒಂದೇ ಇರುವ ಪ್ರತ್ಯೇಕ ಕೋಣೆಯ ಒಲೆಯಲ್ಲಿ ಮನೆಯ ಎಲ್ಲರಿಗೂ ಒಟ್ಟಾಗಿ ಬೇಯಿಸಿದ ಪಾತ್ರೆಯಿಂದಲೇ ತೆಗೆದುಕೊಂಡು ಹೋಗಬೇಕಾಗುತ್ತದೆ. ಬೆಳ್ತಂಗಡಿ ಭಾಗದ ಜೈನರು ಹಾಗೂ ಬಂಟರಿಗೆ ಸೇರಿದ ಸುತ್ತುಪಡ್ಸಾರೆ ಎಂಬ ಮನೆಗಳೂ ಜಿಲ್ಲೆಯ ವಿಶಿಷ್ಟ ನಿರ್ಮಾಣಗಳಾಗಿವೆ. ಈ ಮನೆಗಳ ಒಂದು ಭಾಗವಾಗಿಯೇ ಅವರ ಭೂತದೈವಗಳ ನೆಲೆಗಳೂ ಇರುತ್ತವೆ. ಮನೆಯ ಮುಂದೆ ಅಂಗಳ, ಅದರಲ್ಲಿ ತುಳಸಿಕಟ್ಟೆ, ಭತ್ತದ ತಿರಿ, ಮನೆಯ ಒಂದು ಬದಿಗೆ ಕೊಟ್ಟಿಗೆ, ಸುತ್ತಲೂ ಬೇಲಿ ಅಥವಾ ಪಾಗಾರ, ಅದರ ಆಚೆಗೆ ಗದ್ದೆ, ತೋಟ ಇವು ಇಲ್ಲಿನ ಯಾವುದೇ ಮನೆ ಅಥವಾ ಗುಡಿಸಲಿನ ಪರಿಸರದ ಸಾಮಾನ್ಯ ಲಕ್ಷಣಗಳಾಗಿವೆ. ಅವರವರ ಕೃಷಿ ಭೂಮಿಯಲ್ಲಿಯೇ ಅವರವರ ಮನೆಗಳನ್ನು ಕಟ್ಟಿಕೊಳ್ಳುವುದು ಈ ಭಾಗದ ಒಂದು ಜೀವನಕ್ರಮವಾದುದರಿಂದ, ಬಯಲುಸೀಮೆಯಂತೆ ಇಲ್ಲಿ ಅಂಟುಮನೆಗಳು ಅಥವಾ ಒಂದೇ ಕಡೆ ಒಟ್ಟುಗೂಡಿದ ಮನೆಗಳು ಇರುವುದು ಬಹಳ ಕಡಿಮೆ. ಸಾಂಪ್ರದಾಯಿಕವಾಗಿ ಮಾಳಿಗೆ ಮನೆಗಳೂ ಇರುವುದಿಲ್ಲ. ಆದಾಗ್ಯೂ, ಈಚೆಗೆ ಸಾಂಪ್ರದಾಯಿಕ ಮನೆಗಳಿಗಿಂತ ಸಿಮೆಂಟ್, ಕಬ್ಬಿಣ ಇತ್ಯಾದಿ ಬಳಸಿದ ಆರ್‌ಸಿಸಿ ಮನೆಗಳು ವಿಶೇಷವಾಗಿ ನಿರ್ಮಾಣ ಆಗ ತೊಡಗಿವೆ. ಅನುಕೂಲಸ್ಥರು ಗೃಹನಿರ್ಮಾಣದಲ್ಲಿ ಹೊಸ ವಿನ್ಯಾಸಗಳನ್ನು ಅನುಸರಿಸತೊಡಗಿದ್ದಾರೆ.

**ಜಗಲಿ:** ಸುಳ್ಯ ಪರಿಸರದ ಗೌಡರ ಮನೆಗಳ ಜಗಲಿ, ಕೈಯ್ಯಾಲೆ, ತೊಂಬಾರ ಹಾಗೂ ಕನ್ನಿಕಂಬಗಳು ಸಾಂಸ್ಕೃತಿಕವಾಗಿ ಬಹು ಮಹತ್ವದ ಸ್ಥಾನವನ್ನು ಹೊಂದಿವೆ. ಜಗಲಿ ಅಥವಾ ಕೈಯ್ಯಾಲೆಯಲ್ಲಿ ಕುಳಿತೇ ಇವರು ಮದುವೆಯ ದಿನ ನಿರ್ಧಾರ ಮಾಡುತ್ತಾರೆ.

ಜಗಲಿ ಇಲ್ಲದಿದ್ದರೆ ಅವರಲ್ಲಿ ಸಾಂಪ್ರದಾಯಿಕವಾದ ಮದುವೆಯೇ ನಡೆಯುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಮನೆಯ ಅಂಗವಾಗಿ, ಜಗಲಿಯನ್ನು ತಪ್ಪದೇ ನಿರ್ಮಿಸಿರುತ್ತಾರೆ. ಹಾಗೆಯೇ, ಅಡುಗೆ ಮನೆಯಲ್ಲಿನ ಕನ್ನಿಕಂಬದ ಅಡಿಯಲ್ಲಿಯೇ ಹುಟ್ಟಿನಿಂದ ಸಾಯುವವರೆಗಿನ ಎಲ್ಲಾ ಕ್ರಿಯಾವಿಧಿಗಳು, ಅಲ್ಲದೆ, ಋತುಮಾನದ ಅನುಸಾರ ನಡೆಯುವ ಇನ್ನಿತರ ಆಚರಣೆಗಳು ನಡೆಯುತ್ತವೆ. ಹೀಗಾಗಿ, ಕನ್ನಿಕಂಬವಿರದ ಗೌಡರ ಮನೆಗಳೇ ಇರುವುದಿಲ್ಲ. ಕನ್ನಿಕಂಬ ಹಾಗೂ ಜಗಲಿಗಳು ಗೌಡರ ವಾಸ್ತುವಿನ ಮೂಲ ಘಟಕಗಳಾಗಿ ಕಾರ್ಯನಿರ್ವಹಿಸಿವೆ ಎಂಬುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ (ಕರಾವಳಿ ಜಾನಪದ ಪು. ೧೧೩).

**ಸುತ್ತು ಪಡ್ಸಾಲೆ ಮನೆ:** ತುಳುನಾಡಿನ ಪ್ರಾದೇಶಿಕ ವಿಶಿಷ್ಟ ಮನೆಗಳಾಗಿ ಸುತ್ತು ಪಡ್ಸಾಲೆ ಮನೆಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಅಧ್ಯಯನಕಾರರ ಪ್ರಕಾರ ಇವು ನಾಲ್ಕು ಸುತ್ತಿನ ಒಳಾಂಗಣ ಮನೆಗಳಿಗಿಂತ ವಿಭಿನ್ನವಾದುವು. ಬೆಳ್ತಂಗಡಿ ಭಾಗದಲ್ಲಿ ವಿಶೇಷವಾಗಿ ಕಾಣಬರುವ ಈ ಮನೆಗಳಿಗೆ ಗುತ್ತು, ಬೂಡುಗಳೆಂದೂ ಹೆಸರಿದ್ದು, ಇವು ಸಮಾಜದಲ್ಲಿ ಆಡಳಿತಾತ್ಮಕ ಅಧಿಕಾರ ಹೊಂದಿದ ಜೈನ ಹಾಗೂ ಬಂಟರಿಗೆ ಸೇರಿದುವು ಎಂದೂ ಹೇಳಲಾಗಿದೆ. ಈ ಮನೆಗಳ ರಾಚನಿಕ ವಿನ್ಯಾಸದ ಸಾಮಾನ್ಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದಾಗಿದೆ: ಅರಮನೆಗಳ ಸರಳರೂಪದಂತಿರುವ ಈ ಮನೆಯ ಮಧ್ಯದಲ್ಲಿ ವಿಶಾಲವಾದ ಅಂಗಳವಿರುತ್ತದೆ. ಮನೆಯ ಮುಖ್ಯದ್ವಾರ–ಪಡ್ಸಾಲೆ ಬಾಗಿಲು ಮೂಲಕ ನೇರವಾಗಿ ಅಂಗಳಕ್ಕೆ ಬರಬಹುದು. ಎಡದಲ್ಲಿ ಜಗಲಿಯಿಂದ ಊಟದ ಕೋಣೆಗೆ, ಅದಕ್ಕೆ ಹೊಂದಿದ ಅಡುಗೆ ಕೋಣೆಗೆ ಹೋಗಬಹುದು. ಜಗಲಿಯಿಂದಲೇ ಮಾಳಿಗೆಗೂ ಹೋಗಬಹುದು. ದಕ್ಷಿಣದ ಕಡೆಯಿಂದ ಬಲಕ್ಕೆ ಕೋಣೆಗಳು, ಅವುಗಳ ನಡುವೆ ಹೊರಕ್ಕೆ ಬಾಗಿಲು ಇರುತ್ತದೆ. ಕೋಣೆಗಳನ್ನು ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿ ಮನೆಯ ಪ್ರಧಾನ ಚಾವಡಿ ಇರುತ್ತದೆ; ಚಾವಡಿಯ ಪಕ್ಕದಲ್ಲೇ (ದೈವ) ಭೂತದ ಚಾವಡಿ ಇರುತ್ತದೆ. ಜಗಲಿ ಮತ್ತು ಚಾವಡಿ ಮಧ್ಯೆ ಇರುವ ಚಿಟ್ಟೆಯ ಮೇಲಿನ ಹಲಗೆ ಮೇಲೆ ಬೋದಿಗೆ ಕಂಬಗಳಿರುತ್ತವೆ. ಚಾವಡಿಯಲ್ಲಿನ ತೂಗುಯ್ಯಾಲೆಯಲ್ಲಿ ಭೂತದೈವದ ಮೊಗ, ಕಡ್ತಲೆ ಇತ್ಯಾದಿಗಳಿರುತ್ತವೆ. ಚಾವಡಿಯಿಂದಲೂ ಮಾಳಿಗೆಗೆ ಹೋಗುವ ದಾರಿ ಇರುತ್ತದೆ; ಪಶ್ಚಿಮದ ಕಡೆ ಹೊರಬಾಗಿಲು ಇರುತ್ತದೆ. ಪಡ್ಸಾಲೆ ಬಾಗಿಲ ಬಲಪಕ್ಕ ದಾಸ್ತಾನು ಕೋಣೆ ಇರುತ್ತದೆ. ಅಂಗಳದಲ್ಲಿ ಬಾವಿ, ಸ್ನಾನದ ಮನೆಗಳಿದ್ದು, ದನಗಳ ಹಟ್ಟಿ ಹೊರಭಾಗದಲ್ಲಿರುತ್ತದೆ (ವಿವರಕ್ಕೆ: ಗೌಡ ಜನಾಂಗ: ೨೦೦೩:೨೩೭–೪೦).

## ಧರ್ಮಗಳು

**ಜಿಲ್ಲೆಯಲ್ಲಿ ಧಾರ್ಮಿಕ ಬದುಕು:** ವಿವಿಧ ಕಾರಣಗಳಿಗಾಗಿ ಬೇರೆ ಬೇರೆ ಧರ್ಮ–ಪಂಥಗಳವರು ತುಳುನಾಡಿಗೆ ಬಂದು ನೆಲೆನಿಂತದ್ದರಿಂದ ಸಹಜವಾಗಿಯೇ ಇಲ್ಲಿ ಹಲವು ಧರ್ಮ–ಸಂಪ್ರದಾಯಗಳ ಸಮನ್ವಯ–ಸಹಬಾಳ್ವೆಗಳ ಬದುಕು ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ನಾಗಾರಾಧನೆ, ಭೂತಾರಾಧನೆಗಳು ಇಲ್ಲಿನ ನೆಲೆ ಮೂಲದವರ ಧಾರ್ಮಿಕ ಬದುಕಿನ ಪ್ರಧಾನ ಭಾಗವಾಗಿದ್ದವು. ಈ ಪರಿಕಲ್ಪನೆಗಳ ಮೇಲೆ ನೆರೆಯ ಮಲಯಾಳಿಗಳ ಪ್ರಭಾವವೂ ಆಗಿದ್ದಿರಬಹುದು. ಉತ್ತರದಿಂದ ಬಂದ ಜೈನರು ಇಲ್ಲಿನ ಹಿಂದೂಗಳೊಂದಿಗೆ ಸಹಜವಾಗಿಯೇ ಬೆರೆತರು. ನಾಥಪಂಥೀಯರೂ ಉತ್ತರದಿಂದ ಬಂದು ಇಲ್ಲಿನ ಕದ್ರಿಯನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ತಾತ್ವಿಕ ಚಿಂತನೆಗಳನ್ನು ಪ್ರಚುರಪಡಿಸಿದರು. ತುಳುನಾಡಿಗೆ ವ್ಯಾಪಾರಕ್ಕಾಗಿ ಬಂದ ಅರಬ್ ವರ್ತಕರು ಇಲ್ಲಿಯವರೊಂದಿಗೆ ವೈವಾಹಿಕ ಸಂಬಂಧ ಮಾಡಿಕೊಂಡಿದ್ದರು. ಇದರ ಫಲವಾಗಿ ಬ್ಯಾರಿ ಎಂಬ ಹೊಸ ಪಂಗಡವೇ ಹುಟ್ಟಿಕೊಂಡಿತು(ಪೊಲಿ, ಪು. ೫೨೨). ಕ್ರೈಸ್ತ ಮಿಶನರಿಗಳು ಇಲ್ಲಿ ಮತಪ್ರಚಾರದೊಂದಿಗೆ ಭಾಷೆ, ಸಾಹಿತ್ಯಗಳ ಕೆಲಸವನ್ನೂ ಮಾಡಿದರು. ದಲಿತರ ಸೇವೆಯನ್ನೂ ಮಾಡಿದರು. ಗೋವಾದಿಂದ ಬಂದ ಕೊಂಕಣಿ ಕ್ರೈಸ್ತರು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಅಪರೂಪವಾದವು. ಕೆಲವು ದಶಕಗಳ ಹಿಂದೆ ಮಂಗಳೂರಿನಲ್ಲಿ ಕಾರ್ಯಾರಂಭ ಮಾಡಿದ ಆರ್ಯಸಮಾಜ, ಥಿಯಾಸಾಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್, ದಿ ಡಿಪ್ರೆಸ್ಡ್ ಕ್ಲಾಸಸ್ ಮಿಶನ್, ಹರಿಜನ ಸೇವಕ ಸಂಘ, ಮಹಿಳಾ ಸಭಾ ಮೊದಲಾದ ಸಂಘಸಂಸ್ಥೆಗಳು ಈ ಪ್ರಾಂತ್ಯದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಚಿಂತನೆಗಳನ್ನು ಹರಡಲು, ವಿವಿಧ ಬಗೆಯ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸಲು ಮುಂದಾಗುವ ಮೂಲಕ ಹೊಸ ಬದುಕಿನತ್ತ ಜನರನ್ನು ಕೊಂಡೊಯ್ಯುವ ಪ್ರಯತ್ನ ಮಾಡಿವೆ. ಕೇರಳದ ನಾರಾಯಣ ಗುರುವಿನ 'ಒಂದೇ ಜಾತಿ, ಒಂದೇ ಮತ, ಒಂದೇ ದೇವರು'ದಂತಹ ಘೋಷಣೆ ಈ ಪ್ರಾಂತ್ಯದಲ್ಲಿಯೂ ಆಂದೋಲನವಾಗಿ ಕೆಲಸ ಮಾಡಿದೆ. ಈ ರೀತಿಯ ಪ್ರಗತಿಪರ ಪ್ರಯತ್ನಗಳಿಂದಾಗಿ ಹಿಂದುಳಿದವರು, ದಲಿತರಿಗೆ ದೇವಳಗಳ ಪ್ರವೇಶಕ್ಕೆ ಅವಕಾಶ ದೊರೆತಿದೆ. ಕುದ್ಮುಲ್ ರಂಗರಾಯರ ಹರಿಜನ ಪರವಾದ ಚಟುವಟಿಕೆಗಳು ಮಹಾತ್ಮಾಗಾಂಧೀ ಅವರ ಹರಿಜನೋದ್ಧಾರ ಚಳವಳಿಗೆ ಮೂಲ ಪ್ರೇರಣೆಯಾಯಿತು ಎಂಬುದು ವಿಶೇಷ ಕುತೂಹಲದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ

ತುಳುನಾಡಿನಲ್ಲಿ ಗಣನೀಯವಾಗಿ ಅನುಯಾಯಿಗಳನ್ನು ಹೊಂದಿರುವ ಹಿಂದೂ, ಜೈನ, ಕ್ರಿಶ್ಚಿಯನ್, ಮುಸ್ಲಿಂ ಧರ್ಮಗಳ ಹಾಗೂ ನಾಥಪಂಥಗಳ ಹಿನ್ನೆಲೆ ಕುರಿತ ಸ್ಥೂಲ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ.

**ಹಿಂದೂ :** ತುಳುನಾಡಿನಲ್ಲಿ ವೈದಿಕಪೂರ್ವದ ಸಂಪ್ರದಾಯಗಳು ನಾನಾ ಬಗೆಯಲ್ಲಿ ಇದ್ದುದರ ಬಗೆಗೆ ಈಗಲೂ ಹಲವು ನಿದರ್ಶನಗಳು ದೊರೆಯುತ್ತವೆ. ನಾಗಾರಾಧನೆಯ ಪ್ರತೀಕವಾದ ನಾಗಬನಗಳು, ದೇವಾಲಯಗಳು ಹಾಗೂ ನಾಗಮಂಡಲದಂತಹ ಆಚರಣೆಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಹಾಗೆಯೇ, ಭೂತಾರಾಧನೆಯು ತುಳುನಾಡಿನ ಇನ್ನೊಂದು ವಿಶಿಷ್ಟ ಬಗೆಯ ಆರಾಧನಾ ಪರಿಕಲ್ಪನೆಯಾಗಿದೆ. ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲಿಯೂ ಭೂತಸ್ಥಾನಗಳಿರುತ್ತವೆ. ಸಂಬಂಧಿಸಿದ ದೈವದ ಪ್ರತೀಕವಾಗಿ ಮುಖವಾಡ, ಕತ್ತಿ ಇತ್ಯಾದಿಗಳನ್ನು ಇರಿಸಿ, ಪೂಜೆ ಮಾಡಲಾಗುತ್ತದೆ. ಎಲ್ಲಾ ಜಾತಿಯವರೂ ಈ ದೈವಗಳಿಗೆ ನಡೆದುಕೊಳ್ಳುತ್ತಾರೆ. ಭೂತಗಳ ಬಗೆಗೆ ಅಸಂಖ್ಯವಾದ ತುಳು ಪಾಡ್ದನಗಳು ಪ್ರಚಲಿತದಲ್ಲಿವೆ. ಹರಕೆಯ ರೂಪವಾಗಿ ಭೂತಕೋಲಗಳು ಬಹು ನೇಮ–ನಿಷ್ಠೆಗಳಿಂದ ನಡೆಯುತ್ತವೆ. ಇವಲ್ಲದೆ, ಪಂಚಭೂತಗಳು, ನಿರ್ದಿಷ್ಟ ಆಕಾರವಿರದ ಕಲ್ಲು, ಮರ, ಪ್ರಾಣಿಗಳ ಪ್ರತಿಮೆಗಳನ್ನೂ ದೈವೀಶಕ್ತಿಗಳಾಗಿ ಪೂಜಿಸುವ ಪದ್ಧತಿ ಬಹು ಹಿಂದಿನಿಂದಲೂ ವ್ಯಾಪಕವಾಗಿ ನಡೆದುಬಂದಿದೆ. ಇವೆಲ್ಲವುಗಳ ಜೊತೆಗೆ ಮಾರಿಯಂತಹ ಅನೇಕ ಜಾನಪದೀಯ ಹಿನ್ನೆಲೆಯ ಶಕ್ತಿ ದೇವತೆಗಳನ್ನು ಪೂಜಿಸುವ ಪರಿಪಾಠವೂ ಜಿಲ್ಲೆಯಲ್ಲಿ ಸಾಮಾನ್ಯವಾಗಿದೆ.

ಹಿಂದೂಧರ್ಮದ ವಿವಿಧ ಪಂಥಗಳೂ ಬಹು ಹಿಂದಿನಿಂದಲೇ ತುಳುನಾಡಿನಲ್ಲಿ ತಮ್ಮ ಅನುಯಾಯಿಗಳನ್ನು ಪಡೆದಿದ್ದವು. ಅದ್ವೈತ ತತ್ವ ಪ್ರತಿಪಾದಕರಾದ ಶಂಕರಾಚಾರ್ಯ ಕೇರಳದಲ್ಲಿ ಹುಟ್ಟಿದರೂ ತುಳುನಾಡಿನಲ್ಲಿಯೂ ಪ್ರವಾಸ ಮಾಡಿ ತಮ್ಮ ಪಂಥವನ್ನು ಪ್ರಚಾರ ಮಾಡಿದರು. ಹೀಗಾಗಿ, ಜಿಲ್ಲೆಯಲ್ಲಿ ಸ್ಮಾರ್ತರೂ, ಅವರ ಮಠ, ದೇವಾವಾಲಯಗಳೂ ಕಂಡುಬರುತ್ತವೆ. ೧೧ನೇ ಶತಮಾನದಲ್ಲಿ ರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ವೈಷ್ಣವ ಪಂಥವನ್ನು ಸ್ವೀಕರಿಸಿದ ಹೊಯ್ಸಳ ವಿಷ್ಣುವರ್ಧನನ ಆಳ್ವಿಕೆಗೆ ತುಳುನಾಡೂ ಸೇರಿದ ಹಿನ್ನೆಲೆಯಲ್ಲಿ ತುಳು ಪ್ರಾಂತ್ಯದಲ್ಲಿಯೂ ವೈಷ್ಣವ ಪಂಥದ ಪ್ರಭಾವ ವಿಶೇಷವಾಗಿ ಆಗುವಂತಾಯಿತು. ವೈಷ್ಣವರಿಗೆ ಸಂಬಂಧಿಸಿದ ಮಠ ಮಾನ್ಯಗಳು, ದೇವಾಲಯಗಳು ಜಿಲ್ಲೆಯಲ್ಲಿ ವ್ಯಾಪಕವಾಗಿವೆ. ೧೩ನೇ ಶತಮಾನದಲಿ ದ್ವೈತ ಸಿದ್ಧಾಂತವನ್ನು ಪ್ರಚುರಪಡಿಸಿದ ಮಧ್ವಾಚಾರ್ಯರು ಹುಟ್ಟಿದ್ದು ಉಡುಪಿ ಬಳಿಯ ಪಾಜಕದಲ್ಲಿ. ಹೀಗಾಗಿ, ತುಳುನಾಡಿನಲ್ಲಿ ಮಾಧ್ವ ಪಂಥದ ಪ್ರಭಾವ ಹೆಚ್ಚು ವ್ಯಾಪಕವಾಗಿದ್ದು, ಹಲವು ಮಠ ಹಾಗೂ ದೇವಾಲಯಗಳೂ ಇವೆ.

ಹೀಗೆ, ಈ ವಿವಿಧ ಪಂಥಗಳಿಂದಾಗಿ ವಿಷ್ಣುವಿನ ಅವತಾರಗಳ ವಿವಿಧ ನಾಮ–ರೂಪಗಳ ದೇವಾಲಯಗಳೂ ಮಧ್ವಾಚಾರ್ಯರಿಂದಾದ ಕೃಷ್ಣ ದೇವಾಲಯಗಳೂ ಜಿಲ್ಲೆಯಲ್ಲಿ ಸಾಮಾನ್ಯವಾಗಿವೆ. ಇದರೊಂದಿಗೆ, ಪರಶುರಾಮನನ್ನು ಪೂಜಿಸುವ ಚಿತ್ಪಾವನರು ಇರುವ ಹಾಗೇ ಸೂರ್ಯನಾರಾಯಣನನ್ನು ಆರಾಧಿಸುವ ಸೌರ ಪಂಥೀಯರೂ, ಹರಿಹರರನ್ನು ಅಭೇದ್ಯವೆನಿಸಿ ಶಂಕರನಾರಾಯಣನನ್ನು ಪೂಜಿಸುವ ಭಗವತ ಸಂಪ್ರದಾಯದವರೂ ಜಿಲ್ಲೆಯಲ್ಲಿದ್ದಾರೆ.

**ಶೈವ :** ಶೈವಾರಾಧನ ಸಂಪ್ರದಾಯಕ್ಕೂ ಜಿಲ್ಲೆಯಲ್ಲಿ ಪ್ರಾಚೀನ ಇತಿಹಾಸವಿದೆ. ದಕ್ಷಿಣ ಕನ್ನಡದ ಪ್ರಾಚೀನ ಅರಸರಾದ ಆಳುಪರು ಶೈವಮತಾನುಯಾಯಿಗಳಾಗಿದ್ದು, ಅನೇಕ ದೇವಾಲಯಗಳನ್ನು ಕಟ್ಟಿಸಿದ್ದರು. ಶಿಶಿಲದ ಶಿಶಿಲೇಶ್ವರನಿಗೆ ಕದಂಬ ಮಯೂರವರ್ಮ ಗುಡಿ ಕಟ್ಟಿಸಿದನೆಂಬ ಐತಿಹ್ಯವಿದೆ. ಧರ್ಮಸ್ಥಳದ ಮಂಜುನಾಥ ದೇವಾಲಯ ೧೧–೧೨ನೇ ಶತಮಾನದಷ್ಟು ಪ್ರಾಚೀನದ್ದಾಗಿದೆ. ಕದ್ರಿ ಹಾಗೂ ಧರ್ಮಸ್ಥಳಗಳಲ್ಲಿನ ಮಂಜುನಾಥ, ಬೌದ್ಧರ ವಜ್ರಯಾನ ಮತ್ತು ನಾಥಪಂಥಗಳ ತೀವ್ರ ಪ್ರಭಾವವು ಶೈವಧರ್ಮದ ಮೇಲೆ ಆದದ್ದರ ದ್ಯೋತಕವಾಗಿದೆ. ಮಂಗಳೂರು, ಉಪ್ಪಿನಂಗಡಿ, ವಿಟ್ಲ, ಸಾಸ್ತಾನ ಮೊದಲಾದಡೆ ಪ್ರಸಿದ್ಧ ಶೈವ ದೇವಾಲಯಗಳಾಗಿವೆ. ಕೆಲವೆಡೆ ವೀರಭದ್ರ ಅಥವಾ ಭೈರವಮೂರ್ತಿಗಳೇ ಇದ್ದು ಇಂಥಾ ದೇವಳಗಳು ೧೩ನೇ ಶತಮಾನದಷ್ಟು ಪ್ರಾಚೀನದ್ದಾಗಿವೆ. ಕದ್ರಿಯ ಮಂಜುನಾಥೇಶ್ವರ ದೇವಲದ ಆವರಣದಲ್ಲಿನ ಲಕುಲೀಶನ ವಿಗ್ರಹದ ಮೂಲಕ ಶೈವಧರ್ಮದ ಪ್ರಮುಖ ಶಾಖೆಯಾದ ಲಕುಲೀಶ ಪಾಶುಪತ ಪಂಥವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪ್ರಚುರವಾಗಿದ್ದುದು ಕಂಡುಬರುತ್ತದೆ. ಶಿವನಿಗೆ ಅಷ್ಟೇ ಅಲ್ಲದೆ, ಅವನ ಪರಿವಾರಕ್ಕೆ ಸೇರಿದ ಪಾರ್ವತಿ, ಗಣಪತಿ, ಸ್ಕಂದ, ನಾಗ, ನಂದಿ ಮೊದಲಾದವರಿಗೂ ಜಿಲ್ಲೆಯಾದ್ಯಂತ ಗುಡಿಗಳಿವೆ. ತುಳುನಾಡಿನಲ್ಲಿ ಶಕ್ತಿದೇವತೆಯ ಪ್ರಸಿದ್ಧ ದೇವಳಗಳೂ ಹಲವು ಇವೆ. ಜಿಲ್ಲೆಯಲ್ಲಿ ಎಲ್ಲೆಲ್ಲಿ ದುರ್ಗೆಯ ರೂಪದಲ್ಲಿ ಶಕ್ತಿ ದೇವತೆಯನ್ನು ಪೂಜಿಸಲಾಗುತ್ತಿದೆಯೋ ಅಲ್ಲೆಲ್ಲಾ ಲಿಂಗದೊಂದಿಗೆ ದೇವಿಯನ್ನು ಸಮೀಕರಿಸಲಾಗಿರುತ್ತದೆ. ಅಂದರೆ, ದುರ್ಗೆಗೆ ಲಿಂಗದ ರೂಪದಲ್ಲಿ ಅರ್ಚನೆ ಸಲ್ಲುತ್ತದೆ ಎನ್ನುವುದೂ ವಿಶೇಷ ಅಂಶವಾಗಿದೆ.

**ಬೌದ್ಧ:** ಮಂಗಳೂರಿನ ಕದ್ರಿಯ ಈಗಿನ ಮಂಜುನಾಥ ದೇವಾಲಯ ಬಹು ಹಿಂದೆ ಬೌದ್ಧ ಕ್ಷೇತ್ರವಾಗಿದ್ದಿತು. ಅಲ್ಲಿನ ಗುಡ್ಡದಲ್ಲಿ ಕಾಣಸಿಗುವ ಗುಹೆಗಳು ಇತರೆಡೆ ಕಾಣುವ ಬೌದ್ಧ ಗುಹೆಗಳನ್ನು ಹೋಲುತ್ತವೆ. ಕದ್ರಿಯ ಮಂಜುನಾಥ ದೇವಾಲಯದಲ್ಲಿನ ಲೋಕೇಶ್ವರ ವಿಗ್ರಹ, ವಿಹಾರ ಮತ್ತು ಮಂಗಳೂರಿಗೆ ಹೆಸರು ಬರಲು ಕಾರಣವಾಯಿತೆನ್ನುವ ಮಂಗಳಾದೇವಿ ಹಾಗೂ ಕದ್ರಿ, ಮೂಳೂರು ಮೊದಲಾದೆಡೆ ಕಾಣಬರುವ ಬುದ್ಧನ ಶಿಲಾವಿಗ್ರಹಗಳು ಕರಾವಳಿ ಭಾಗದಲ್ಲಿ ಪ್ರಾಚೀನ ಕಾಲದಲ್ಲಿಯೇ ಬೌದ್ಧ ಧರ್ಮದ ಅನುಯಾಯಿಗಳು ಇದ್ದರೆಂಬುದರ ಕುರುಹುಗಳಾಗಿವೆ.

**ನಾಥಪಂಥ:** ನಾಥಪಂಥವು ಮೂಲತ: ಬೌದ್ಧ ಧರ್ಮದ ಮಹಾಯಾನ ಶಾಖೆಯ ವಜ್ರಯಾನದಿಂದ ಹುಟ್ಟಿದ ಬೌದ್ಧ ತಾಂತ್ರಿಕ ಸಂಪ್ರದಾಯಕ್ಕೆ ಸೇರಿದೆ. ಬಳಿಕ ಇದು ಶೈವಧರ್ಮದ ತೆಕ್ಕೆಗೆ ಬಂದು ಅದರ ತಾಂತ್ರಿಕ ಶಾಖೆಯಾಗಿ ಪರಿವರ್ತಿತವಾಯಿತು. ಮತ್ಸ್ಯೇಂದ್ರನಾಥನು ನಾಥಸಂಪ್ರದಾಯದ ಪ್ರವರ್ತಕನಾಗಿದ್ದು, ಅವನು ಕದ್ರಿಯಲ್ಲಿ ಸ್ಥಾಪಿಸಿದ ಶಿವಲಿಂಗವೇ ಮುಂದೆ ಮಂಜುನಾಥನೆಂದು ಹೆಸರಾಯಿತೆನ್ನಲಾಗಿದೆ. ಗೋರಖನಾಥನು ಮತ್ಸ್ಯೇಂದ್ರನಾಥನ ಶಿಷ್ಯನಾಗಿದ್ದನು. ನಾಥಪಂಥ ಇವರಿಂದ ರೂಪುಗೊಂಡಿತು. ಸತ್ಯನಾಥಿ, ಧರ್ಮನಾಥಿ, ರಾಮನಾಥಿ, ನಾಟೇಶ್ವರಿ, ಕನ್ಹಡಿ, ಕಪಲಾಗಿ, ಭೈರಾಗಿ, ಮಾನ್‌ನಾಥಿ, ಪಾಗಲ್ ಪಂಥಿ, ರಾವಲ್ ಪಂಥಿ ಮತ್ತು ಗಂಗಾಪಂಥಿ ಎಂಬ ಹನ್ನೆರಡು ಗುಂಪುಗಳು (ಬಾರಹ್ ಪಂಥಿ) ನಾಥಪಂಥದಲ್ಲಿ ಇವೆ. ಈ ಪಂಥದವರ ಪೂಜಾಸ್ಥಳಗಳು (ಮಠ, ದೇವಸ್ಥಾನ ಹಾಗೂ ಸಮಾಧಿಗಳು) ಭಾರತದ ವಿವಿಧ ಸ್ಥಳಗಳಲ್ಲಿ ಅಲ್ಲದೆ, ನೇಪಾಳ, ಪಾಕಿಸ್ತಾನಗಳಲ್ಲೂ ಇವೆ. ವ್ಯಕ್ತಿಯು ಸನ್ಯಾಸಿಯಾಗಿ, ಯೋಗ ಸಾಧನೆ ಮಾಡುವುದೇ ಮುಕ್ತಿಗೆ ದಾರಿ ಎಂಬ ತಿಳಿವಳಿಕೆ ಈ ಪಂಥದ್ದಾಗಿದೆ. ಈ ಪಂಥದ ಅನುಯಾಯಿಗಳನ್ನು ಯೋಗಿ ಅಥವಾ ಜೋಗಿಗಳೆಂದು ಕರೆಯುತ್ತಾರೆ. ಇವರಲ್ಲಿ ಯೋಗಿಯಾಗಿ ದೀಕ್ಷೆ ಪಡೆಯಬೇಕೆನ್ನುವವರು ಎರಡು ಹಂತಗಳಲ್ಲಿ ತಮ್ಮ ಅರ್ಹತೆಯನ್ನು ಸಾಬೀತುಪಡಿಸಬೇಕಾಗುತ್ತದೆ. ಮೊದಲ ಹಂತವಾದ ಪರೀಕ್ಷಾ ಸಮಯದಲ್ಲಿ ಪ್ರಾಥಮಿಕ ಶಿಷ್ಯತ್ವ ಪಡೆದವನನ್ನು ಔಗರ್ ಎಂದೂ, ಕಿವಿಗಳನ್ನು ತುಂಡರಿಸಿ ದೀಕ್ಷೆ ನೀಡುವ ಎರಡನೆಯ ಹಂತ ಮುಗಿಸಿದವನನ್ನು ಕಾನ್‌ಫಟಾಯೋಗಿ ಎಂದೂ ಕರೆಯುತ್ತಾರೆ.

ಮಂಗಳೂರಿನಲ್ಲಿನ ಕದ್ರಿಗುಡ್ಡವು ನಾಥಪಂಥದವರ ಪ್ರಮುಖ ಕೇಂದ್ರವಾಗಿದೆ. ಇಲ್ಲಿ ಕಪಲಾನಿ, ಗಂಗಾನಾಥಿ, ಭೈರಾಗಿ ಮತ್ತು ಧುಂಯಾನಾಥಿ (ನಾಟೇಶ್ವರಿ) ಪಂಥಕ್ಕೆ ಸೇರಿದ ದರ್ಶನ ಯೋಗಿಗಳು ಮಾತ್ರ ಪೀಠಾಧಿಪತಿಗಳಾಗಬಹುದು. ಪೀಠಾಧಿಪತಿಗಳ ಆಯ್ಕೆಯು ನಾಸಿಕದ ತ್ರಯಂಬಕೇಶ್ವರದಲ್ಲಿ ೧೨ ವರ್ಷಗಳಿಗೊಮ್ಮೆ ಜರುಗುವ ಕುಂಭಮೇಳದಲ್ಲಿ ನಡೆಯುತ್ತದೆ. ಕದಳೀ ಅಥವಾ ಕದ್ರಿ ಮಠವು ದಕ್ಷಿಣಭಾರತದ ಅತ್ಯಂತ ಪ್ರಮುಖವಾದ ಮಠವಾದುದರಿಂದ ಇಲ್ಲಿಯ ಪೀಠಾಧಿಪತಿಗೆ ರಾಜರೆಂಬ ಬಿರುದು ಇದೆ. ಇಲ್ಲಿಗೆ ರಾಜರೆಂದು ನಿಯುಕ್ತರಾದವರು ಪಾತ್ರದೇವತೆಯನ್ನು ಕೈಲಿ ಹಿಡಿದು ಸಾಧುಗಳ ಜೊತೆ ಕಾಲ್ನಡಿಗೆಯಲ್ಲಿ ನಾಗರಪಂಚಮಿಯಂದು ನಾಸಿಕದಿಂದ ಪಯಣ ಆರಂಭಿಸಿ, ಶಿವರಾತ್ರಿಗೆ ಒಂದೆರಡು ದಿನ ಮೊದಲು ಕದ್ರಿ ಮಠಕ್ಕೆ ಬರುತ್ತಾರೆ. ಶಿವರಾತ್ರಿಯಂದು ಕದ್ರಿ ಯೋಗೀಶ್ವರ ಮಠದಲ್ಲಿ ಅವರಿಗೂ ವಿಟ್ಲ ಮಠದ ಪೀಠಾಧಿಪತಿಗೂ ಪಟ್ಟಾಭಿಷೇಕ ಆಗುತ್ತದೆ. ಸುಮಾರು ೧೦–೧೧ನೇ ಶತಮಾನದಲ್ಲಿ ಕದ್ರಿಯು ದಕ್ಷಿಣ ಭಾರತದಲ್ಲಿ ನಾಥಪಂಥದ ಪ್ರಸಿದ್ಧ ಕೇಂದ್ರವಾಗಿದ್ದಿತು. ಬಹುಮಟ್ಟಿಗೆ ಅದೇ ಕಾಲದಲ್ಲಿ ವಿಟ್ಲದಲ್ಲಿನ ಜೋಗಿಮಠವೂ ಪ್ರಾರಂಭವಾಯಿತೆನ್ನಲಾಗಿದೆ. ಅಲ್ಲಿ ಅಧಿದೈವವಾಗಿ ಮಂಜುನಾಥನಲ್ಲದೆ ಕಾಶೀ ಕಾಳಭೈರವ, ವ್ಯಾಘ್ರ, ಚಾಮುಂಡಿ, ಕಲ್ಲುರ್ಟಿ–ಕಲ್ಕುಡ ಮತ್ತಿತರ ಭೂತ–ದೈವಗಳು ಪೂಜೆಗೊಳ್ಳುತ್ತಿವೆ. ಕದ್ರಿಯಲ್ಲದೆ ಗುರುಪುರ, ವಿಟ್ಲ, ಪುತ್ತೂರು, ಸೂಡ, ಕುಟಚಾದ್ರಿಗಳಲ್ಲಿಯೂ ಜೋಗಿ ಮಠಗಳಿವೆ. ಈ ಪಂಥದ ಅನುಯಾಯಿಗಳು ತುಳುನಾಡಿನ ಎಲ್ಲೆಡೆ ಕಂಡುಬರುತ್ತಾರೆ (ಮಂಡ್ಯ ಜಿಲ್ಲೆಯ ಚುಂಚನಗಿರಿ, ಚಿತ್ರದುರ್ಗ ಜಿಲ್ಲೆಯ ಲುಂಕೇಮಠ, ಹಂಡಿಬಡಗನಾಥ ಮಠಗಳೂ ಜೋಗಿ ಸಂಪ್ರದಾಯಕ್ಕೇ ಸೇರಿವೆ).

**ಜೈನ:** ಜೈನರಲ್ಲಿ ಶ್ವೇತಾಂಬರ ಹಾಗೂ ದಿಗಂಬರರೆಂಬ ಎರಡು ಪ್ರಧಾನ ವಿಭಾಗಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿಗಂಬರ ಪಂಥದವರು ಹೆಚ್ಚಾಗಿದ್ದಾರೆ. ಜೈನ ಧರ್ಮದಲ್ಲಿನ ಮುನಿಧರ್ಮ ಮತ್ತು ಶ್ರಾವಕ ಧರ್ಮ ಎಂಬ ಎರಡೂ ವರ್ಗದವರು ಪಂಚಾಣುವ್ರತಗಳ ಪಾಲನೆ, ರತ್ನತ್ರಯಗಳ ಅನುಸರಣೆ ಮಾಡುವವರಾದರೂ ಸಂಸಾರಿಗಳಿಗಿಂತ (ಶ್ರಾವಕರು) ಮುನಿಗಳಿಗೆ ಹೆಚ್ಚಿನ ಕಠಿಣ ವ್ರತಾಚರಣೆಗಳ ನಿರ್ಬಂಧಗಳಿರುತ್ತವೆ. ಅಲ್ಲದೆ, ಶ್ರಾವಕರು ತೀರ್ಥಂಕರರಿಗೆ ಜಿನಾಲಯ ಕಟ್ಟಿಸಿ ಅಭಿಷೇಕ, ಪೂಜಾದಿಗಳನ್ನು ಮಾಡುವ ಸಾಕಾರ ಪೂಜಾ ಪದ್ಧತಿಯವರಾದರೆ, ಮುನಿಗಳು ಬಸದಿಯಲ್ಲಿನ ಜಿನ ಬಿಂಬಕ್ಕೆ ಮನಸ್ಸಿನಲ್ಲಿಯೇ ವಂದಿಸುವ ಭಾವ ಪೂಜಾನುಸರಣೆಯವರಾಗಿರುತ್ತಾರೆ. ತುಳುನಾಡಿನ ಜೈನರಲ್ಲಿ ಶೆಟ್ಟರು, ಜೈನರು ಹಾಗೂ ಇಂದ್ರರು ಎಂಬ ಮೂರು ಪಂಗಡಗಳಿದ್ದು ಇವರಲ್ಲಿ ಪರಸ್ಪರ ವಿವಾಹ ನಿಷಿದ್ಧವಾಗಿದೆ. ಸುಮಾರು ೭–೮ನೇ ಶತಮಾನದ ಹೊತ್ತಿಗೆ ತುಳುನಾಡಿಗೆ ಹೊರಗಿನಿಂದ ಬಂದಿರಬಹುದಾದ ಜೈನ ಶೆಟ್ಟರು ಬಳಿಕ ಇಲ್ಲಿಯ ಪದ್ಧತಿಗಳಾದ

ಅಳಿಯ ಸಂತಾನ, ಬಳಿ ಪದ್ಧತಿಗಳನ್ನು ಅನುಸರಿಸಿದ್ದಲ್ಲದೆ ಕೆಲವು ಹಿಂದೂ ದೈವಗಳನ್ನೂ, ದೇವರುಗಳನ್ನೂ ತಾವೂ ಪೂಜಿಸಿದ್ದು ಕಾಣಬರುತ್ತದೆ. ಮೂಲತಃ ವರ್ತಕರಾದ ಈ ಶ್ರೇಷ್ಠಿಗಳು ಮುಂದೆ ಆಳರಸರಾದದ್ದೂ ಉಂಟು. ವ್ಯವಸಾಯವನ್ನು ಮುಖ್ಯವೃತ್ತಿ ಮಾಡಿಕೊಂಡಿದ್ದ ಜೈನರು ತುಳುನಾಡಿನ ಜೈನಧರ್ಮದವರಲ್ಲಿ ಮತ್ತೊಂದು ಮುಖ್ಯ ಪಂಗಡದವರಾಗಿದ್ದು, ಬಹುಮಟ್ಟಿಗೆ ಇವರು ಬಂಟರನ್ನು ಹೋಲುತ್ತಾರೆ (ಅಥವಾ ಇವರು ಜೈನಧರ್ಮ ಸ್ವೀಕರಿಸಿದ ಬಂಟರಾಗಿರಬಹುದೆಂಬ ತರ್ಕವೂ ಇದೆ). ಜೈನ ಪುರೋಹಿತವರ್ಗದವರನ್ನು ಇಂದ್ರರೆಂದು ಕರೆಯಲಾಗುತ್ತದೆ. ಕೆಲವೆಡೆ ಇವರಿಗೆ ಜೈನಬ್ರಾಹ್ಮಣರೆಂಬ ಹೆಸರು ಇದೆ.

ತುಳುನಾಡಿಗೆ ಜೈನರು ಬಹುಶ: ಶ್ರವಣಬೆಳಗೊಳ ಭಾಗದಿಂದ ವಲಸೆ ಬಂದವರೆಂದು  ಊಹಿಸಲಾಗಿದ್ದಿತು. ಆದರೆ, ಅವರು ತಮಿಳುನಾಡಿನ ಪಾಂಡ್ಯದೇಶದಿಂದ ಕೇರಳಕ್ಕೆ ಬಂದು, ಕೇರಳದಿಂದ ಬಾರ್ಕೂರಿಗೆ ಬಂದು ಅಲ್ಲಿ ಕ್ರಿ.ಶ.೨ನೇ ಶತಮಾನದ ಹೊತ್ತಿಗೇ ತಮ್ಮ ಸ್ವದೇಶಿ–ವಿದೇಶಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದರೆಂದು ಗೋವಿಂದ ಪೈ, ಗಣಪತಿರಾವ್ ಐಗಳು ಮತ್ತು ಕೆ.ವಿ.ರಮೇಶ್ ಮೊದಲಾದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ಈಚೆಗೆ ಪಿ.ಎನ್. ನರಸಿಂಹಮೂರ್ತಿ ಅವರು ಪತ್ತೆ ಹಚ್ಚಿದ ಮುರಕಲ್ಲಿನ ಶಾಸನದಲ್ಲಿ ಯಾಪನೀಯ ಎಂಬ ಜೈನಸಂಘದ ಶಬ್ದ ಕಂಡುಬಂದಿದೆ. ಏಳನೇ ಶತಮಾನದ ಹೊತ್ತಿಗೆ ಆಳುಪರ ಆಶ್ರಯವು ಜೈನಧರ್ಮಕ್ಕೆ ದೊರೆತಿದ್ದಿತು.  ಹಟ್ಟಿಯಂಗಡಿ, ವರಂಗ, ಶಿಶಿಲ, ಅಲೆವೂರು, ನೆಲ್ಲಿಕಾರು ಮೊದಲಾದೆಡೆ ಜೈನ ಮುನಿಗಳಿದ್ದ ಬಗೆಗೆ ತಿಳಿದುಬರುತ್ತದೆ. ಮುಂದೆ, ಹೊಯ್ಸಳ ಮತ್ತು ವಿಜಯನಗರದ ಕಾಲದಲ್ಲಿಯೂ ತುಳುನಾಡಿನ ಜೈನರಿಗೆ ಹೆಚ್ಚಿನ ಪ್ರೋತ್ಸಾಹ ದೊರೆತವು. ಹೆಗಡೆ, ಬಲ್ಲಾಳ ಮೊದಲಾದ ಕೆಲ ಜೈನ ಮನೆತನಗಳು ಜಿಲ್ಲೆಯ ಹಲವೆಡೆಯ ಬೀಡು ಹಾಗೂ ಗುತ್ತುಗಳ ಮುಖ್ಯಸ್ಥರೂ ಆಗಿ ಆಳ್ವಿಕೆ ಮಾಡುವ ಮೂಲಕ ಜೈನಧರ್ಮದ ಬೆಳವಣಿಗೆಗೆ ವಿಶೇಷ ಕಾರಣರಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಜೈನ ಆಡಳಿತಗಾರರು ಜೈನ ಬಸದಿಗಳೊಂದಿಗೆ ಕೆಲವು ಹಿಂದೂ ದೇವಾಲಯಗಳ ನಿರ್ಮಾಣಕ್ಕೂ ಕಾರಣವಾಗಿ ಧರ್ಮಸಮನ್ವಯ ಮನೋಧರ್ಮ ಹೊಂದಿದುದು ಉಲ್ಲೇಖನೀಯವಾಗಿದೆ. ಹೆಚ್ಚಿನ ಜೈನ ಮನೆಗಳ ಚಾವಡಿಯಲ್ಲಿ ಭೂತಗಳ ಮಂಚವಿದ್ದು ಭೂತಾರಾಧನೆ ನಡೆಸುವ ಜೊತೆಗೆ ಊರಿನ ಭೂತಾರಾಧನೆಯ ಮುಂದಾಳ್ತನವನ್ನೂ ಅವರೇ ನೋಡಿಕೊಳ್ಳುತ್ತಾರೆ.

**ಕ್ರೈಸ್ತ :** ವೈರಿಗಳನ್ನೂ ಪ್ರೀತಿಸಿರಿ: ದೇವರ ದೃಷ್ಟಿಯಲ್ಲಿ ಪರಿಶುದ್ಧವಾದ ಜೀವನ ನಡೆಸಿರಿ; ಹೃದಯ ದೇಗುಲದಲ್ಲಿನ ತಂದೆಯನ್ನು ಏಕಾಂತದಲ್ಲಿ ಧ್ಯಾನಿಸಿ. ದೀನದಲಿತರನ್ನು ಪ್ರೀತಿಯಿಂದ ಆರೈಕೆ ಮಾಡಿರಿ–ಮೊದಲಾದವು ಕ್ರೈಸ್ತ ಧರ್ಮದ ಸ್ಥಾಪಕನಾದ ಏಸುವಿನ ಪ್ರಮುಖ ಬೋಧನೆಗಳಾಗಿವೆ.  ಗೋವಿಂದ ಪೈ ಅವರು ಸಂಶೋಧಿಸಿರುವಂತೆ, ಕ್ರಿ.ಶ.೨ನೇ ಶತಮಾನದ ಗ್ರೀಕ್ ಪ್ರಹಸನವೊಂದರಲ್ಲಿ ಕನ್ನಡ ಪದಗಳು (ಅವು ತುಳು ಪದಗಳು ಎಂಬುದು ಈಚಿನ ಅಭಿಪ್ರಾಯ) ಕಾಣಬಂದಿರುವ ಹಿನ್ನೆಲೆಯಲ್ಲಿ ಆ ಹೊತ್ತಿಗಾಗಲೇ ಇಲ್ಲಿಗೆ ವಿದೇಶಿಯರ ಸಂಪರ್ಕವಿದ್ದುದು ತಿಳಿದುಬರುತ್ತದೆ. ಪೋರ್ಚುಗಲ್‌ನಿಂದ ಬಂದ ಪ್ರವಾಸಿ ವಾಸ್ಕೋಡಗಾಮ ಮೊದಲಾದವರ ಬಳಿಕ ಕ್ರೈಸ್ತಧರ್ಮವು ಕರಾವಳಿಯಲ್ಲಿ ಬಲವಾಗಿ ಕಾಲಿಟ್ಟಿತು. ೧೫೦೦ರ ಬಳಿಕ ಗೋವಾದಿಂದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಮತ್ತಿತರ ಕಾರಣಗಳಿಗಾಗಿ ದಕ್ಷಿಣಕನ್ನಡಕ್ಕೆ ವಲಸೆ ಬಂದು ನೆಲೆನಿಂತ ಕ್ಯಾಥೋಲಿಕ್ ಕ್ರಿಶ್ಚಿಯನ್ನರನ್ನು ಕೊಂಕಣಿ ಕ್ರಿಶ್ಚಿಯನ್ನರೆಂದು ಕರೆಯಲಾಗುತ್ತದೆ. ೧೪೮೩ ರ ಸುಮಾರಿನಲ್ಲಿ ಮೀನುಗಾರರಿಗೆ ಮಂಗಳೂರು ಸಮೀಪ ಆಲಿವ್ ಮರದ ರತ್ನಖಚಿತ ಶಿಲುಬೆಯೊಂದು ದೊರೆತ ಬಗ್ಗೆ ತಿಳಿದು ಬರುತ್ತದೆ. ೧೫೨೧ರಲ್ಲಿ ಉಳ್ಳಾಲ, ಫರಂಗಿಪೇಟೆ ಹಾಗೂ ಮಂಗಳೂರುಗಳಲ್ಲಿ ಫ್ರಾನ್ಸಿಸ್ಕನ್ನರು ಚರ್ಚ್‌ಗಳನ್ನು ಸ್ಥಾಪಿಸಿದರು. ೧೯ನೇ ಶತಮಾನದ ಹೊತ್ತಿಗೆ ಕ್ರೈಸ್ತ ಮಿಶನರಿಗಳು ಈ ಭಾಗದ ಜನಸಾಮಾನ್ಯರೊಂದಿಗೂ ವಿಶೇಷವಾಗಿ ಬೆರೆಯತೊಡಗಿದ್ದರು. ಧರ್ಮಪ್ರಸಾರವನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಿದ್ದ ಇವರು ಸ್ಥಳೀಯ ಭಾಷೆಗಳಲ್ಲಿ ಬೈಬಲ್ ಮತ್ತು ಸುವಾರ್ತೆಗಳನ್ನು ಅನುವಾದಿಸಿ ಪ್ರಕಟಿಸುವುದು, ಇಲ್ಲಿನ ಪಾಡ್ದನ, ಗಾದೆ, ಒಗಟು ಮೊದಲಾದುವನ್ನು ಸಂಗ್ರಹಿಸುವುದು, ನಿಘಂಟು, ವ್ಯಾಕರಣ ಕೃತಿಗಳನ್ನು ರಚಿಸಿ ಪ್ರಕಟಿಸುವುದು, ಇಗರ್ಜಿಗಳಲ್ಲಿ ಅನಕ್ಷರಸ್ಥರಿಗೂ ಅರ್ಥವಾಗುವಂತೆ ಕನ್ನಡ ಹಾಗೂ ತುಳುವಿನಲ್ಲಿಯೇ ಪ್ರಾರ್ಥನೆಗಳನ್ನು ಮಾಡುವುದು ಮೊದಲಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.  ದೀನದಲಿತರ ಸೇವೆಗೂ ಮುಂದಾದ ಈ ಕ್ರೈಸ್ತ ಸಂಸ್ಥೆಗಳು ಅನೇಕ ಶಾಲಾಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಜಿಲ್ಲೆಯಲ್ಲಿ ಆಧುನಿಕ ಶಿಕ್ಷಣ ಪದ್ಧತಿಯ ಬೆಳವಣಿಗೆಗೂ ಕಾರಣವಾದವು. ಕ್ರೈಸ್ತ ಕೊಂಕಣಿ ಶಿಕ್ಷಣ ಸಂಸ್ಥೆಗಳು ಈಗಲೂ ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ. ತುಳುನಾಡಿನ ತೋನ್ಸೆ ಎಂಬುದು ಕ್ರಿಸ್ತನ ನೇರ ಅನುಯಾಯಿಯಾದ ಸೇಂಟ್‌ಥಾಮಸ್‌ನ ಭೇಟಿಯ ಫಲವಾಗಿ ಆತನ ಹೆಸರಿನಿಂದ ಹಾಗೂ ಪೆತ್ರಿ ಎಂಬುದು ಸೇಂಟ್‌ಪೀಟರ್‌ನ ಹೆಸರಿನಿಂದಾಗಿ ರೂಪುಗೊಂಡ ಸ್ಥಳನಾಮಗಳಾಗಿವೆ.

**ಇಸ್ಲಾಂ:** ಇಸ್ಲಾಂ ಧರ್ಮ ಸ್ಥಾಪಿಸಿದ ಮಹಮದ್ ಪೈಗಂಬರ್ ಪ್ರಕಾರ ದೇವರು ಒಬ್ಬನೇ. ಆತ ಅನಂತ, ರೂಪರಹಿತ. ಪ್ರತಿಯೊಬ್ಬರೂ ಸ್ವಶ್ರಮದಿಂದ, ಧರ್ಮ ಮಾರ್ಗದಿಂದ ಸಂಪಾದನೆ ಮಾಡಬೇಕು. ನಿಯಮಿತವಾಗಿ ಪ್ರಾರ್ಥನೆ, ಉಪವಾಸ ಮಾಡುವುದು, ಬಡವರಿಗೆ ದಾನ ಮಾಡುವುದು ಮೊದಲಾದ ಕಟ್ಟಳೆಗಳನ್ನು ಇಸ್ಲಾಂ ಧರ್ಮೀಯರು ಪಾಲಿಸಬೇಕಾಗುತ್ತದೆ. ಇಸ್ಲಾಂ ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಪ್ರಚಾರಗೊಂಡಿದ್ದಾಗಿದೆ. ಬಹುಹಿಂದಿನಿಂದಲೂ ಕರಾವಳಿಯೊಂದಿಗೆ ಸಂಪರ್ಕವಿಟ್ಟುಕೊಂಡಿದ್ದ ಮುಸ್ಲಿಮರು ಮಂಗಳೂರು, ಕಾಸರಗೋಡು, ಬಾರ್ಕೂರು ಮೊದಲಾದ ಸ್ಥಳಗಳಲ್ಲಿ ವಾಸಿಸತೊಡಗಿ, ಮಸೀದಿಗಳನ್ನೂ ನಿರ್ಮಿಸಿದರು. ೧೧ನೇ ಶತಮಾನದ ವೇಳೆಗಾಗಲೇ ಅರಬ್ ದೇಶದಿಂದ ಬಂದ ಮುಸ್ಲಿಂ ವರ್ತಕರು ಕರ್ನಾಟಕದ ಕರಾವಳಿಯಲ್ಲಿ ಅಂಜಮಾನ್ (ಅಂಜುಮಾನ್) ಎಂಬ ವರ್ತಕ ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ತಮ್ಮ ವಾಣಿಜ್ಯ ಚಟುವಟಿಕೆಗಳನ್ನು ಮುಂದುವರೆಸಿದರು. ಮುಂದೆ ೧೬ನೇ ಶತಮಾನದಲ್ಲಿ ಪೋರ್ಚುಗೀಸರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ ಈ ಪ್ರದೇಶಗಳ ಹಿಂದೂಗಳು ಹಾಗೂ ಮುಸ್ಲಿಮರು ಸೇರಿಕೊಂಡು ಅವರನ್ನು ವಿರೋಧಿಸಿದ್ದುಂಟು. ೧೪೧೮ರ ಕೊಡಿಯಾಲ ಶಾಸನದಿಂದ ವಿಜಯನಗರದ ಅರಸನು ಮುಸ್ಲಿಮರ ಮಸೀದಿಗೆ ರಕ್ಷಣೆ ನೀಡಿ ಆದೇಶ ಮಾಡಿದ್ದಲ್ಲದೇ ಎಣ್ಣೆ ಮತ್ತು ಭೂಮಿ ಕಾಣಿಕೆ ನೀಡಿದ್ದರ ಪ್ರಸ್ತಾಪವಿದೆ. ಹೀಗೆಯೇ, ಕೆಳದಿಯ ರಾಣಿ ಚೆನ್ನಮ್ಮ ಮತ್ತಿತರರೂ ಸಂತರ ದರ್ಗಾ ಅಥವಾ ಮಸೀದಿಗಳಿಗೆ ವಿವಿಧ ರೀತಿಯ ನೆರವು ನೀಡಿದ್ದೂ ತಿಳಿದುಬರುತ್ತದೆ. ೧೩೪೨ರಲ್ಲಿ ಮಂಗಳೂರು ಭಾಗಕ್ಕೆ ಭೇಟಿ ನೀಡಿದ ಪ್ರವಾಸಿ ಮಹಮದ್ ಇಬ್ನಬತೂತನು ಇಲ್ಲಿಯ ಅರಸರಲ್ಲಿ ಮುಸ್ಲಿಮರೂ ಸೇವೆಗೈಯ್ಯುತ್ತಿದ್ದರೆಂದೂ ಆ ಹೊತ್ತಿಗಾಗಲೇ ಈ ಭಾಗದಲ್ಲಿ ಸುಮಾರು ೪೦೦೦ ಮುಸ್ಲಿಂ ವರ್ತಕರು ಇದ್ದರೆಂದೂ ದಾಖಲಿಸಿದ್ದಾನೆ. ಮುಂದೆ ಟಿಪ್ಪು ಸುಲ್ತಾನನೂ ಮಂಗಳೂರಿನ ಗಣಪತಿ ದೇವಲಕ್ಕೆ ಗ್ರಾಮವೊಂದನ್ನು ದತ್ತಿಯಾಗಿ ನೀಡಿದ್ದನು. ಧರ್ಮಸ್ಥಳದ (ಕುಡುಮ) ಅಂದಿನ ಆಡಳಿತಾಧಿಕಾರಿ ಮಂಜಯ್ಯ ಹೆಗಡೆಯವರನ್ನು ದುಷ್ಕರ್ಮಿಗಳು ಕೊಲೆ ಮಾಡಿದಾಗ ಟೀಪುವು ಮಂಜಯ್ಯ ಹೆಗ್ಗಡೆಯ ಪುತ್ರ ಕುಮಾರ ಹೆಗ್ಗಡೆಯವರಿಗೇ ಮತ್ತೆ ಪಟ್ಟವಾಗುವಂತೆ ಮಾಡಿದ್ದು ಮೊದಲಾದುವೆಲ್ಲಾ ಈ ಜಿಲ್ಲೆಯಲ್ಲಿ ಹಿಂದೂ–ಮುಸ್ಲಿಮರ ಧಾರ್ಮಿಕ ಸೌಹಾರ್ದತೆಯ ನಿದರ್ಶನಗಳಾಗುತ್ತವೆ. ಉಳ್ಳಾಲದ ದರ್ಗಾವು ಜಿಲ್ಲೆಯ ಪ್ರಸಿದ್ಧ ಮುಸ್ಲಿಂ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿದೆ. ಇಲ್ಲಿಯ ಉರುಸ್‌ನಲ್ಲಿ ಅನ್ಯ ಧರ್ಮೀಯರೂ ಭಾಗವಹಿಸಿ ಹರಕೆ ಒಪ್ಪಿಸುತ್ತಾರೆ ಹಾಗೂ ಕಾಸರಗೋಡು ಭಾಗದಲ್ಲಿ ಮುಸ್ಲಿಂ ಮೂಲದ ಆಲಿಭೂತವನ್ನೂ ಹಿಂದೂಗಳು ದೈವವಾಗಿ ಆರಾಧಿಸುತ್ತಾರೆ. ಹೊರಗಿನಿಂದ ಬಂದ ಮುಸ್ಲಿಮ್ ವರ್ತಕರಿಂದಾಗಿ ತುಳು ನಾಡಿನಲ್ಲಿ ಬ್ಯಾರಿ ಸಮುದಾಯ ಹುಟ್ಟಿತು. ಬ್ಯಾರಿಗಳಿಗೆ ಅರಬ್ಬೀ ಭಾಷೆ ಬರುತ್ತಿರಲಿಲ್ಲವಾಗಿ ಸ್ಥಳೀಯವಾದ ಒಂದು ಸಮ್ಮಿಶ್ರ ಭಾಷೆಯನ್ನು ಅವರು ರೂಢಿಸಿಕೊಂಡರು. ಅದು ತುಳು, ಮಲಯಾಳ ಮಿಶ್ರಿತವಾಗಿದ್ದು, ಅದನ್ನು ಬ್ಯಾರಿ ಭಾಷೆ ಎಂದು ಕರೆಯಲಾಗುತ್ತಿದೆ. ತುಳುನಾಡಿನ ಮುಸ್ಲಿಮರಲ್ಲಿ ನವಾಯತ, ಗಿಯಾ, ಸುನ್ನಿ ಎಂಬ ಒಳವಿಭಾಗಗಳೂ ಇವೆ.

## ಧರ್ಮವಾರು ಜನಸಂಖ್ಯಾ ವಿವರ

೨೦೦೧ರ ಜನಗಣತಿಯಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಹಿಂದೂಗಳ ಒಟ್ಟು ಸಂಖ್ಯೆ ೧೩,೦೧,೬೦೩. ಇವರಲ್ಲಿ ಗ್ರಾಮೀಣ ಪ್ರದೇಶಕ್ಕೆ (೮,೨೫,೫೭೪) ಹೋಲಿಸಿದರೆ ನಗರ ಪ್ರದೇಶದಲ್ಲಿನ ಹಿಂದೂಗಳ ಸಂಖ್ಯೆ (೪,೭೬,೦೨೯) ತೀರಾ ಕಡಿಮೆಯೇ ಆಗಿದೆ. ಹಿಂದೂಗಳಲ್ಲಿ ಪುರುಷರಿಗಿಂತ (೬,೪೪,೬೭೩) ಸ್ತ್ರೀಯರ ಸಂಖ್ಯೆ (೬,೫೬,೯೩೦) ಹೆಚ್ಚಾಗಿದೆ. ಈ ಅಂತರ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಎರಡೂ ಪ್ರದೇಶಗಳಲ್ಲೂ ಇದೆ. ಸಂಖ್ಯಾ ದೃಷ್ಟಿಯಿಂದ ಜಿಲ್ಲೆಯಲ್ಲಿ ಮುಸ್ಲಿಮರು ಎರಡನೆಯ ಸ್ಥಾನದಲ್ಲಿದ್ದಾರೆ. ಇವರ ಒಟ್ಟು ಸಂಖ್ಯೆ ೪,೧೮,೯೦೪ರಲ್ಲಿ ಪುರುಷರು ೨,೦೮,೮೦೭ ಮತ್ತು ಸ್ತ್ರೀಯರು ೨,೧೦,೦೯೭ ರಷ್ಟು ಇದ್ದಾರೆ. ಮೂರನೇ ಸ್ಥಾನದಲ್ಲಿ ಕ್ರಿಶ್ಚಿಯನ್ನರು (೧,೬೪,೯೮೭), ನಾಲ್ಕನೇ ಸ್ಥಾನದಲ್ಲಿ ಜೈನರು (೧೦,೫೨೫) ಇದ್ದಾರೆ. ಸಿಖ್ಖರು, ಬೌದ್ಧರು ಮತ್ತಿತರರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದಾರೆ. ವಿಶೇಷವೆಂದರೆ, ಜಿಲ್ಲೆಯ ಹಿಂದೂ ಮತ್ತು ಮುಸ್ಲಿಮರಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಸ್ವಲ್ಪ ಮಾತ್ರ ಹೆಚ್ಚಾಗಿದೆ. ಆದರೆ, ಕ್ರಿಶ್ಚಿಯನ್ನರಲ್ಲಿ ಈ ಅಂತರ ಬಹಳ ಹೆಚ್ಚಾಗಿದೆ. ಇದಕ್ಕೆ ಪ್ರತಿಯಾಗಿ ಸಿಖ್ಖರು, ಬೌದ್ಧರು ಹಾಗೂ ಜೈನ ಧರ್ಮೀಯರಲ್ಲಿ ಪುರುಷರಿಗಿಂತ ಸ್ತ್ರೀಯರ ಸಂಖ್ಯೆ ಕಡಿಮೆಯೇ ಇದೆ. ಹಾಗೆಯೇ, ೦–೬ ವರ್ಷಗಳ ವಯೋಗುಂಪಿನ ಮಕ್ಕಳಲ್ಲಿನ ಸಂಖ್ಯಾ ವಿವರವನ್ನು ಪರಿಶೀಲಿಸಿದರೆ ಜಿಲ್ಲೆಯಲ್ಲಿನ ಈ ಎಲ್ಲಾ ಧರ್ಮೀಯರಲ್ಲಿ ಹೆಣ್ಣುಮಕ್ಕಳ ಜನನದ ಪ್ರಮಾಣ ತೀರಾ ಕಡಿಮೆ ಆಗಿರುವುದೂ ತಿಳಿದುಬರುತ್ತದೆ. ಸಾಕ್ಷರತೆಯ ಸಂಖ್ಯೆಗಳನ್ನು ಹೋಲಿಸಿದಾಗ ಹಿಂದೂ. ಮುಸ್ಲಿಂ, ಜೈನ ಹಾಗೂ ಬೌದ್ಧರಲ್ಲಿ ಸಾಕ್ಷರತೆ ಪಡೆದ ಮಹಿಳೆಯರ ಸಂಖ್ಯೆ ಕಡಿಮೆಯೇ ಇದೆ. ಬೌದ್ಧರಲ್ಲಿಯಂತೂ ಅಕ್ಷರ ಕಲಿಯ ಮಹಿಳೆಯರ ಸಂಖ್ಯೆ ಪುರುಷರ ಅರ್ಧದಷ್ಟಿದೆ. ಆದರೆ, ಜಿಲ್ಲೆಯ ಕ್ರಿಶ್ಚಿಯನ್ನರು ಇತರರಿಗಿಂತ ಭಿನ್ನ ಪ್ರಗತಿ ತೋರಿದ್ದು ಅವರಲ್ಲಿ ಅಕ್ಷರ ಕಲಿತ ಮಹಿಳೆಯರು ಪುರುಷರಿಗಿಂತ ಮೇಲುಗೈ ಸಾಧಿಸಿದ್ದಾರೆ. ಹೆಚ್ಚಿನ ವಿವರಕ್ಕೆ ಕೋಷ್ಟಕ ೩.೧೧ ರಲ್ಲಿನ ಅಂಕಿಅಂಶಗಳನ್ನು ಅವಲೋಕಿಸಬಹುದಾಗಿದೆ:

**ಕೋಷ್ಟಕ : ೩.೧೧ ಧರ್ಮವಾರು ಜನಸಂಖ್ಯಾ ವಿವರ**

| ಧರ್ಮಗಳು | ಘಟಕ | ಒಟ್ಟು ಜನಸಂಖ್ಯೆ | | | ೦–೬ ವಯೋಗುಂಪು | | |
|---|---|---|---|---|---|---|---|
| | | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು |
| ಎಲ್ಲಾ ಧರ್ಮ | ಒಟ್ಟು | ೧೮೯೭೭೩೦ | ೯೩೮೪೩೪ | ೯೫೯೨೯೬ | ೨೨೮೦೬೦ | ೧೧೬೮೫೪ | ೧೧೧೨೦೬ |
| | ಗ್ರಾಮೀಣ | ೧೧೬೮೪೨೮ | ೫೭೪೬೫೭ | ೫೯೩೭೭೧ | ೧೪೫೭೫೦ | ೭೪೮೫೨ | ೭೦೮೯೮ |
| | ನಗರ | ೭೨೯೩೦೨ | ೩೬೩೭೭೭ | ೩೬೫೫೨೫ | ೮೨೩೧೦ | ೪೨೦೦೨ | ೪೦೩೦೮ |
| ಹಿಂದೂ | ಒಟ್ಟು | ೧೩೦೧೬೦೩ | ೬೪೪೬೭೩ | ೬೫೬೯೩೦ | ೧೩೭೮೮೪ | ೭೦೫೧೯ | ೬೭೩೬೫ |
| | ಗ್ರಾಮೀಣ | ೮೨೫೫೭೪ | ೪೦೫೦೮೧ | ೪೨೦೪೯೩ | ೯೦೯೪೫ | ೪೬೬೬೫ | ೪೪೨೮೦ |
| | ನಗರ | ೪೭೬೦೨೯ | ೨೩೯೫೯೨ | ೨೩೬೪೩೭ | ೪೬೯೩೯ | ೨೩೮೫೪ | ೨೩೦೮೫ |
| ಮುಸ್ಲಿಂ | ಒಟ್ಟು | ೪೧೮೯೦೪ | ೨೦೮೮೦೭ | ೨೧೦೦೯೭ | ೭೨೪೨೩ | ೩೭೩೦೯ | ೩೫೧೧೪ |
| | ಗ್ರಾಮೀಣ | ೨೫೬೧೨೦ | ೧೨೬೪೭೩ | ೧೨೯೬೪೭ | ೪೫೩೫೬ | ೨೩೩೨೫ | ೨೨೦೩೧ |
| | ನಗರ | ೧೬೨೭೮೪ | ೮೨೩೩೪ | ೮೦೪೫೦ | ೨೭೦೬೭ | ೧೩೯೮೪ | ೧೩೦೮೩ |
| ಕ್ರಿಶ್ಚಿಯನ್ | ಒಟ್ಟು | ೧೬೪೯೮೨ | ೭೮೬೪೦ | ೮೬೩೪೨ | ೧೬೫೬೮ | ೮೪೧೪ | ೮೧೫೪ |
| | ಗ್ರಾಮೀಣ | ೭೭೬೯೦ | ೩೮೫೩೮ | ೩೯೧೫೨ | ೮೫೩೬ | ೪೩೮೭ | ೪೧೪೯ |
| | ನಗರ | ೮೭೨೯೨ | ೪೦೧೦೨ | ೪೭೧೯೦ | ೮೦೪೨ | ೪೦೨೭ | ೪೦೧೫ |
| ಸಿಖ್ | ಒಟ್ಟು | ೩೫೨ | ೨೩೬ | ೧೧೬ | ೧೨ | ೭ | ೫ |
| | ಗ್ರಾಮೀಣ | ೫೯ | ೩೭ | ೨೨ | ೦ | ೦ | ೦ |
| | ನಗರ | ೨೯೩ | ೧೯೯ | ೯೪ | ೧೨ | ೭ | ೫ |
| ಬೌದ್ಧ | ಒಟ್ಟು | ೫೧೩ | ೩೦೩ | ೨೧೦ | ೪೪ | ೨೫ | ೧೯ |
| | ಗ್ರಾಮೀಣ | ೩೫೪ | ೧೮೧ | ೧೭೩ | ೩೫ | ೧೮ | ೧೭ |
| | ನಗರ | ೧೫೯ | ೧೨೨ | ೩೭ | ೯ | ೭ | ೨ |
| ಜೈನ | ಒಟ್ಟು | ೧೦೫೨೫ | ೫೩೨೪ | ೫೨೦೧ | ೧೦೪೮ | ೫೩೨ | ೫೧೬ |
| | ಗ್ರಾಮೀಣ | ೮೦೮೩ | ೪೦೫೮ | ೪೦೨೫ | ೮೩೨ | ೪೨೪ | ೪೦೮ |
| | ನಗರ | ೨೪೪೨ | ೧೨೬೬ | ೧೧೭೬ | ೨೧೬ | ೧೦೮ | ೧೦೮ |
| ಇತರೆ | ಒಟ್ಟು | ೨೨೭ | ೧೨೫ | ೧೦೨ | ೨೪ | ೧೪ | ೧೦ |
| | ಗ್ರಾಮೀಣ | ೮೨ | ೪೫ | ೩೭ | ೧೦ | ೬ | ೪ |
| | ನಗರ | ೧೪೫ | ೮೦ | ೬೫ | ೧೪ | ೮ | ೬ |
| ಧರ್ಮ | ಒಟ್ಟು | ೬೨೪ | ೩೨೬ | ೨೯೮ | ೫೭ | ೩೪ | ೨೩ |
| ಸೂಚಿಸದವರು | ಗ್ರಾಮೀಣ | ೪೬೬ | ೨೪೪ | ೨೨೨ | ೪೬ | ೨೭ | ೧೯ |
| | ನಗರ | ೧೫೮ | ೮೨ | ೭೬ | ೧೧ | ೭ | ೪ |

**ಆಧಾರ** : **Census of India, 2001 C.D.version**

## ಸಮಾಜೋ–ಸಾಂಸ್ಕೃತಿಕ ಸೇವಾಸಂಸ್ಥೆಗಳು

ಮೂಲತಃ ಧಾರ್ಮಿಕ ಹಿನ್ನೆಲೆಯಲ್ಲಿಯೇ ಹುಟ್ಟಿದರೂ, ತಮ್ಮ ಮತ ಸಂಪ್ರದಾಯದ ಚಟುವಟಿಕೆಗಳಷ್ಟಕ್ಕೇ ಸೀಮಿತವಾಗದೆ ಸಾಮಾಜಿಕ ಹಿತಚಿಂತನೆಯ ಸೇವಾ ಕಾರ್ಯಗಳಲ್ಲಿಯೂ ತಮ್ಮನ್ನು ಕೆಲವು ಸಂಸ್ಥೆಗಳು ತೊಡಗಿಸಿಕೊಂಡಿರುವುದೂ ಉಂಟು. ಹೀಗೆ ಜಾತಿ, ಮತ

ಭೇದವಿರದೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ನಡೆಸುತ್ತಿರುವ ಜಿಲ್ಲೆಯಲ್ಲಿನ ಕೆಲವು ಪ್ರಮುಖ ಸಂಘ ಸಂಸ್ಥೆಗಳ ಕಿರು ಪರಿಚಯ ಇಲ್ಲಿ ನೀಡಲಾಗಿದೆ:

**ಭಾರತ ಸೇವಾಶ್ರಮ:** ಕನ್ಯಾನದಲ್ಲಿ ೧೯೬೪ರಿಂದ ಕಾಯನಿರ್ವಹಿಸುತ್ತಿರುವ ಈ ಸೇವಾ ಸಂಸ್ಥೆಯು ಜಾತಿ, ಮತ ಭೇದವಿರದೆ ಯಾವುದೇ ಬಡ ಕುಟುಂಬಕ್ಕೆ ಸೇರಿದ ಅಥವಾ ಅನಾಥವಾದ ಮಗುವಿಗೆ ಆಶ್ರಯ ನೀಡಿ, ಆ ಮಗುವನ್ನು ಉತ್ತಮ ನಾಗರಿಕನನ್ನಾಗಿ ರೂಪಿಸುವ ಮಹತ್ವದ ಉದ್ದೇಶವನ್ನು ಹೊಂದಿದೆ.  ಅಂತೆಯೇ, ತನ್ನಲ್ಲಿ ಸೇರಿದ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಉಚಿತವಾಗಿ ಆಹಾರ, ಉಡುಪು ಹಾಗೂ ಶಿಕ್ಷಣ ನೀಡಿ ಬೆಳೆಸುತ್ತದೆ.  ವಿವಾಹದ ಬಳಿಕ ಹೆಣ್ಣುಮಕ್ಕಳಿಗೆ ಪುನರ್ವಸತಿ ವ್ಯವಸ್ಥೆಯನ್ನು ಮಾಡುತ್ತದೆ.  ಈ ಉದ್ದೇಶಗಳಿಗೆ ಪೂರಕವಾಗಿ ಆಶ್ರಮವಾಸಿ ಮಕ್ಕಳಿಗೆ ಕೃಷಿ, ಹೈನುಗಾರಿಕೆ, ಗೃಹ ಕೈಗಾರಿಕೆಗಳಲ್ಲದೆ ಕಂಪ್ಯೂಟರ್, ಮುದ್ರಣಾಲಯ, ಹೊಲಿಗೆ ಕಾರ್ಯ ಮೊದಲಾದವುಗಳ ತರಬೇತಿಗಳನ್ನೂ ಉಚಿತವಾಗಿ ನೀಡುತ್ತದೆ. ಅಲ್ಲದೆ, ಅಂಗವಿಕಲರು, ಮನೋಮಾಂದ್ಯರು ಹಾಗೂ ನಿರ್ಗತಿಕ ಮಹಿಳೆಯರಿಗೂ ಆಶ್ರಮವು ಉಚಿತವಾಗಿ ಹಲವು ಸೌಲಭ್ಯಗಳನ್ನು ಒದಗಿಸಿದೆ. ಈ ಆಶ್ರಮದ ವತಿಯಿಂದ ವೃದ್ಧಾಶ್ರಮ, ಗೋಶಾಲೆ ಹಾಗೂ ಶಾಲಾ ಕಾಲೇಜುಗಳು ನಡೆಯುತ್ತಿರುವುದಲ್ಲದೆ ಸುತ್ತಲ ಹಳ್ಳಿಗಳ ಬಡವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸುವುದು, ಆಸ್ಪತ್ರೆಗಳ ಸಹಯೋಗದಿಂದ ಉಚಿತ ವೈದ್ಯಕೀಯ ತಪಾಸಣಾ ಶಿಬಿರಗಳನ್ನು ನಡೆಸುವುದು ಮೊದಲಾದ ಸೇವಾಕಾರ್ಯಗಳನ್ನೂ ಮಾಡುತ್ತಿದೆ.

**ಆನಂದಾಶ್ರಮ ಸೇವಾ ಟ್ರಸ್ಟ್:** ಸಂಪ್ಯ, ಪುತ್ತೂರು ಇಲ್ಲಿ ೧೯೯೮ರಿಂದ ಕಾರ್ಯಾರಂಭ ಮಾಡಿರುವ ಈ ಸಂಸ್ಥೆಯು ದುರ್ಬಲ ವರ್ಗದ ವೃದ್ಧರಿಗೆ ಆಶ್ರಯ ನೀಡುವುದು, ಗ್ರಾಮೀಣರ ಆರೋಗ್ಯ ಹಾಗೂ ಕಲ್ಯಾಣಾಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನಡೆಸುವುದು, ಅರ್ಹರಿಗೆ ಸ್ವ ಉದ್ಯೋಗ ಒದಗಿಸುವುದು ಮೊದಲಾದ ಉದ್ದೇಶಗಳನ್ನು ಹೊಂದಿದೆ. ಅಂತೆಯೇ, ವೃದ್ಧಾಶ್ರಮ, ಅಂಗನವಾಡಿ, ಹೊಲಿಗೆ ತರಬೇತಿ ಕೇಂದ್ರ (ಉಚಿತ), ದಾದಿಯರ ತರಬೇತಿ ಕೇಂದ್ರ (ಉಚಿತ), ಹೈನುಗಾರಿಕೆ, ಮಳೆ ನೀರ ಕೊಯ್ಲು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಅರ್ಬುಧ, ಏಡ್ಸ್ ಮತ್ತಿತರ ಮಾರಕ ರೋಗಗಳಿಗೆ ತುತ್ತಾದವರಿಗೆ "ವೇದನಾರಹಿತ ನೆಮ್ಮದಿಯ ಜೀವನ ಮತ್ತು ಗೌರವಾನ್ವಿತ ಅವಸಾನವನ್ನು ಒದಗಿಸುವ" ವಿಶೇಷ ಆಶಯದೊಂದಿಗೆ 'ಪ್ರಶಾಂತಿ' ಎಂಬ ಶಾಮಕ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸುವ ಯೋಜನೆಯನ್ನೂ ಈ ಸಂಸ್ಥೆ ಹೊಂದಿರುತ್ತದೆ.

**ಬಾಲ ಸಂರಕ್ಷಣಾ ಕೇಂದ್ರ :** ಅಂತರರಾಷ್ಟ್ರೀಯ ಮಕ್ಕಳ ವರ್ಷದ ಆಚರಣೆಯನ್ನು ಶಾಶ್ವತೀಕರಣಗೊಳಿಸುವ ಆಶಯದಿಂದ ೧೯೮೦ರಲ್ಲಿ ಈ ಸಂಸ್ಥೆಯು ಕುತ್ತಾರ ಪದವುನಲ್ಲಿ ಕಾರ್ಯಾರಂಭ ಮಾಡಿತು. ಯಾವುದೇ ಜಾತಿ ಮತ ಭೇದವಿರದೆ ಅನಾಥ ಮಕ್ಕಳಿಗೆ ಶಿಕ್ಷಣ, ವಸತಿ, ಆಹಾರ, ಬಟ್ಟೆ ವೈದ್ಯಕೀಯ ಸೌಲಭ್ಯವನ್ನು ಉಚಿತವಾಗಿ ಇಲ್ಲಿ ಒದಗಿಸಲಾಗುತ್ತಿದೆ. ಇಲ್ಲಿನ ಮಕ್ಕಳ ಹಾಲಿನ ಸೌಲಭ್ಯಕ್ಕಾಗಿ ಗೋಶಾಲೆ ಅಲ್ಲದೆ ಮಕ್ಕಳಿಗಾಗಿ ಆಟದ ಮೈದಾನ, ಹೂದೋಟ ಇತ್ಯಾದಿಗಳಿವೆ. ೨೦೦೨ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಈ ಸಂಸ್ಥೆಯು ರಾಜ್ಯ ಪ್ರಶಸ್ತಿ ಪಡೆದಿರುತ್ತದೆ.

**ಸಂದೇಶ ಪ್ರತಿಷ್ಠಾನ :** ಸರ್ವಜನರಲ್ಲಿ ಸಾಮರಸ್ಯ ಹಾಗೂ ಸದ್ಭಾವನೆಯನ್ನು ಬೆಳೆಸುವ ಸದಾಶಯದೊಂದಿಗೆ ಮಂಗಳೂರಿನಲ್ಲಿ ೧೯೮೯ರಲ್ಲಿ ಪ್ರಾರಂಭವಾದ ಸಂದೇಶ ಪ್ರತಿಷ್ಠಾನವು ೧೯೯೧ರಲ್ಲಿ ಚಾರಿಟಬಲ್ ಟ್ರಸ್ಟ್ ಆಗಿ ನೋಂದಣಿಯಾಯಿತು. ವಿವಿಧ ಧರ್ಮ ಹಾಗೂ ಸಂಸ್ಕೃತಿಗಳ ನಡುವೆ ಸೌಹಾರ್ದಯುತ ಸಂವಾದ ಏರ್ಪಡಿಸುವುದೂ ಈ ಸಂಸ್ಥೆಯ ಒಂದು ಮುಖ್ಯ ಕಾರ್ಯೋದ್ದೇಶವಾಗಿದ್ದು, ಅದಕ್ಕಾಗಿ ಸಮಾನ ಮನಸ್ಕ ವ್ಯಕ್ತಿಗಳು ಹಾಗೂ ಸಂಘ–ಸಂಸ್ಥೆಗಳ ನೆರವನ್ನೂ ಪಡೆಯುತ್ತದೆ. ಕನ್ನಡ, ಕೊಂಕಣಿ ಹಾಗೂ ತುಳು ಬರಹಗಾರರು ಸೇರಿ ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು ಕುರಿತು ಚರ್ಚಿಸುವ ವೇದಿಕೆ ತ್ರಿವೇಣಿ ಸಂಗಮ, ಕಲೋತ್ಸವ, ಕರ್ನಾಟಕ ಕಲಾಕೇಂದ್ರ, ಸಂದೇಶ ಲಲಿತಕಲಾ ಮಹಾವಿದ್ಯಾಲಯ ಮೊದಲಾದುವನ್ನೂ ಈ ಸಂಸ್ಥೆ ನಡೆಸುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ಸಂದೇಶ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಕಾರ್ಯವನ್ನೂ ಈ ಸಂಸ್ಥೆ ಮಾಡುತ್ತಿದೆ.

ಇವಲ್ಲದೆ, ಧರ್ಮಸ್ಥಳದ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್, ರಾಜ್ಯ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಸಹಯೋಗದಲ್ಲಿ ಪುರಾತನ ದೇವಾಲಯಗಳು ಮತ್ತಿತರ ಸ್ಮಾರಕಗಳ ಜೀರ್ಣೋದ್ಧಾರ ಕಾರ್ಯ ಮಾಡುತ್ತಿದೆ. ಕ್ಯಾಥೋಲಿಕ್ ಬೋರ್ಡ್ ನಡೆಸುತ್ತಿರುವ ಕಂಕನಾಡಿಯ ಫಾದರ್ ಮುಲ್ಲರ್ ಹಾಸ್ಪಿಟಲ್ ೧೦೦ ವರ್ಷಗಳಷ್ಟು ಹಳೆಯದಾಗಿದ್ದು, ಕುಷ್ಠರೋಗಿಗಳ ಸೇವಾಕಾರ್ಯ

ಕೈಗೆತ್ತಿಕೊಂಡ ಪ್ರಥಮ ಸಂಸ್ಥೆ ಎಂಬ ಅಗ್ಗಳಿಕೆಯನ್ನು ಹೊಂದಿದೆ. ಮೂಡಬಿದರೆ ಹತ್ತಿರದ ಬುದ್ಧಿಮಾಂದ್ಯ ಮಕ್ಕಳ ಆಶ್ರಮಶಾಲೆ ಮತ್ತು ಪುತ್ತೂರಿನ ಫಾದರ್ ಪತ್ರಾವೋ ಹಾಸ್ಪಿಟಲ್ ಹಾಗೂ ಪುತ್ತೂರಿನಲ್ಲಿ ಅನಾಥಮಕ್ಕಳ ಏಳಿಗೆಗಾಗಿ ಶ್ರಮಿಸುತ್ತಿರುವ ರಾಮಕೃಷ್ಣ ಸೇವಾಶ್ರಮಗಳನ್ನೂ ಇಲ್ಲಿ ಸ್ಮರಿಸಬಹುದಾಗಿದೆ.

## ಜಾತಿಗಳು

ದಕ್ಷಿಣಕನ್ನಡ ಜಿಲ್ಲೆಯೂ ರಾಜ್ಯದ ಇತರ ಭಾಗಗಳಂತೆ ಹಲವು ವೈವಿಧ್ಯಮಯವಾದ ಜಾತಿಗಳಿಂದ ಕೂಡಿದ ಪ್ರದೇಶವಾಗಿದೆ. ರಾಜ್ಯದ ಇತರೆಡೆ ಇರುವ ಕೆಲವು ಜಾತಿ ಕಸುಬಿನವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇದ್ದರೂ ಅವರಿಗೆ ಸ್ಥಳೀಯವಾಗಿ ಬೇರೆಯದೇ ಹೆಸರು ಇರುವುದು ಹಾಗೂ ಅವರ ಆಚಾರ–ಸಂಪ್ರದಾಯ, ಕುಲ–ಗೋತ್ರಾದಿಗಳು ಸ್ಥಳೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟು ರೂಪಿತವಾಗಿದ್ದರ ಪರಿಣಾಮವಾಗಿ ಇತರೆಡೆಗಿಂತ ಅವು ಭಿನ್ನವೆಂಬಂತೆ ಕಂಡುಬರುವುದೂ ಉಲ್ಲೇಖನೀಯವಾಗಿದೆ ಘಟ್ಟದ ಮೇಲಿನಿಂದ ವಲಸೆ ಬಂದವರೂ ತುಳುನಾಡಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಾರೆ. ಹಾಗೆಯೇ, ಬಂಟ, ಪರವ, ಪಂಬದ, ನಲ್ಕೆ, ಮ್ಯಾಲ , ಮೊಗವೀರ ಮೊದಲಾದವರು ಇತರೆಡೆ ಮೂಲತ: ಇರದ, ತುಳುನಾಡಿಗೇ ವಿಶಿಷ್ಟವಾದ ಜಾತಿಸಮುದಾಯದವರಾಗಿದ್ದಾರೆ – ಎಂಬುದು ವಿಶೇಷ ಗಮನಾರ್ಹ ಸಂಗತಿಯಾಗಿದೆ. ಕರಾವಳಿ ಪ್ರದೇಶಕ್ಕೆ ಬಹು ಹಿಂದೆಯೇ ಗೋವಾ, ಮಹಾರಾಷ್ಟ್ರ ಮೊದಲಾದೆಡೆಯಿಂದ ವಲಸೆ ಬಂದು ನೆಲೆನಿಂತ ಗೌಡಸಾರಸ್ವತ, ಚಿತ್ಪಾವನ ಮೊದಲಾದ ಸಮುದಾಯಗಳು ಇಲ್ಲಿನ ಸಾಂಸ್ಕೃತಿಕ ವೈವಿಧ್ಯಕ್ಕೂ ಕಾರಣವಾಗಿವೆ. ಈ ವಲಸೆ ಪ್ರಕ್ರಿಯೆ ಈಚಿನ ವರ್ಷಗಳಲ್ಲಿಯೂ ನಡೆದಿದ್ದು ಶ್ರೀಲಂಕಾದಿಂದ ಬಂದ ತಮಿಳರು ಸುಳ್ಯ ಪರಿಸರದಲ್ಲಿಯೂ, ಉತ್ತರ ಕರ್ನಾಟಕದಿಂದ ಬಂದವರು ಸುರತ್ಕಲ್ ಭಾಗದಲ್ಲಿಯೂ ವಿಶೇಷವಾಗಿ ನೆಲೆನಿಂತಿದ್ದಾರೆ.

**ಅಗಸ:** ತುಳುವಿನಲ್ಲಿ ಅಗಸರಿಗೆ ಮಡ್ಯೊಳೆ–ಮಡ್ಡೆಳೆ ಎಂಬ ಹೆಸರು ಇದೆ. ಬಟ್ಟೆ ಮಡಿ ಮಾಡಿಕೊಡುವುದು ಇವರ ಕುಲಕಸುಬು. ಬಂಟರೇ ಮೊದಲಾದ ವಿವಿಧ ಜಾತಿಗಳಲ್ಲಿನ ಶುದ್ಧಿ ಆಚರಣೆಗಳಲ್ಲಿ ಇವರು ವಿಶೇಷವಾಗಿ ಭಾಗವಹಿಸುವ ಸಂಪ್ರದಾಯವಿದೆ. ದೇವಸ್ಥಾನಕ್ಕೆ ಮಡಿವಸ್ತ್ರ ನೀಡುವುದು, ಉತ್ಸವಾದಿಗಳಲ್ಲಿ ಮಡಿ ವಸ್ತ್ರ ಹಾಸುವುದು, ದೀವಟಿಗೆ ಹಿಡಿಯುವುದು, ಭೂತಸ್ಥಾನದಲ್ಲಿ ಸಿಂಗದನ ಕಟ್ಟುವುದು ಮೊದಲಾದ ಕಾರ್ಯಗಳನ್ನೂ ಮಡಿವಾಳರು ನಿರ್ವಹಿಸುತ್ತಾರೆ. ಇವರಲ್ಲಿ ಸಾಲ್ಯಾನ್, ಬಂಗೇರಣ್ಣ, ಕುಂದರ್, ಬೋಲ್ದನ್ನ, ಉಪ್ಪರನ್ನ ಮೊದಲಾದ ಬಳಿಗಳಿವೆ. ತುಳುನಾಡಿನ ಇತರರ ಹಾಗೆ ಹಲವಾರು ದೇವರು ಹಾಗೂ ದೈವಗಳನ್ನು ಇವರು ಪೂಜಿಸುತ್ತಾರೆ ಇವರು ವೀರಭದ್ರನನ್ನು ತಮ್ಮ ಕುಲದೇವರೆಂದು ಭಾವಿಸಿರುವುದಲ್ಲದೆ ಬಟ್ಟೆ ಬೇಯಿಸುವ ಉಬ್ಬೆ ಒಲೆಯನ್ನೂ ದೇವರೆಂದು ನಂಬಿ ಅದಕ್ಕೆ ಪೂಜೆ, ಬಲಿ ಅರ್ಪಿಸುತ್ತಾರೆ.

**ಕುಲಾಲ:** ಕುಲಾಲರಿಗೆ ಮೂಲ್ಯ, ಹಾಂಡ, ಕುಂಬಾರ ಮೊದಲಾದ ಪರ್ಯಾಯ ಹೆಸರುಗಳೂ ಇವೆ. ಕುಂಬಾರಿಕೆ ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಬಾಗೆಟ್ಟಿನ್ನಾಯ, ಬೊನ್ನಣ್ಣಾಯ, ಪುಲ್ಲೆಟಿಣ್ಣಾಯ, ಸಾಲಣ್ಣಯ, ಬಂಗೇರಣ್ಣಾಯ, ಕುಂದಲಣ್ಣಾಯ, ಪಂಗಲಣ್ಣಾಯ, ಕುರ್ಮರಣ್ಣಾಯ, ಕೆಲ್ಲರಣ್ಣಾಯ, ಹಿರಿವಣ್ಣಾಯ, ಉಪ್ಪರಣ್ಣಯ, ಪೆರ್ಗಡೆ ಬಣ್ಣಾಯ, ಉದ್ಬರಣ್ಣಾಯ, ಕೋಚಪ್ಪುನ್ನಾಯ ಮೊದಲಾದ ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಕುಲಾಲರ ಮನೆ ಮಾತು ತುಳು (ಕುಂದಾಪುರ ಭಾಗದಲ್ಲಿ ಕನ್ನಡ). ತುಳು ಮಾತನಾಡುವವರು ಅಳಿಯ ಸಂತಾನಕಟ್ಟು ಹಾಗೂ ಕನ್ನಡ ಮಾತನಾಡುವವರು ಮಕ್ಕಳ ಕಟ್ಟಿಗೆ ಸೇರಿದವರಾಗಿದ್ದಾರೆ. ಕೂಡುಕಟ್ಟಿನ ಗುರಿಕಾರರ ಮಾರ್ಗದರ್ಶನದಲ್ಲಿ ವಿವಾಹಾದಿ ಕಾರ್ಯಗಳು ನಡೆಯುತ್ತವೆ.

**ಕೊಟ್ಟಾರಿ:** ಕೊಟ್ಟಾರಿ ಎಂದರೆ ಉಗ್ರಾಣದ ಅಧಿಕಾರಿ ಎಂದು ಅರ್ಥ. ಹಿಂದೆ ಜೈನ ಹಾಗೂ ಬಂಟ ಅರಸರ ಅಥವಾ ಜಮೀನ್ದಾರರ ಮನೆಯ ಉಗ್ರಾಣಗಳ ಮೇಲ್ವಿಚಾರಕ ವೃತ್ತಿ ಮಾಡುತ್ತಿದ್ದವರು ಈಗಲೂ ತುಳುನಾಡಿನಲ್ಲಿ ಕೊಟ್ಟಾರಿ ಎಂಬ ಜಾತಿ ಸಮುದಾಯವಾಗಿ ಕಾಣಬರುತ್ತಾರೆ. ಈ ವೃತ್ತಿಯ ಕಾರಣಕ್ಕಾಗಿ ಇವರಿಗೆ ಜೈನ ಹಾಗೂ ಬಂಟರ ಸಮೀಪ ಸಂಪರ್ಕವಿದ್ದಿತು. ಇವರು ಕೃಷಿಕಾರ್ಯದಲ್ಲಿಯೂ ತೊಡಗಿದವರು. ಅಳಿಯಕಟ್ಟು ಪದ್ಧತಿಯವರಾದುದರಿಂದ ಇವರ ಆಚಾರ–ಸಂಪ್ರದಾಯಗಳು, ದೈವಾರಾಧನೆಗಳು ಬಹುಮಟ್ಟಿಗೆ ಇತರ ಅಳಿಯ ಸಂತಾನ ಪದ್ಧತಿಯವರ ಕಟ್ಟುಕಟ್ಟಳೆಗಳನ್ನೇ ಹೋಲುತ್ತವೆ.

**ಕೊರಗ:** ತುಳುನಾಡಿನ ಮೂಲನಿವಾಸಿಗಳಲ್ಲಿ ಕೊರಗರೂ ಸೇರುತ್ತಾರೆ. ಹುಬಾಸಿಕನೆಂಬ ವೀರನು ಕೊರಗ ಸಮುದಾಯದ ಅರಸನಾಗಿದ್ದನು. ಸ್ಥಳೀಯ ಅರಸರೊಂದಿಗಿನ ಹೋರಾಟದಲ್ಲಿ ಆತ ಸೋತ ಕಾರಣವಾಗಿ ಕೊರಗರು ನಾಡು ಬಿಟ್ಟು ಕಾಡನ್ನು ಆಶ್ರಯಿಸಿದರೆಂಬ ಐತಿಹ್ಯವಿದೆ. ಅರಣ್ಯದಲ್ಲಿ ಬೇಟೆಯಾಡುತ್ತಾ ಅಲೆಮಾರಿಗಳಾಗಿದ್ದವರು ಕಾಲಾಂತರದಲ್ಲಿ ಒಂದೆಡೆ ನೆಲೆಸಿ ಬುಟ್ಟಿ ಹೆಣೆಯುವುದು, ಜೇನು ಇತ್ಯಾದಿ ಕಾಡುತ್ಪತ್ತಿ ಸಂಗ್ರಹಿಸುವುದು ಕೃಷಿಕಾರ್ಯ ಮತ್ತಿತರ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೊರಗರಲ್ಲಿ ಅಂಡೆಕೊರಗ, ಸೊಪ್ಪುಕೊರಗ ಹಾಗೂ ಕಾಪಡಕೊರಗ ಎಂಬ ಒಳ ಪಂಗಡಗಳಿವೆ. ಇವರು ಅಳಿಯಕಟ್ಟು ಪದ್ಧತಿಯವರು. ಕೊರಗರ ನಿವಾಸಗಳನ್ನು ಸಾಂಪ್ರದಾಯಿಕವಾಗಿ ಕೊಪ್ಪ ಅಥವಾ ಕೊಟ್ಯ ಎಂದು ಕರೆಯುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಇವರು ಕೊಳಲು ಹಾಗೂ ಈರಣ (ಡೋಲು) ಎಂಬ ಚರ್ಮವಾದ್ಯ ನುಡಿಸುತ್ತಾ ಕುಣಿತ ಮಾಡುತ್ತಾರೆ. ಕುಲದ ಮುಖ್ಯಸ್ಥನಾದ ಗುರಿಕಾರನ ಮಾರ್ಗದರ್ಶನದಲ್ಲಿ ನ್ಯಾಯ ಪಂಚಾಯಿತಿ, ವಿವಾಹ ಮತ್ತಿತರ ಸಾಂಪ್ರದಾಯಿಕ ಕಾರ್ಯಗಳು ನಡೆಯುತ್ತವೆ. ಇವರಲ್ಲಿ ನವಜಾತಶಿಶು ಹಾಗೂ ಬಾಣಂತಿಯನ್ನು ಐದು ದಿನ ಪ್ರತ್ಯೇಕ ಗುಡಿಸಲಲ್ಲಿ ಇರಿಸುತ್ತಾರೆ. ಮಗು ಹುಟ್ಟಿದ ದಿನದ ಹೆಸರನ್ನು ಆಧರಿಸಿ ಮಗುವಿಗೆ ಹೆಸರು ಇಡುವುದೂ ಇವರಲ್ಲಿನ ಒಂದು ರೂಢಿಯಾಗಿದೆ. ಮದುವೆಯಲ್ಲಿ ವರನನ್ನು ಬತ್ತದ ಮುಡಿಯ ಮೇಲೆ ಹಾಗೂ ವಧುವನ್ನು ಅದಕ್ಕಿಂತ ಕಡಿಮೆ ಎತ್ತರದ ಹೆಡಿಗೆಯ ಮೇಲೆ ಕೂರಿಸುವುದು, ಗಂಡಿನ ಕಡೆಯ ಗುರಿಕಾರನು ವಧುವಿಗೆ ಕರಿಮಣಿ ಕಟ್ಟಿ, ಕಾಲುಂಗುರ ತೊಡಿಸುವುದು ಮೊದಲಾದುವು ಇವರ ಕೆಲವು ಸಾಂಪ್ರದಾಯಿಕ ಪದ್ಧತಿಗಳು. ಶವವನ್ನು ಕಂಬಳಿಯಲ್ಲಿ ಸುತ್ತಿ ಅಥವಾ ಹೆಣಕ್ಕೆ ಮುಸುಕು ಹಾಕಿ ಒಂದೇ ಬಡಿಗೆಯಲ್ಲಿ ಹೂಳುವ ಜಾಗಕ್ಕೆ ಒಯ್ಯುವುದೂ ಇವರಲ್ಲಿನ ಸಾಂಪ್ರದಾಯಿಕ ಪದ್ಧತಿಯಾಗಿದ್ದಿತು. 'ಸುಡುಸುದ್ದ' ಎಂಬ ಪ್ರಾಯಶ್ಚಿತ್ತ ಕ್ರಮವು ಹಿಂದೆ ಕೊರಗರಲ್ಲಿಯೂ ಇದ್ದಿತು. ಅದರ ಪ್ರಕಾರ ತಪ್ಪಿತಸ್ಥ ಹೆಣ್ಣು ಅಥವಾ ಗಂಡು ಉರಿವ ಗುಡಿಸಲುಗಳ ಮೂಲಕ ಹಾದುಬರಬೇಕಾಗಿದ್ದಿತು. ಕೊರಗತನಿಯನನ್ನು ಕೊರಗರು ದೈವವೆಂದು ಆರಾಧಿಸುತ್ತಾರೆ. ಈ ದೈವದ ಕೋಲವಾಗುವಾಗ ಯಾವುದೇ ಬಗೆಯ ದೀಪದ ಬೆಳಕು ಇರಬಾರದೆಂಬ ನಿಬಂಧನೆಯೂ ಇದೆ.

**ಗಟ್ಟಿ :** ಉಳ್ಳಾಲದ ಅಬ್ಬಕ್ಕರಾಣಿಯ ಆಶ್ರಯದಲ್ಲಿದ್ದು ತಮ್ಮದೇ ಆದ ವೃತ್ತಿ ನಡೆಸುತ್ತಿದ್ದ ಕೆಲವು ಕುಟುಂಬಗಳು ಬಳಿಕ ಹೊಲ–ಗದ್ದೆ ಕೃಷಿ ಮಾಡಿಕೊಂಡು ಉಳಿದದ್ದರಿಂದ ಈ ಜಾತಿಯವರಿಗೆ ಹೊಲದವರು ಅಥವಾ ಗಟ್ಟಿ ಎಂಬ ಹೆಸರು ಬಂತು ಎಂಬ ಪ್ರತೀತಿ ಇದೆ. ಇವರ ಸಾಂಪ್ರದಾಯಿಕ ಕಸುಬು ಕೃಷಿ. ಈಚೆಗೆ ಇತರ ವೃತ್ತಿಗಳನ್ನೂ ಮಾಡುತ್ತಿದ್ದಾರೆ. ಇವರಲ್ಲಿ ಕೊಜ್ಜೇರ, ಬಂಗೇರ, ಕಯ್ಯೆರ, ಸುವಾಡಿ ಅಣ್ಣೆರ್ ಎಂಬ ಬಳಿಗಳಿದ್ದು, ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಇವರ ಮನೆ ಮಾತು ತುಳು; ಅಳಿಯಕಟ್ಟು ಸಂಪ್ರದಾಯ ಅನುಸರಿಸುತ್ತಾರೆ. ಜಾತಿಯ ಮುಖ್ಯಸ್ಥನಾದ ನಾಯ್ಗ ಅಥವಾ ಮೇಲಂಟನ ಮಾರ್ಗದರ್ಶನದಲ್ಲಿ ವಿವಾಹಾದಿ ಕಾರ್ಯಗಳು ಜರುಗುತ್ತವೆ. ಇವರು ಸೋಮನಾಥ ದೇವರು ಹಾಗೂ ಇತರ ದೈವಗಳನ್ನು ಆರಾಧಿಸುತ್ತಾರೆ.

**ಗಾಣಿಗ:** ಜಿಲ್ಲೆಯಲ್ಲಿ ಸಪಲ್ಯ, ಸಪಲಿಗ ಎಂಬ ಹೆಸರುಗಳೂ ಇರುವ ಗಾಣಿಗರು ಗಾಣ ಆಡಿಸಿ ಎಣ್ಣೆ ತೆಗೆಯುವ ಕುಲಕಸುಬಿನವರಾಗಿದ್ದಾರೆ. ಈಚೆಗೆ ಅವರು ಇತರ ವೃತ್ತಿಗಳನ್ನೂ ಮಾಡುತ್ತಿದ್ದಾರೆ. ಇವರ ಮಾತೃಭಾಷೆ ತುಳು. ಅಳಿಯಕಟ್ಟು ಸಂಪ್ರದಾಯಕ್ಕೆ ಸೇರಿದ ಇವರಲ್ಲಿ ಮೆಂಡನ್, ಬಂಗೇರ, ಸಾಲ್ಯಾನ್ ಮೊದಲಾದ ಬಳಿಗಳಿವೆ. ಕುಲದ ಮುಖಂಡರಾದ ಗುರಿಕಾರರ ಮುಂದಾಳ್ತನದಲ್ಲಿ ವಿವಾಹಾದಿ ಸಂಪ್ರದಾಯಗಳು ನಡೆಯುವುದು ಪದ್ಧತಿ. ಗಾಣಿಗರಲ್ಲಿ ಗಾಣದ ಕೊಟ್ಯ ಇರುವವರು ಈಗ ಗಾಣ ಆಡಿಸದಿದ್ದರೂ ಅದನ್ನು ತೆಗೆಯದೆ, ಆ ಮರದ ಭಾಗ ಭೂಮಿಯಲ್ಲಿ ಸ್ವತ: ನಶಿಸಿಹೋಗುವವರೆಗೆ ಹಾಗೇ ಬಿಡಬೇಕೆನ್ನುತ್ತಾರೆ. ದೀಪಾವಳಿಯಲ್ಲಿ ಅದನ್ನು ದೇವರೆಂದು ಪೂಜೆ ಮಾಡುತ್ತಾರೆ.

**ಗಂಗಳ್ಳಿದಾರ ಒಕ್ಕಲಿಗ: ಇದು** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (ಪಡುಪಣಂಬೂರು ಭಾಗದಲ್ಲಿ) ಕಾಣಬರುವ ಒಂದು ಅಪರೂಪದ ಸಮುದಾಯವಾಗಿದೆ. ಕಲ್ಯಾಣಪ್ಪನ ಕಾಟಕಾಯಿಯ ಕಾಲದಲ್ಲಿ ಆತನ ಪಡೆಯಲ್ಲಿದ್ದ ಕೆಲವರು ಕಲ್ಯಾಣಪ್ಪನ ಸೋಲಿನ ಬಳಿಕದ ಆಪತ್ತಿನಿಂದ ತಪ್ಪಿಸಿಕೊಳ್ಳಲು ತಲೆಮರೆಸಿಕೊಂಡು ಮೂಲ್ಕಿ ಕಡೆ ಬಂದು ನೆಲೆ ನಿಂತರೆಂದೂ, ಅವರೇ ಈ ಗಂಗಳ್ಳಿದಾರ ಒಕ್ಕಲಿಗರೆಂದೂ ಹೇಳಲಾಗಿದೆ. ಇವರ ಮನೆ ಮಾತು ಕನ್ನಡವಾದುದರಿಂದ ಕನ್ನಡರು ಎಂದೂ, ಗುರುತು ಹತ್ತಬಾರದೆಂದು ಬಳೆ ವ್ಯಾಪಾರಕ್ಕೆ ತೊಡಗಿದ್ದರಿಂದ ಬಳೆಗಾರರು ಎಂದೂ ಇವರನ್ನು ಗುರುತಿಸುವುದುಂಟು.ಇವರು ನಾಯಕ, ರಾವ್ ಎಂಬ ಉಪನಾಮ ಇಟ್ಟುಕೊಳ್ಳುತ್ತಾರೆ. ಈಚೆಗೆ ಕೋಟೆ ಕ್ಷತ್ರಿಯ ಮೊದಲಾದವರೊಡನೆ ವೈವಾಹಿಕ ಸಂಬಂಧ ಮಾಡುತ್ತಾರೆ. ಇವರ ಉಪನಯನ, ಶ್ರಾದ್ಧ ಮೊದಲಾದವುಗಳಲ್ಲಿ ವೈದಿಕ ಪ್ರಭಾವವಿದೆ (ದಕ್ಷಿಣದ ಸಿರಿನಾಡು, ಪು.೨೧).

**ಗುಡಿಗಾರ:** ಶ್ರೀಗಂಧ, ದಂತ, ಶಿಲೆ ಮೊದಲಾದವುಗಳಲ್ಲಿ ಕಲಾತ್ಮಕ ರಚನೆ ಮಾಡುವುದನ್ನು ಕುಲಕಸುಬಾಗಿ ಉಳ್ಳ ಇವರಲ್ಲಿ ಕೌಶಿಕ, ಗೌತಮ, ಕೌಂಡಿನ್ಯ, ಜಮದಗ್ನಿ ಮೊದಲಾದ ಗೋತ್ರ ಪದ್ಧತಿಗಳಿವೆ. ಇವರ ಆಚಾರ ಸಂಪ್ರದಾಯಗಳು ವೈದಿಕ ಪದ್ಧತಿಯಂತೆ ಬ್ರಾಹ್ಮಣ ಪುರೋಹಿತರ ಮೂಲಕ ನಡೆಯುತ್ತವೆ. ದೀಪಾವಳಿ, ಅಷ್ಟಮಿ, ತುಳಸಿಹಬ್ಬ, ನವರಾತ್ರಿ ಮೊದಲಾದ ಹಬ್ಬಗಳನ್ನು ಇವರೂ ಮಾಡುತ್ತಾರೆ.

**ಗೌಡ:** ಜಿಲ್ಲೆಯ ಸುಳ್ಯ ಭಾಗದಲ್ಲಿನ ಗೌಡ ಯಾನೆ ಒಕ್ಕಲಿಗರು ಘಟ್ಟದ ಮೇಲಿನ ಹಾಸನ ಪರಿಸರದಿಂದ ವಲಸೆ ಬಂದವರು. ಇವರು ಗೌಡ ಕನ್ನಡ ಎಂಬ ಉಪಭಾಷೆಯನ್ನಾಡುತ್ತಾರೆ. ಇದಕ್ಕೆ ಪ್ರತ್ಯೇಕ ಲಿಪಿ ಇಲ್ಲ; ಕನ್ನಡ ಲಿಪಿಯನ್ನೇ ಬಳಸುತ್ತಾರೆ. ಗೌಡ ಕನ್ನಡದೊಂದಿಗೆ ತುಳು, ಕನ್ನಡ ಮತ್ತಿತರ ಭಾಷೆಗಳನ್ನೂ ಬಲ್ಲವರಿದ್ದಾರೆ. ವ್ಯವಸಾಯವು ಇವರ ಸಾಂಪ್ರದಾಯಿಕ ವೃತ್ತಿಯಾಗಿದೆ. ಸಿದ್ಧವೇಷ, ಪುರುಷರ ಕುಣಿತ ಎಂಬುವು ಈ ಸಮುದಾಯದವರ ವಿಶೇಷ ಕಲಾಸಂಪ್ರದಾಯಗಳಾಗಿವೆ. ಇವರಲ್ಲಿ ಕಟ್ಟೆಮನೆಯು ಜಾತಿಪಂಚಾಯಿತಿಯ ಕೇಂದ್ರವೆಂದು ಪರಿಗಣಿತವಾಗಿದ್ದಿತು. ಹಿಂದೆ ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದವು. ಅಂಥ ಕುಟುಂಬದ ಮೂಲಮನೆಗೆ ತರವಾಡು ಮನೆ ಎಂದೂ, ಗುತ್ತಿನ ಮನೆಗೆ ಐನ್‌ಮನೆ ಎಂದೂ ಹೆಸರು. ವಿವಾಹ ಸಂದರ್ಭದಲ್ಲಿ ಹತ್ತೂವರೆ ರೂ. ಅನ್ನು ತೆರದ ಹಣವಾಗಿ ಕೊಡಬೇಕಾದುದು ಕಡ್ಡಾಯವಾಗಿದ್ದು, ಅದರಲ್ಲಿ ರೂ.೬.೨೫ ಅನ್ನು ಗುರುಮಠಕ್ಕೆ "ಗುರುಪಣ"ವಾಗಿ ಕೊಡಬೇಕಾದ ಕ್ರಮವಿದೆ. ಗೌಡ ಸಮುದಾಯದವರು ಹಲವಾರು ವೈದಿಕ ದೇವರುಗಳನ್ನೂ, ಭೂತದೈವಗಳನ್ನೂ ಆರಾಧಿಸುತ್ತಾರೆ. ಮನೆತನದ ಪೂರ್ವಿಕರನ್ನು ಗುರುಕಾರ್ನೂರರು ಎಂಬ ಹೆಸರಿನಲ್ಲಿ ಪೂಜಿಸುತ್ತಾರೆ.

**ಜೋಗಿ:** ನಾಥಪಂಥದ ಮತ್ಸ್ಯೇಂದ್ರನಾಥರಿಂದ ಜೋಗಿ ಸಂಪ್ರದಾಯ ರೂಪುಗೊಂಡಿತು ಎಂಬ ಅಭಿಪ್ರಾಯವಿದೆ. ಜೋಗಿಗಳಲ್ಲಿ ಜಾತಿ ಪಂಚಾಯಿತಿ ಇದ್ದು, ಮುಖ್ಯಸ್ಥನನ್ನು ಗುರಿಕಾರ ಅಥವಾ ಕೊತ್ವಾಲ ಎಂದು ಕರೆಯುತ್ತಾರೆ. ಇವರು ಮಕ್ಕಳಕಟ್ಟು ಪದ್ಧತಿ ಹೊಂದಿದವರು. ಇವರಲ್ಲಿ ೧೧ ಅಥವಾ ೧೨ನೇ ದಿನಕ್ಕೆ ಅಜ್ಜಿಯು ಮಗುವನ್ನು ತೊಟ್ಟಿಲಿಗೆ ಹಾಕಿ ಹೆಸರು ಇಡುತ್ತಿದ್ದುದು ಸಂಪ್ರದಾಯ. ಗಂಡು ಮಗುವಿನ ಹೆಸರಿನ ಕೊನೆಗೆ ಸಾಮಾನ್ಯವಾಗಿ 'ನಾಥ' ಎಂಬ ಉಪನಾಮ ಸೇರಿಸುತ್ತಾರೆ. ಅಂದೇ ಮಗುವಿಗೆ ಕಿವಿ ಚುಚ್ಚುತ್ತಾರೆ. ೪೦ನೇ ದಿನಕ್ಕೆ ಬಾಣಂತಿಗೆ ಬಾವಿ ಮುಟ್ಟಿಸುವ ಶಾಸ್ತ್ರ ಮಾಡುತ್ತಾರೆ. ಮೈನೆರೆದ ಹುಡುಗಿಯನ್ನು ಮೂರು ದಿನ ಪ್ರತ್ಯೇಕ ಇರಿಸಿ, ನಾಲ್ಕನೇ ದಿನ ಪುರೋಹಿತರಿಂದ ಪುಣ್ಯಾರ್ಚನೆ ಇತ್ಯಾದಿ ಮಾಡಿಸುತ್ತಾರೆ. ಹುಡುಗನಿಗೆ ೧೬ ವರ್ಷ ಆಗುವುದರ ಒಳಗಾಗಿ ಮಠದ ಗುರುಗಳಿಂದ ನಾದಿ ಪವಿತ್ರ ಧಾರಣೆ (ಜೋಗಿಗಳ ಕ್ರಮದಲ್ಲಿ ಉಪನಯನ) ಮಾಡಿಸುವ ಪದ್ಧತಿ ಇದೆ. ಮದುವೆಯಲ್ಲಿ ಮನೆ ಅಂಗಳದ ತುಳಸಿಕಟ್ಟೆ ಬಳಿ ಇರಿಸಿದ ಮೂರ್ತಗಂಬ ಹಾಗೂ ತೋರಣಗಳಿಗೆ ಅರಿಸಿನ ಹಚ್ಚಿ ಬಳಿಕ ವಧುವಿಗೆ ಅರಿಸಿನ ಹಚ್ಚುವ ಶಾಸ್ತ್ರ ಮಾಡುತ್ತಾರೆ. ಬಾಳೆ ಎಲೆ ಮೇಲೆ ಬೆಳ್ತಿಗೆ ಅಕ್ಕಿ ಹರಡಿ, ಅದರ ಮೇಲೆ ವಧೂವರರನ್ನು ನಿಲ್ಲಿಸಿ, ಧಾರೆ ಎರೆಯುತ್ತಾರೆ. ಇವರಲ್ಲಿ ಶವವನ್ನು ಗುಂಡಿಯಲ್ಲಿ ಮಾಡಿದ ಇನ್ನೊಂದು ಗೂಡಿನಲ್ಲಿ ಕೂರಿಸಿ ಮಣ್ಣು ಮಾಡಿ, ಗೂಡಿನ ಪಕ್ಕ ಹಣತೆಗಳನ್ನಿಡುವ ಪದ್ಧತಿ ಇದೆ.

**ದಾಸಯ್ಯ:** ಇವರು ತಿರುಪತಿ ತಿಮ್ಮಪ್ಪನ ಒಕ್ಕಲಿನವರಿಗೆ (ತಿಮ್ಮಪ್ಪನನ್ನು ಮನೆ ದೇವರಾಗಿ ಒಪ್ಪಿ ನಡೆದುಕೊಳ್ಳುವ ಕುಟುಂಬಗಳಿಗೆ) ಪುರೋಹಿತರಾಗಿ ಕಾರ್ಯನಿರ್ವಹಿಸುವವರು ಎನ್ನಬಹುದು. ಹಣೆಯಲ್ಲಿ ಗಂಧದ ಮೂರು ನಾಮಗಳು, ತಲೆಗೆ ಮುಂಡಾಸು, ಸೊಂಟದಲ್ಲಿ ಬಿಳೀ ಕಚ್ಚೆ ಪಂಚೆ ಧರಿಸಿ, ಶಂಖ, ಜಾಗಟೆ, ಭವನಾಸಿ ಹಾಗೂ ಗರುಡಗಂಬಗಳೊಂದಿಗೆ ಇವರು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಾರೆ. ದಾಸಯ್ಯನು ತನಗೆ ನಿರ್ದಿಷ್ಟವಾದ ಗ್ರಾಮಗಳ ಅಜಲಿನ ಮನೆಗಳಲ್ಲಿ ನಡೆಯುವ ದೇವತಾಕಾರ್ಯ ಮತ್ತಿತರ ಧಾರ್ಮಿಕ ಆಚರಣೆಗಳಲ್ಲಿ ಪುರೋಹಿತನಂತೆ ಭಾಗವಹಿಸುತ್ತಾನೆ. ತಿಮ್ಮಪ್ಪನ ಒಕ್ಕಲಿನವರು ತಿರುಪತಿಗೆ ಮುಡಿಪು ಕಟ್ಟುವಾಗ ಮಾಡುವ 'ಹರ್‌ಸಾಯ' (ಹರಿಸೇವೆ)ವನ್ನು ದಾಸಯ್ಯ ನಡೆಸಿಕೊಡಬೇಕಾಗುತ್ತದೆ. ಹಾಗೂ, ತಿರುಪತಿಗೆ ಮುಡಿಪು ತೆಗೆದುಕೊಂಡು ಹೋಗುವವರು ತಮ್ಮ ಜೊತೆಯಲ್ಲಿ ದಾಸಯ್ಯನನ್ನು ಕರೆದುಕೊಂಡು ಹೋಗುವುದು ಪದ್ಧತಿಯಾಗಿದೆ.

**ದೇವಾಡಿಗ:** ದೇವಾಲಯಗಳಲ್ಲಿ ದೀವಟಿಗೆ ಹಿಡಿಯವುದು, ಓಲಗ ನುಡಿಸುವುದು ಮೊದಲಾದ ಕಾರ್ಯಗಳನ್ನು ಸಾಂಪ್ರದಾಯಿಕವಾಗಿ ನಿರ್ವಹಿಸುವ ವೃತ್ತಿಯ ದೇವಾಡಿಗರಿಗೆ ಮೊಯಿ, ಶೇರಿಗಾರ ಎಂಬ ಹೆಸರೂ ಇವೆ ಆಳಿಯಕಟ್ಟು ಪದ್ಧತಿಯ ದೇವಾಡಿಗರಲ್ಲಿ ಅಡ್ಯರನ್, ಸಿಡಿಯಾನ್, ಕಾಯರನ್, ಕುಂದರನ್, ಉಪ್ಪೆನ್, ವಡ್ಡರನ್, ಸಾಲ್ಯಾನ್, ಗುಜರಾನ್, ಶ್ರೀಯಾನ್, ಬಂಗೇರ ಮೊದಲಾದ ಬಳಿಗಳಿವೆ. ಕುಲದ ಮುಖ್ಯಸ್ಥನಾದ ಗುರಿಕಾರನ ಮುಂದಾಳ್ತನದಲ್ಲಿ ವಿವಾಹಾದಿ ಸಾಂಪ್ರದಾಯಿಕ ಆಚರಣೆಗಳು ನಡೆಯುವುದು ಪದ್ಧತಿ. ಕೃಷ್ಣ ಜನ್ಮಾಷ್ಟಮಿ, ಚೌತಿ, ಯುಗಾದಿ ಮೊದಲಾದ ಹಬ್ಬಗಳನ್ನು ದೇವಾಡಿಗರೂ ಆಚರಿಸುತ್ತಾರೆ. ಇವರು ಆಯಾ ಸ್ಥಳದ ಎಲ್ಲಾ ದೇವಾಲಗಳಲ್ಲಿಯೂ

ಕೆಲವು ಸಾಂಪ್ರದಾಯಿಕ ಸೇವಾ ಕಾರ್ಯಗಳನ್ನು ಮಾಡುತ್ತಿದ್ದುದರಿಂದ ಇವರಿಗೆ ತಮ್ಮದೇ ಆದ ಪ್ರತ್ಯೇಕ ಕುಲದೇವರು ಇಲ್ಲ ಎಂದು ತಿಳಿದುಬಂದಿದೆ

**ದೈವಜ್ಞ ಬ್ರಾಹ್ಮಣ:** ವಜ್ರ, ಚಿನ್ನ, ಬೆಳ್ಳಿಯಂತಹ ಆಭರಣಗಳ ವ್ಯಾಪಾರೋದ್ಯಮವನ್ನು ಕುಲಕಸಬಾಗಿ ಉಳ್ಳ ಇವರಿಗೆ ಸೋನಾರ, ಕೊಂಕಣ ಸೋನಾರ, ಸೋನಾರ ಶೆಟಗಾರ, ಶೇಟ್ ಮೊದಲಾದ ಹೆಸರುಗಳೂ ರೂಢಿಯಲ್ಲಿವೆ. ತಮ್ಮನ್ನು ದೈವಜ್ಞ ಬ್ರಾಹ್ಮಣರೆಂದೂ ಗುರುತಿಸಿಕೊಳ್ಳುವ ಇವರು ಕರಾವಳಿಗೆ ಗೋವಾ ಮಾರ್ಗವಾಗಿ ಮಹಾರಾಷ್ಟ್ರದಿಂದ ವಲಸೆ ಬಂದು ನೆಲೆ ನಿಂತವರಾಗಿದ್ದಾರೆ. ಇವರ ಮಾತೃ ಭಾಷೆ ಕೊಂಕಣಿ. ವಶಿಷ್ಠ ವಿಶ್ವಾಮಿತ್ರ ಅತ್ರಿ ಮೊದಲಾದ ಏಳು ಗೋತ್ರಗಳು ಇದ್ದು, ರೇವಣ್‌ಕರ್, ರಾಯ್ಕರ್, ಸಾನು, ನೀಲಾವರ್ ಮೊದಲಾದುವು ಇವರ ಮನೆತನದ ಹೆಸರುಗಳಾಗಿವೆ. ದೈವಜ್ಞ ಬ್ರಾಹ್ಮಣರಲ್ಲಿ ಪುರೋಹಿತ ವರ್ಗವಿದ್ದು, ಆ ಜಾತಿಯ ಪುರೋಹಿತರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಹಯಗ್ರೀವ ದೇವರನ್ನು ಕುಲದೇವರಾಗಿ ಪೂಜಿಸುವ ಇವರು ಇತರ ಗ್ರಾಮ ದೇವತೆಗಳಿಗೂ, ದೈವಗಳಿಗೂ ನಡೆದುಕೊಳ್ಳುತ್ತಾರೆ. ಉಪಾಕರ್ಮ, ತುಳಸಿಹಬ್ಬ, ಅನಂತನೋಂಪಿ ಮೊದಲಾದವು ಇವರು ನಡೆಸುವ ಕೆಲವು ಹಬ್ಬಹರಿದಿನಗಳಾಗಿವೆ. ಇವರು ಉಡುಪಿ ಸೋದೆ ಮಠಕ್ಕೆ ನಡೆದುಕೊಳ್ಳುತ್ತಾರೆ. ಕೆಲವರು ಈಚೆಗೆ ಶೈವ ಸಂಪ್ರದಾಯದ ಪ್ರತ್ಯೇಕ ಮಠ ಮಾಡಿಕೊಂಡಿದ್ದಾರೆ.

**ನಲ್ಕೆ:** ತುಳುವಿನಲ್ಲಿ ನಲಿಕೆ ಎಂದರೆ ನಾಟ್ಯ ಅಥವಾ ಕುಣಿತ ಎಂದು ಅರ್ಥ. ಭೂತದ ವೇಷ ಹಾಕಿ ಕುಣಿತ ಮಾಡುವುದನ್ನು ಸಾಂಪ್ರದಾಯಿಕ ವೃತ್ತಿ ಮಾಡಿಕೊಂಡಿದ್ದರಿಂದ ಇವರನ್ನು ನಲ್ಕೆಯವರು ಎಂದು ಕರೆಯಲಾಗುತ್ತದೆ ಎಂಬುದು ಸಾಮಾನ್ಯ ಅಭಿಪ್ರಾಯವಾಗಿದೆ. ಇವರಲ್ಲಿ ಅಜಿಲರೆಂಬ ಇನ್ನೊಂದು ಪಂಗಡವೂ ಇದೆ. ಕುಕ್ಕೆ, ಚಾಪೆ ಇತ್ಯಾದಿ ಹೆಣೆಯುವುದು, ಮುಟ್ಟಾಳೆ ಮಾಡುವುದು, ಕೃಷಿ ಕಾಯಕ ಮೊದಲಾದುವೂ ಇವರು ಜೀವನಕ್ಕಾಗಿ ಅವಲಂಬಿಸಿದ ಇತರ ಕಸುಬುಗಳಾಗಿವೆ. ಮಕ್ಕಳ ಕಟ್ಟು ಪದ್ಧತಿಯ ಇವರಲ್ಲಿ ಸಾಲಿಯಾನ್, ಬಂಗೇರ, ಕಿರೋಡಿಯನ್ನಾಯ, ಕರುಂಬೆರನ್ನಾಯ ಮೊದಲಾದ ಬಳಿಗಳು ಇವೆ. ತುಳುವ ಪದ್ಧತಿಯಯಂತೆ ಹಬ್ಬ–ಸಂಪ್ರದಾಯಗಳನ್ನು ನಡೆಸುತ್ತಾರೆ. ಮಳೆಗಾಲದಲ್ಲಿ ಮಕ್ಕಳಿಗೆ ಆಟಿಕಳಂಜ, ಗಿರಿಕನ್ಯೆ ಮೊದಲಾದ ವೇಷಗಳನ್ನು ಹಾಕಿ, ತೆಂಬರೆಯೊಂದಿಗೆ ಹಾಡುತ್ತಾ ಮನೆಮನೆಯ ಮುಂದೆ ಕುಣಿತ ಮಾಡುವುದು ಇವರಲ್ಲಿನ ಒಂದು ವಿಶೇಷವಾಗಿದೆ.

**ಪದ್ಮಶಾಲಿ:** ನೇಕಾರಿಕೆಯು ಕುಲಕಸುಬಾದ ಪದ್ಮಶಾಲಿಗಳಿಗೆ ಶೆಟ್ಟಿಗಾರ, ಜಾಡ, ನೇಯ್ಗಿ ಮೊದಲಾದ ಹೆಸರುಗಳೂ ಇವೆ. ಮಡಿಬಟ್ಟೆ ತಯಾರಿಸಿಕೊಡುವ ಕಾರ್ಯಕ್ಕಾಗಿಯೇ ಸುಮಾರು ೭೦೦ ವರ್ಷಗಳ ಹಿಂದೆ ಬಾರ್ಕೂರಿನ ತುಳು ಅರಸರು ಇವರನ್ನು ಹೊರರಾಜ್ಯದಿಂದ ಕರೆಸಿಕೊಂಡರು ಎನ್ನಲಾಗಿದೆ. ಪದ್ಮಶಾಲಿಗಳಲ್ಲಿ ಕರ್ತನಕೋಲ್, ಚೋರಡಾ, ಶಾಮಡಾ, ಕೌಡುಂಜಿ, ಕಡಮನೋಕಲ್, ಸಿರಿನ್ ಇತ್ಯಾದಿ ಏಳು ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ಆಗುವಂತಿಲ್ಲ. ಇವರಲ್ಲಿ ಬಳಕೆಯಲ್ಲಿರುವ ಶಾಲಿ ಎಂಬ ಭಾಷೆ ಕನ್ನಡ, ತಮಿಳು, ಮಲಯಾಳಿ ಮತ್ತು ತೆಲುಗು ಭಾಷಾ ಶಬ್ದಗಳ ಮಿಶ್ರಣವಾಗಿದ್ದು, ಇದಕ್ಕೆ ಪ್ರತ್ಯೇಕ ಲಿಪಿ ಇಲ್ಲ. ಈ ಅಂಶವೂ ಪದ್ಮಶಾಲಿಗಳು ತುಳುನಾಡಿಗೆ ಹೊರಗಿನಿಂದ ಬಂದವರೆಂಬುದನ್ನು ಸೂಚಿಸುತ್ತದೆ. ಪದ್ಮಶಾಲಿಗಳ ವಿವಾಹಾದಿ ಸಾಂಪ್ರದಾಯಿಕ ಕಾರ್ಯಗಳನ್ನು ಅವರ ಕುಲದೇವಸ್ಥಾನದ ಆಡಳಿತ ಮುಖಂಡರ ಮುಂದಾಳ್ತನದಲ್ಲಿ ಪುರೋಹಿತರು ನೆರವೇರಿಸುತ್ತಾರೆ. ವೀರಭದ್ರ ಹಾಗೂ ದುರ್ಗಾಪರಮೇಶ್ವರಿ ಯಾ ಮಹಮ್ಮಾಯಿ ಇವರ ಕುಲದೇವರಾಗಿವೆ. ವಿವಾಹದ ನೆಂಟಸ್ತಿಕೆ ಮಾಡುವಾಗ ವಧು–ವರರ ಕಡೆಯವರು ಗ್ರಾಮದಲ್ಲಿನ ತಮ್ಮ ಸಮಾಜದವರ ದೇವಸ್ಥಾನದಿಂದ ಅನುಮತಿ ಪತ್ರ ಪಡೆಯಬೇಕೆಂಬ ಕಟ್ಟುಪಾಡು ಇವರಲ್ಲಿ ಇದೆ.

**ಪರವ:** ಪರಯ್ ಎಂಬ ಚರ್ಮವಾದ್ಯವನ್ನು ನುಡಿಸುತ್ತಾ ಪಾಡ್ದನಗಳನ್ನು ಹಾಡುವವರಾದ್ದರಿಂದ ಇವರಿಗೆ ಪರವ ಎಂಬ ಹೆಸರಾಗಿದೆ. ಪರವರು ಕೋಟಿ ಚೆನ್ನಯ, ಬೈದ್ಯೆರ್ಲೆ, ಕಲ್ಕುಡ–ಕಲ್ಲುರ್ಟಿ, ಮಾನಿಬಾಲೆ ಮೊದಲಾದ ಭೂತದೈವಗಳ ವೇಷಗಳನ್ನು ಹಾಕುವವರಾಗಿದ್ದಾರೆ. ಕೋಟಿಚೆನ್ನಯರ ಆರಾಧನೆ ಗರಡಿಗಳಲ್ಲಿ ನಡೆದಾಗ ಅಲ್ಲಿ ಈ ದೈವಗಳನ್ನು ಕುರಿತ ಸಂಧಿಯನ್ನು ಹಾಡುವವರು ಪರವರೇ. ಮಕ್ಕಳಕಟ್ಟು ಸಂಪ್ರದಾಯದ ಇವರಲ್ಲಿ ಬಂಗೇರ, ಸಾಲಿಯಾನ್, ಪುಲ್ಯಟನ್ ಮೊದಲಾದ ಬಳಿಗಳಿವೆ. ಇವರಲ್ಲಿ ನಾಮಕರಣದಂದು ಮಗುವಿನ ಹೆಸರನ್ನು ಮೊದಲು ಕರೆಯುವ ಹಕ್ಕು ಅದರ ಅಜ್ಜ/ಅಜ್ಜಿಯದಾಗಿರುತ್ತದೆ.

**ಪರಿವಾರ ಬಂಟ:** ರಾಜರ ಪರಿವಾರದಲ್ಲಿ ಸೇವೆ ಸಲ್ಲಿಸುತ್ತಿದ್ದುದರಿಂದ ಇವರಿಗೆ ಪರಿವಾರಬಂಟರೆಂಬ ಹೆಸರಾಗಿದೆ. ನಾಯ್ಕ ಎಂಬುದು ಇವರು ಬಳಸುವ ಉಪನಾಮವಾಗಿದೆ. ಇವರು ಮಕ್ಕಳಕಟ್ಟು ಪದ್ಧತಿಗೆ ಸೇರಿದವರು. ಇತರರಲ್ಲಿ ಬಳಿ ಅಥವಾ ಗೋತ್ರಗಳಿರುವಂತೆ

ಇವರಲ್ಲಿ ತಳಂಗೆರೆ, ಬೀರಂತಬ್ಬೈಲು, ಮಾಳಂಗೇರಿ, ಪಟ್ಲ, ಮಳಿ, ಅಗ್ರ, ಕುರ್ವೆಲು, ಅಮ್ಮೆ (ಅಮೆಯಿ), ಅಡೂರು, ಕೊಟ್ಟಿಚೆಟ್ಟು ಮೊದಲಾಗಿ, ಸ್ಥಳದ ಹಿನ್ನೆಲೆಯ ೧೮ ಸಂತಾನಕ್ರಮಗಳಿವೆ. ಒಂದೇ ಸಂತಾನದಲ್ಲಿ ವಿವಾಹ ನಿಷಿದ್ಧವಾಗಿದೆ. ಪರಿವಾರ ಬಂಟರಿಗೆ ಸಾಂಪ್ರದಾಯಿಕವಾಗಿ ನಿರ್ದಿಷ್ಟ ಕುಲದೇವರು ಇಲ್ಲ. ಸ್ಥಳೀಯವಾಗಿ ಅಲ್ಲಲ್ಲಿನ ದೇವರು ಹಾಗೂ ದೈವಗಳಿಗೆ ನಡೆದುಕೊಳ್ಳುತ್ತಾರೆ. ಪರಿವಾರಬಂಟರ ವಿವಾಹ ಶಾಸ್ತ್ರಗಳಲ್ಲಿ ಪುರೋಹಿತರು ಭಾಗವಹಿಸುತ್ತಾರೆ. ಕೃಷಿಯು ಕುಲಕಸುಬಾದ ಪರಿವಾರಬಂಟರು ಬಿಸು, ಕುರಾಲ್, ಪೆಬಳ್, ಕಾವೇರಿ ಸಂಕ್ರಮಣ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿಯಂದು ಮನೆಯಲ್ಲಿ ದೇವರ ಮುಂದೆ ವಿವಿಧ ಬಗೆಯ ಹಣ್ಣುಗಳನ್ನಿಟ್ಟು ಪೂಜೆ ಮಾಡುವುದನ್ನು ಕಣಿ ಇಡುವುದು ಎನ್ನುತ್ತಾರೆ.

**ಪಂಬದ:** ಸಾಂಪ್ರದಾಯಿಕವಾಗಿ ತುಳುನಾಡಿನಲ್ಲಿ ಪ್ರಸಿದ್ಧವಾದ ಉಳ್ಳಾಕುಲು, ಅತ್ತಾವರದೆಯ್ಯಂಗಳು, ಕಿನ್ನಿಮಾನ–ಪೂಮಾನ ಮೊದಲಾದ ಅರಸುದೈವಗಳ ವೇಷ ಹಾಕುವವರು ಪಂಬದ ಕಲಾವಿದರು. ಇವರ ಮಹಿಳೆಯರೂ ಭೂತಾರಾಧನೆಯ ಸಂದರ್ಭದಲ್ಲಿ ನೆರವಾಗುತ್ತಾರೆ. ಪಂಬದರಲ್ಲಿ ಬೈಲ ಪಂಬದ ಹಾಗೂ ಬಡ್ಯ ಪಂಬದರೆಂಬ ಪಂಗಡಗಳಿವೆ. ಇವರು ಕೃಷಿ ಹಾಗೂ ಕೃಷಿಕೂಲಿಯನ್ನು ಮುಖ್ಯವಾಗಿ ಅವಲಂಬಿಸಿದವರಾಗಿದ್ದಾರೆ. ಇವರ ಮಾತೃಭಾಷೆ ತುಳು ಆಗಿದ್ದು, ಸಾಂಪ್ರದಾಯಿಕವಾಗಿ ಅಳಿಯ ಸಂತಾನ ಪದ್ಧತಿಯವರಾಗಿದ್ದಾರೆ. ಪಂಬಾದೇವಿ ಎಂಬಾಕೆ ತಮ್ಮ ಪೂರ್ವಜಳೆಂಬ ನಂಬಿಕೆ ಪಂಬದರದ್ದಾಗಿದೆ.

**ಬಂಟ:** ಇವರ ಮುಖ್ಯ ಕುಲವೃತ್ತಿ ಒಕ್ಕಲುತನ. ಆದ್ದರಿಂದ ಇವರನ್ನು ಒಕ್ಕೆಲಕುಲು ಎಂದು ಕರೆಯುತ್ತಿದ್ದರು. ಪ್ರವೃತ್ತಿಯಲ್ಲಿ ಕೆಲವೆಡೆ ಯೋಧರಾಗಿ (ಭಟ) ಕಾರ್ಯನಿರ್ವಹಿಸಿದುದರಿಂದ ಈ ಸಮುದಾಯಕ್ಕೆ ಬಂಟರೆಂಬ ವಿಶೇಷ ಹೆಸರು ಬಂದಿದೆ. ಇವರು ಪ್ರಾಂತೀಯ ಅರಸರಾಗಿ ಆಡಳಿತ ನಡೆಸಿದ್ದೂ ಉಂಟು. ಇವರಲ್ಲಿ ಕನ್ನಡ ಮಾತನಾಡುವ ಬಂಟರನ್ನು ನಾಡವರೆಂದೂ, ತುಳು ಮಾತನಾಡುವವರನ್ನು ಬಂಟರೆಂದೂ ಕರೆಯುತ್ತಾರೆ. ಬಂಟರು ತುಳುನಾಡಿನಲ್ಲಿ ಬಹು ಪ್ರಭಾವಶಾಲಿ ಸಮುದಾಯದವರಾಗಿದ್ದರೆಂದು ಗಣಪತಿರಾವ್ ಐಗಳು ಹೇಳಿದ್ದಾರೆ. ಆಳ್ವ, ರೈ, ಶೆಟ್ಟಿ, ಚೌಟ, ಬಲ್ಲಾಳ ಮೊದಲಾದ ಕುಲನಾಮಗಳು ಇವರಲ್ಲಿವೆ. ಇವರಲ್ಲಿ ಬಂಗೇರನ್ನಾಯ, ಕುಂಡಾರನ್ನ ಮೊದಲಾದ ೫೨ ಬಳಿಗಳು, ೯೩ ಕುಲನಾಮಗಳಿದ್ದು, ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಬಂಟರದು ಅಳಿಯಕಟ್ಟು ಪದ್ಧತಿಯಾಗಿದೆ. ಬಂಟರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲದ ಮುಖ್ಯಸ್ಥನನ್ನು ಗುರಿಕಾರ ಎನ್ನುತ್ತಾರೆ. ಗುರಿಕಾರ ವಾಸಿಸುವ ಮನೆಗೆ ಗುತ್ತು, ಬರ್ಕೆ, ಆರಂತಡ ಇತ್ಯಾದಿ ಹೆಸರುಗಳಿವೆ. ಈ ಮನೆಗಳು ಭವ್ಯವಾಗಿದ್ದು, ಸಾಂಪ್ರಾದಾಯಿಕ ಕೆತ್ತನೆ ಕೆಲಸಗಳಿಂದ ಕೂಡಿವೆ. ಬಂಟರಲ್ಲಿ ಕೂಸು ಹುಟ್ಟಿದಾಗ ೧೦ ದಿನಗಳ ಅಮೆ (ಸೂತಕ) ಆಚರಣೆ ಮಾಡುತ್ತಾರೆ. ಮೈನೆರೆದ ಹುಡುಗಿಗೆ ನಾಲ್ಕನೇ ದಿನ ಶುದ್ಧಿ ಸ್ನಾನವಾದಾಗ 'ಮದುಮಗಳ ಮದುವೆ' ಎಂಬ ಶಾಸ್ತ್ರ ಮಾಡುತ್ತಾರೆ. ಇವರಲ್ಲಿ ವಿವಾಹಾದಿ ಶಾಸ್ತ್ರಗಳು ಕುಲದ ಹಿರಿಯರ ಮಾರ್ಗದರ್ಶನದಲ್ಲಿ ಸಾಂಪ್ರದಾಯಿಕವಾಗಿ ನಡೆಯುತ್ತಿದ್ದವು. ಬಂಟರಲ್ಲಿಯೂ ಪುನರ್ವಿವಾಹಕ್ಕೆ ಅವಕಾಶವಿದೆ. ಇವರು ವೈದಿಕ ದೇವರುಗಳನ್ನೂ ಸ್ಥಳೀಯದೈವಗಳನ್ನೂ ಸಮಾನ ಭಕ್ತಿಯಿಂದ ಪೂಜಿಸುತ್ತಾರೆ. ಇವರ ಮನೆಗಳಲ್ಲಿ ಭೂತದ ಚಾವಡಿ ಅಥವಾ ಭೂತದ ಮಂಚ ಸಾಮಾನ್ಯವಾಗಿ ಇರುತ್ತದೆ.

**ಬ್ರಾಹ್ಮಣ:** ಕರಾವಳಿಯ ಬ್ರಾಹ್ಮಣರಲ್ಲಿ ಹವಿಕ, ಶಿವಳ್ಳಿ, ಕೋಟ, ಚಿತ್ಪಾವನ, ಸ್ಥಾನಿಕ, ಮೊದಲಾದ ವರ್ಗಗಳಿವೆ. ಹವಿಕ ಎಂಬುದು ಅಹಿಚ್ಛತ್ರ ಎಂಬುದರಿಂದ ಬಂದದ್ದಾಗಿದೆ. ಶಿವಳ್ಳಿ ಮತ್ತು ಕೋಟ ಎಂಬುವು ಅವರವರು ನೆಲೆನಿಂತ ಸ್ಥಳಗಳಿಂದ ಬಂದ ಹೆಸರಾಗಿವೆ. ಶಿವಳ್ಳಿ ಬ್ರಾಹ್ಮಣರು ಉಡುಪಿ ಜಿಲ್ಲೆಯ ಶಿವಳ್ಳಿ ಗ್ರಾಮದಲ್ಲಿ ಮೊದಲು ನೆಲೆಗೊಂಡವರು. ಶಿವಳ್ಳಿಯವರಲ್ಲಿ ಶಿವಳ್ಳಿ, ನಾಡಶಿವಳ್ಳಿ, ಕಂದಾವರ ಎಂಬ ಮೂರು ಪಂಗಡದವರಿದ್ದಾರೆ. ಹಾಗೆಯೇ, ಸ್ಮಾರ್ತ, ಭಾಗವತ ಮತ್ತು ಮಾಧ್ವ ಎಂಬ ಮೂರು ಸಂಪ್ರದಾಯದವರೂ ಇದ್ದಾರೆ. ಸ್ಥಾನಿಕ ಬ್ರಾಹಣರು ಶೈವಸಂಪ್ರದಾಯದವರಾಗಿದ್ದಾರೆ. ಹವಿಕರು ಮೂಲತ: ಕೃಷಿಕ ವೃತ್ತಿಯವರು. ಇತರರು ಹೋಟೆಲ್, ಬ್ಯಾಂಕ್, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿದ್ದಾರೆ. ಕೆಲವರು ಪೌರೋಹಿತ್ಯ ಹಾಗೂ ಅರ್ಚಕ ವೃತ್ತಿಯನ್ನು ಅವಲಂಬಿಸಿರುವುದೂ ಉಂಟು. ಬ್ರಾಹ್ಮಣರಲ್ಲಿ ಅತ್ರಿ, ಕಶ್ಯಪ, ಭಾರದ್ವಾಜ ಮೊದಲಾದ ಏಳು ಗೋತ್ರಗಳಿವೆ (ಕೋಟ ಬ್ರಾಹ್ಮಣರಲ್ಲಿ ಐದೇ ಗೋತ್ರಗಳು). ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಮೊದಲು ಸ್ಮಾರ್ತರಾಗಿದ್ದ ತ್ರಿಮತಸ್ಥರಲ್ಲಿ ಕೆಲವರು ಮಧ್ವಾಚಾರ್ಯರ ದ್ವೈತ ಮತಾವಲಂಬಿಗಳಾಗುವ ಮೂಲಕ ವೈಷ್ಣವರಾದರು. ಈ ಎಲ್ಲಾ ವರ್ಗಗಳಿಗೂ ತಮ್ಮದೇ ಆದ ಗುರುಮಠ, ಗುರುಪರಂಪರೆಗಳಿವೆ. (ಕೋಟ ಬ್ರಾಹ್ಮಣರಿಗೆ ಪ್ರತ್ಯೇಕ ಗುರುಮಠವಿಲ್ಲ. ಉಗ್ರನರಸಿಂಹ ಕುಲದೇವರನ್ನೇ ಗುರುವೆಂದು ಭಾವಿಸಿದ್ದಾರೆ). ಇವರು ತಮ್ಮ ಪುರೋಹಿತರ ಮಾರ್ಗದರ್ಶನದಲ್ಲಿ ಉಪನಯನ, ವಿವಾಹಾದಿ ಪೂರ್ವ ಸಂಸ್ಕಾರ ಹಾಗೂ ಶವಸಂಸ್ಕಾರ, ಶ್ರಾದ್ಧ ಇತ್ಯಾದಿ ಅಪರ ಸಂಸ್ಕಾರಗಳನ್ನು ವೈದಿಕ ಸಂಪ್ರದಾಯದಂತೆ ನಡೆಸುತ್ತಾರೆ.

**ಬಿಲ್ಲವ:** ಬಿಲ್ಲವರಿಗೆ ಪೂಜಾರಿ, ಬಿರುವ, ಬೈದ್ಯ ಎಂಬ ಹೆಸರೂ ಇವೆ. ಪ್ರಾಚೀನ ಕಾಲದಲ್ಲಿ ಬಿಲ್ಲು ಹಿಡಿದು ಬೇಟೆಯಾಡುತ್ತಿದ್ದುದರಿಂದ ಬಿಲ್ಲವರೆಂದೂ, ದೈವಗಳ ಪೂಜಾರಿಗಳಾದುದರಿಂದ ಪೂಜಾರಿಗಳೆಂದೂ ಹೆಸರು ಬಂದಿದೆ ಎನ್ನಲಾಗಿದೆ. ತಾಳೆ ಮತ್ತು ತೆಂಗಿನ ಮರಗಳ ಮೂರ್ತೆದಾರಿಕೆ, ಓಲೆಬೆಲ್ಲ ಮಾಡುವುದು ಇವರ ಸಾಂಪ್ರದಾಯಿಕ ವೃತ್ತಿಯಾಗಿದ್ದಿತು. ಕೋಟ್ಯಾನ್, ಬಂಗೇರ, ಸುವರ್ಣ, ಕುಕ್ಯಾನ್, ಪೆರ್ಗಡೆ, ಕರ್ಕೇರ, ಗುಜ್ಜೆಟ್ಟಿ, ಬುನ್ನಾನ್, ಬಾಗೆಟ್ಟಿ, ಅಂಚನ್, ಸಾಲಿಯಾನ್, ಅಮೀನ್, ಜತ್ತನ್ ಮೊದಲಾದುವು ಬಿಲ್ಲವರಲ್ಲಿನ ಬಳಿಗಳಾಗಿದ್ದು, ಒಂದೇ ಬಳಿಯಲ್ಲಿ ವಿವಾಹ ಸಂಬಂಧ ನಿಷಿದ್ಧವಾಗಿದೆ. ಇವರು ಅಳಿಯಕಟ್ಟು ಪದ್ಧತಿಯವರು. ಹಿಂದೆ ಜಾತಿ ಪಂಚಾಯಿತಿ ಸಕ್ರಿಯವಾಗಿದ್ದಿತು. ಜಾತಿಯ ಗುರಿಕಾರರ ಮಾರ್ಗದರ್ಶನದಲ್ಲಿಯೇ ವಿವಾಹಾದಿ ಪದ್ಧತಿಗಳು ನೆರವೇರುತ್ತಿದ್ದವು. ಈಗ ಇವರದೇ ಸಮುದಾಯದ ಕೆಲವರು ವೈದಿಕ ಮಂತ್ರಾದಿಗಳನ್ನು ಅಭ್ಯಾಸ ಮಾಡಿ ತಮ್ಮ ಸಮಾಜದವರ ಶುಭಶೋಭನಾದಿಗಳನ್ನು ನಡೆಸಿಕೊಡುವುದೂ ಉಂಟು. ಶವವನ್ನು ಹೂಳುವುದು ಹಿಂದಿನ ಸಂಪ್ರದಾಯವಾಗಿದ್ದಿತು; ಈಗ ಸುಡುತ್ತಾರೆ. ಕೋಟಿ–ಚೆನ್ನಯರು ಬಿಲ್ಲವ ಸಮುದಾಯದ ಸಾಂಸ್ಕೃತಿಕ ವೀರರು, ಇವರ ಆರಾಧ್ಯ ದೈವಗಳಾಗಿದ್ದಾರೆ. ವಿವಿಧ ದೇವತೆಗಳನ್ನಲ್ಲದೆ ಈಚಿನ ದಿನಗಳಲ್ಲಿ ನಾರಾಯಣ ಗುರು ಅವರನ್ನು ಇವರು ವಿಶೇಷವಾಗಿ ಆರಾಧಿಸುತ್ತಾರೆ.

ಮಲೆಯಾಳಿ ಬಿಲ್ಲವರನ್ನು ತೀಯಾ ಎಂದು ಕರೆಯುತ್ತಾರೆ. ಮೂಲದಲ್ಲಿ ಇವರೂ ತೆಂಗು, ತಾಳೆ ಮರಗಳಿಂದ ಸೇಂದಿ ತೆಗೆಯುವುದು, ಬೆಲ್ಲ ಮಾಡುವುದು, ಉರಿವ ಬಾಣಗಳನ್ನು ಎಸೆದು ಬೇಟೆಯಾಡುವುದು ಇತ್ಯಾದಿ ವೃತ್ತಿ ಮಾಡುತ್ತಿದ್ದರು. ಮಲೆಯಾಳಿ ಮಾತೃ ಭಾಷೆಯ ಇವರಲ್ಲಿ ನೆಲ್ಲಿಕತೀಯ, ಪಡಂ ಗುಡಿಯ, ಬಾತೀಯ ಮೊದಲಾದ ಬಳಿಗಳಿವೆ. ಏಯನಾಡುಕುಲದನ್, ಭಗವತಿ ಮೊದಲಾದ ದೇವತೆಗಳನ್ನು ಇವರು ಆರಾಧಿಸುತ್ತಾರೆ.

**ಬೋವಿ:** ಮೋಯರ್ ಎಂಬ ಹೆಸರೂ ಹೊಂದಿರುವ ಬೋವಿಗಳು ಅಬ್ಬಕ್ಕರಾಣಿಯ ಕಾಲದಲ್ಲಿ ಪಲ್ಲಕ್ಕಿ ಹೊರುವ ಕಾರ್ಯಮಾಡುತ್ತಿದ್ದರಂತೆ. ಇವರು ಮೀನುಗಾರ ವೃತ್ತಿಯವರು. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಕುಲದ ಮುಖ್ಯಸ್ಥನನ್ನು ಗುರಿಕಾರ ಎನ್ನುತ್ತಾರೆ. ಬಯಕರ ಮೋಯ, ಉಳ್ಳಾಡ, ಊನುಮೋಯ, ಎರೋಡಿ, ಕೊಡುಕಾಟ್, ಬಿಲಿಮಾತ್, ಚಕ್ಕಕೂಟ, ಚೆರೂಪುಮೋಯ, ಕರಿಪತ್ ಕಿರಿಯ ಇತ್ಯಾದಿ ೪೪ ಬಳಿಗಳು ಇವರಲ್ಲಿವೆ. ಒಂದೇ ಬಳಿಯಲ್ಲಿ ವಿವಾಹ ಸಂಬಂಧ ಮಾಡುವುದು ನಿಷಿದ್ಧವಾಗಿದೆ. ಇವರ ಮಾತೃಭಾಷೆ ಮೋಯ (ಮಲಯಾಲಂನ ಒಂದು ಅಪಭ್ರಂಶ ರೂಪ). ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಅಮೆ ಆಚರಿಸುತ್ತಾರೆ. ಗುರಿಕಾರರ ಮಾರ್ಗದರ್ಶನದಲ್ಲಿ ವಿವಾಹ ಮತ್ತಿತರ ಸಂಪ್ರದಾಯಗಳು ನೆರವೇರುತ್ತವೆ. ಶವಸಂಸ್ಕಾರದ ಸಂದರ್ಭದಲ್ಲಿ ಮೃತನು ಬಳಸುತ್ತಿದ್ದ ಕೆಲವು ವಸ್ತುಗಳನ್ನು ಶವದೊಂದಿಗೆ ಇರಿಸುವ ಪದ್ಧತಿ ಬೋವಿಗಳಲ್ಲಿಯೂ ರೂಢಿಯಲ್ಲಿದೆ. ಇವರು ಭಗವತಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ.

**ಬೈರ:** ಇವರು ಘಟ್ಟ ಪ್ರದೇಶಗಳಿಂದ ತುಳುನಾಡಿಗೆ ವಲಸೆ ಬಂದು ನೆಲೆನಿಂತವರು. ಬಿದಿರು, ಬೆತ್ತಗಳಿಂದ ಬುಟ್ಟಿ ಹೆಣೆಯುವುದು, ಜೇನು ಮತ್ತಿತರ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು, ಸುಣ್ಣದಕಲ್ಲು ಸುಡುವುದು ಇವರ ಮೂಲ ವೃತ್ತಿಯಾಗಿದ್ದವು. ಕಾಲಭೈರವನನ್ನು ಇವರು ವಿಶೇಷವಾಗಿ ಆರಾಧಿಸುತ್ತಾರೆ. ಇವರ ಕನ್ನಡವು ವಿಶಿಷ್ಟವಾದ ಆಡು ಭಾಷೆಯಾಗಿದೆ. ಬೈರರಲ್ಲಿ ಕುಂಬ್ರಿ, ಒಟ್ಟೆಮಂಡ್ರ (ಒತ್ತೆ ಮುಂಡೂರು), ಕಳ್ಯಾರು, ಬಾಳೆಪುಣಿ, ಕಲ್ಲಪಾಪು, ಚಾಳ್ಯ, ಗುಂಡ, ನೆಕ್ರಾಜೆ, ಪೆರಾರ್ತೆ ಬೈಲು, ಬೆಳ್ಳಾರೆ, ಪೆರ್‌ವಾಯ, ನಂದರು ಹಾಗೂ ಕನ್ನಡ ಎಂಬ ೧೩ ಬಳಿಗಳಿವೆ. ಇವರಲ್ಲಿ ಮುಖಂಡನು ತನ್ನ ನೆರವಿಗಾಗಿ ಗುರ್ಕಾರ ಮತ್ತು ಬುದ್ಧಿವಂತ, ಸಹಾಯಕ ಬುದ್ಧಿವಂತ (ಒತ್ತುಗೌಡ), ಮೊಕರಿ (ಸಭೆಯ ವಿಚಾರ ತಿಳಿಸುವವ)ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ಹಾಗೂ ಒಕ್ಕಲನ್ನು ಅನ್ವಯಿಸಿ ೯ ಒಕ್ಕಲು ಗುರ್ಕಾರ, ೧೮ ಒಕ್ಕಲು ಗುರ್ಕಾರ, ಗುಡಿಗುರ್ಕಾರ, ಪೆರ್ವಾಯ ಗುರ್ಕಾರ ಎಂದೂ ವಿಭಾಗಿಸಲಾಗಿರುತ್ತದೆ.

**ಭಂಡಾರಿ:** ಅಳಿಯ ಸಂತಾನ ಪದ್ಧತಿಯ ಇವರಲ್ಲಿ ಗುಜ್ಜರನ್ನಾಯ, ಬಂಗಾರನ್ನಾಯ, ಕುಂದರನ್ನಾಯ, ಉಪ್ಪರನ್ನಾಯ ಮೊದಲಾದ ಬಳಿಗಳಿವೆ. ಇತರರ ಹಾಗೆ ಇವರಲ್ಲಿಯೂ ಹುಟ್ಟು, ಸಾವು ಮೊದಲಾದವುಗಳಲ್ಲಿ ಅಮೆ ಆಚರಣೆ ಇದೆ. ವಿವಾಹಾದಿ ಕಾರ್ಯಗಳನ್ನು ಈಚೆಗೆ ಪುರೋಹಿತರು ನಡೆಸಿಕೊಡುವುದುಂಟು. ತೆನೆಹಬ್ಬ, ಕೆಡ್ಡಸ, ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಊರಿನ ಇತರರು ಪೂಜಿಸುವ ದೇವರು ಹಾಗೂ ದೈವಗಳಿಗೇ ಇವರೂ ನಡೆದುಕೊಳ್ಳುತ್ತಾರೆ. ಅಳಿಯ ಕಟ್ಟು ಪದ್ಧತಿಯವರ ಶುಭಾಶುಭ ಆಚರಣೆಗಳಲ್ಲಿ ಇವರಿಗೆ ಕೆಲವು ವಿಶೇಷ ಕಾರ್ಯಗಳಿರುತ್ತವೆ.

**ಮರಾಠ:** ಮರಾಠ ಅಥವಾ ಮರಾಠ ಕ್ಷತ್ರಿಯರು ಮಹಾರಾಷ್ಟ್ರದಿಂದ ಬೇಕಲ ಕೋಟೆಗೆ ಬಳಿಕ ದಕ್ಷಿಣಕನ್ನಡ ಜಿಲ್ಲೆಗೆ ಬಂದು ನೆಲೆಸಿದವರು. ಸಾಂಪ್ರದಾಯಿಕವಾಗಿ ಇವರು ಕೃಷಿ ಕಸುಬು ಮಾಡುವವರು. ಪವಾರ್, ಬಹುಮಾನ್, ಲಾಡ್, ಬೋಂಸ್ಲೆ, ಚವ್ಹಾಣ, ಬ್ಯಾನರ್ಜಿ ಮೊದಲಾದ ಉಪನಾಮಗಳು ಇವರಲ್ಲಿ ಇವೆ. ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರ ಮಾತೃ ಭಾಷೆ ಮರಾಠಿ. ಇವರಲ್ಲಿ ಮಗು ಹುಟ್ಟಿದ ೧೧ ದಿನಕ್ಕೆ ಶುದ್ಧವಾಗುವ ಶಾಸ್ತ್ರವಿದೆ. ದೇವಸ್ಥಾನದಿಂದ ತಂದ ತೀರ್ಥವನ್ನು ಸ್ವೀಕರಿಸಿ, ಮಡಿವಾಳ್ತಿಯು ತಂದುಕೊಟ್ಟ ಮಡಿವಸ್ತ್ರ ಮುಟ್ಟುವ ಮೂಲಕ ಶುದ್ಧವಾಗುವ ಕ್ರಮ ಅನುಸರಿಸುತ್ತಾರೆ. ಋತುಮತಿಯಾದಾಕೆಯನ್ನು ಮೂರು ದಿನ ಪ್ರತ್ಯೇಕ ಇರಿಸುತ್ತಾರೆ. ವೈದಿಕ ಸಂಪ್ರದಾಯದಂತೆ ವಿವಾಹ, ಶವಸಂಸ್ಕಾರ ವಿಧಿಗಳು ನಡೆಯುತ್ತವೆ. ತಪ್ಪು ಮಾಡಿದವರಿಗೆ ವಿಧಿಸುತ್ತಿದ್ದ 'ಸುಡುಸುದ್ಧ' ಕ್ರಮ ಇವರಲ್ಲಿಯೂ ಇದ್ದಿತು. ಮರಾಠಿ ಕ್ಷತ್ರಿಯರು ಇತರ ಹಿಂದೂಗಳು ಆಚರಿಸುವ ಯುಗಾದಿ, ದೀಪಾವಳಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಪಿತೃಪಕ್ಷದಲ್ಲಿ ಪುರೋಹಿತರಿಂದ ಹೋಮ ಇತ್ಯಾದಿ ಮಾಡಿಸುತ್ತಾರೆ. ಅಂಬಾಭವಾನಿ ಇವರ ಕುಲದೇವತೆ. ಗುಳಿಗ, ನಾಗ ಮತ್ತಿತರ ದೈವಗಳಿಗೂ ಇವರು ನಡೆದುಕೊಳ್ಳುತ್ತಾರೆ.

**ಮಲೆಕುಡಿಯ:** ಒಂದೇ ತಾಯ ಮೊಲೆ ಕುಡಿದು ಬೆಳೆದ ಗಂಡು, ಹೆಣ್ಣುಗಳ ದಾಂಪತ್ಯದಿಂದ ಹುಟ್ಟಿದವರಾದ್ದರಿಂದ ನಮಗೆ ಮಲೆಕುಡಿಯರು ಎಂಬ ಹೆಸರು ಬಂದಿತೆಂಬ ಕತೆ ಹೇಳುವ ಮಲೆಕುಡಿಯರು ಮೂಲತಃ ಮಲೆಗಳನ್ನು ಆಶ್ರಯಿಸಿ ಬದುಕುತ್ತಿದ್ದವರು. ಕೆಲವು ದಶಕಗಳಿಂದೀಚೆಗೆ ಕಾಡು ಬಿಟ್ಟು ನಾಡಿಗರಾಗಿದ್ದಾರೆ. ಅರಣ್ಯ ಪರಿಸರದಲ್ಲಿ ಬೇಟೆ ಆಡಿ ಹಾಗೂ ಗೆಡ್ಡೆಗೆಣಸು ತಿಂದು ಜೀವನ ನಡೆಸುತ್ತಿದ್ದ ಇವರು ಹೊರಗಿನ ಜನಸಂಪರ್ಕ ಆದಮೇಲೆ ಬೆತ್ತದ ಹೆಣಿಗೆ, ಕಾಡುತ್ಪನ್ನಗಳ ಸಂಗ್ರಹದ ಮಾರಾಟ, ಕೃಷಿ, ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಇತ್ಯಾದಿಗಳಲ್ಲಿ ತೊಡಗಿಕೊಂಡಿದ್ದಾರೆ. ಬಂಗೇರ, ಬಳಸ್ಯರೆ, ಮೂಲ್ಯರೆ, ಗುಂಡೇರಿ ಮೊದಲಾದ ಬರಿ(ಳಿ)ಗಳು ಇವರಲ್ಲಿ ಇದ್ದು, ಒಂದೇ ಬರಿ(ಳಿ)ಯಲ್ಲಿ ವಿವಾಹ ನಿಷಿದ್ಧವಾಗಿದೆ. ಇವರು ಅಳಿಯಕಟ್ಟು ಸಂಪ್ರದಾಯದವರು. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಮುಖ್ಯಸ್ಥನನ್ನು "ಗೌಡ್ರು" ಎಂದು ಕರೆಯುತ್ತಾರೆ. ಪರಮೇಶ್ವರನು ತಮ್ಮ ಕುಲದೇವರು ಎಂದು ನಂಬಿರುವ ಮಲೆಕುಡಿಯರು ಪಂಜುರ್ಲಿ, ವರ್ಣಾರ ಪಂಜುರ್ಲಿ, ಕಲ್ಲುರ್ಟಿ, ಗುಳಿಕ ಮೊದಲಾದ ಭೂತದೈವಗಳನ್ನೂ ಆರಾಧಿಸುತ್ತಾರೆ. ತಿರುಪತಿಯ ಭಕ್ತರೂ ಆದ ಇವರು ದಾಸಯ್ಯನನ್ನು ಕರೆಸಿ, ವೆಂಕಟರಮಣನನ್ನು ಪೂಜಿಸುವ "ಹರ್‌ಸಾಯ" (ಹರಿಸೇವೆ) ವನ್ನೂ ಮಾಡುತ್ತಾರೆ.

**ಮುಗೇರ:** ತುಳುನಾಡಿನಾದ್ಯಂತ ಕಾಣಬರುವ ಮುಗೇರರು ಹಿಂದೆ ಊರ ಹೊರಗೆ, ಕಾಡಿನ ಪರಿಸರದ ಗುಡ್ಡದ ಬದಿಗಳಲ್ಲಿ ವಾಸಿಸುತ್ತಿದ್ದವರು. ಬೇಟೆ ಆಡುವುದು, ಕಳ್ಳು ಇಳಿಸುವುದು, ಕೃಷಿ ಕೂಲಿ ಮಾಡುವುದು ಮೊದಲಾದವು ಇವರ ಮುಖ್ಯ ವೃತ್ತಿಗಳಾಗಿದ್ದವು. ಇವರ ಮಾತೃಭಾಷೆ ತುಳು. ಮುಗೇರರನ್ನು ಪ್ರಾದೇಶಿಕವಾಗಿ ಮೇರ, ಮುಗ್ಗೇರ, ಮೊಗೇರ, ಮುಗರ ಮೊದಲಾದ ಹೆಸರುಗಳಿಂದಲೂ ಗುರುತಿಸುತ್ತಾರೆ. ಮುಗೇರ ಜಾತಿಯವರಲ್ಲಿ ಹುಟ್ಟುವ ಅವಳಿಗಳಿಗೆ ಸಾಮಾನ್ಯವಾಗಿ ಮುದ್ದ–ಕಳಲ ಎಂಬ ಹೆಸರಿಡುವುದು ಪದ್ಧತಿಯಾಗಿದೆ. ಮುಗೇರರಲ್ಲಿ ಅರ್ಪುದನ್ನ, ಉಪ್ಪೆನ್ನೆ, ಎರದಣ್ಣ, ಕೊರ್ಮೆರ್, ಬಂಗೇರ, ಮಂಜದಣ್ಣ, ಮಾರದಣ್ಣ, ಮರ್ದೆರ್ ಮೊದಲಾದ ಬಳಿಗಳಿವೆ. ಇವರು ಅಳಿಯಕಟ್ಟು ಪದ್ಧತಿಯವರು. ಸಾಂಸ್ಕೃತಿಕ ವೀರರಾದ ಮುಗೇರ್ಲು ದೈವಗಳನ್ನು ಇವರು ತಮ್ಮ ಹಿರಿಯರೆಂದು ನಂಬಿ, ಅವರ ಪ್ರತೀಕವಾಗಿ ಬಿಲ್ಲು–ಬಾಣ ಹಾಗೂ ಕತ್ತಿಗಳನ್ನು ಇಟ್ಟು ಪೂಜಿಸುತ್ತಾರೆ. ಮುಗೇರ್ಲ ಕೋಲವನ್ನು ವಾರ್ಷಿಕವಾಗಿ ಆಚರಿಸುತ್ತಾರೆ.

**ಮೊಗವೀರ:** ಮೊಗವೀರರು (ತುಳುವಿನಲ್ಲಿ ಮರಕಲರು) ಮೀನುಗಾರಿಕೆಯನ್ನು ಕುಲಕಸುಬಾಗಿ ಹೊಂದಿದವರು. ಇವರ ಮಾತೃಭಾಷೆ ತುಳು. ಇವರಲ್ಲಿ ಅಮೀನ್, ಪುತ್ರನ್, ಸಾಲ್ಯಾನ್, ಕರ್ಕೇರ, ತಿಂಗಳಾಯ, ಕಾಂಚನ್, ವೀಂಡನ್, ಸುವರ್ಣ, ಕೋಟ್ಯಾನ್, ಬಂಗೇರ, ಕುಂದರ್, ಕಂಗೆನ್ ಮೊದಲಾದ ಬಳಿಗಳಿವೆ. ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧವಾಗಿದೆ. ಇವರು ಅಳಿಯಸಂತಾನ ಕಟ್ಟಳೆಯವರು. ವಿವಾಹಾದಿಗಳು ಊರ ಗುರಿಕಾರರ ನೇತೃತ್ವದಲ್ಲಿ ನಡೆಯುವುದು ಪದ್ಧತಿಯಾಗಿದೆ. ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ತುಳು ಪದ್ಧತಿಯಂತೆ ಶಾಸ್ತ್ರಾಚರಣೆಗಳನ್ನು ಮಾಡುತ್ತಾರೆ. ಇವರಲ್ಲಿ ಶವಕ್ಕೆ ಅಗ್ನಿಸಂಸ್ಕಾರ ಮಾಡುತ್ತಾರೆ. ೧೨ನೇ ದಿನ ಚಿತಾಭಸ್ಮವನ್ನು ನದಿ ಅಥವಾ ಸಮುದ್ರದಲ್ಲಿ ವಿಸರ್ಜಿಸುತ್ತಾರೆ. ಮೊಗವೀರರು ಇತರರ ಹಾಗೆ ಅಷ್ಟಮಿ, ಚೌತಿ, ದಸರ, ದೀಪಾವಳಿ, ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ ಮತ್ತು ದೇವರು ಹಾಗೂ ದೈವಗಳಿಗೆ ನಡೆದುಕೊಳ್ಳುತ್ತಾರೆ. ಮುಂಗಾರು ಮಳೆ ಮುಗಿದು, ಆಗಸ್ಟ್‌ನಲ್ಲಿ ಮೀನುಗಾರಿಕೆ ಪ್ರಾರಂಭಿಸುವ ಮುನ್ನ ಕದ್ರಿಯ ಜೋಗಿಮಠದ ಗುರುಗಳ ನೇತೃತ್ವದಲ್ಲಿ ಸಮುದ್ರಕ್ಕೆ ಹಾಲು ಎರೆವ ಆಚರಣೆ ಮೊಗವೀರರಲ್ಲಿದೆ.

**ಮ್ಯಾಲ:** ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲೂಕುಗಳಲ್ಲಿ ಕಾಣಬರುವ ಮ್ಯಾಲರನ್ನು ಸ್ಥಳೀಯವಾಗಿ ಇತರರು ದಿಕ್ಕನಕುಲು, ಹೊಲೆಯ ಎಂದೂ ಗುರುತಿಸುತ್ತಾರೆ. ಇವರಲ್ಲಿ ಮಲೆಯಾಳಿ ಮ್ಯಾಲರು, ತುಳು ಮ್ಯಾಲರು ಹಾಗೂ ಕಜೆ ಮ್ಯಾಲರು ಎಂದು ಮೂರು ಪ್ರಭೇದಗಳಿವೆ.

ಇವರಲ್ಲಿ ಪರಸ್ಪರ ತರ–ತಮಗಳಿವೆ ಎಂದು ಭಾವಿಸಲಾಗಿದೆ. ತುಳು ಮ್ಯಾಲರನ್ನು ಕೆಲವೆಡೆ ಕೋಟೆ ಮ್ಯಾಲ ಎಂದೂ ಕರೆಯುತ್ತಾರೆ. ಒಂದು ಕಾಲಕ್ಕೆ ತಮ್ಮ ಪೂರ್ವಿಕರು ಕೋಟೆ ಕಟ್ಟಿ ಆಳ್ವಿಕೆ ನಡೆಸಿದವರೆಂದು ಇವರು ಹೇಳಿಕೊಳ್ಳುತ್ತಾರೆ. ಕಾಡಿನ ತಪ್ಪಲಲ್ಲಿ ವಾಸಿಸುವ ಮ್ಯಾಲರು ಕೃಷಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಬಂಗೆರೆ ಬರಿ, ಎಲೆಕಣ್ಣೆ ಬರಿ, ನಾಯರೆಬರಿ ಮೊದಲಾದ ಬರಿಗಳು ಮ್ಯಾಲರಲ್ಲಿವೆ. ಇವರಲ್ಲಿ ಜಾತಿ ಪಂಚಾಯಿತಿ ಇದ್ದು, ಮನೆಯ ಹಕ್ಕು ತಂದೆಯಿಂದ ಹಿರಿಯ ಮಗನಿಗೆ ಬರುತ್ತದೆ. ತಮ್ಮ ಕುಲದೇವರುಗಳನ್ನು ಇಟ್ಟುಕೊಂಡ ಮನೆಯನ್ನು ಐನ್‌ಮನೆ ಎನ್ನುತ್ತಾರೆ. ಇವರಲ್ಲಿ ವಿಧವಾ ವಿವಾಹ, ವಿವಾಹ ವಿಚ್ಛೇದನಗಳಿಗೆ ಅವಕಾಶವಿದೆ. ಮಗು ಹುಟ್ಟಿದಾಗ, ಮೈನೆರೆದಾಗ ಐದು ದಿನಗಳವರೆಗೆ ಹೊಲೆ ಆಚರಿಸುತ್ತಾರೆ. ಸತ್ತಾಗ ೧೧ನೇ ದಿನಕ್ಕೆ ಬೊಜ್ಜ ಆಚರಣೆ, ೧೬ದಿನಕ್ಕೆ ಕುಲೆಗೆ ಸೇರಿಸುವುದು ಮಾಡುತ್ತಾರೆ. ಇವರು ಮಂಜ ಎಂಬ ಕುಲ ದೈವವಲ್ಲದೆ, ಕಲ್ಲುಡ, ಕಲ್ಲುರ್ಟಿ, ಗುಳಿಗ ಮೊದಲಾದ ಭೂತಗಳಿಗೂ ನಡೆದುಕೊಳ್ಳುತ್ತಾರೆ. ಬಿಸು, ದೀಪಾವಳಿ, ಕೆಡ್ಡಸದಂತಹ ಹಬ್ಬಗಳನ್ನು ಮಾಡುತ್ತಾರೆ.

**ರಾಮಕ್ಷತ್ರಿಯ:** ಇವರು ಶಿಲಾಹಾರಕ್ಷತ್ರಿಯ ಮೂಲದವರೆಂದೂ, ಕಾಲಾಂತರದಲ್ಲಿ ಕೊಂಕಣವನ್ನು ತೊರೆದ ಈ ಕ್ಷತ್ರಿಯರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಕೋಟೆ ಪಾಲಕರಾಗಿ ನೆಲೆನಿಂತರೆಂದೂ ಹೇಳಲಾಗುತ್ತದೆ. ಆದ್ದರಿಂದ ಇವರಿಗೆ ಕೋಟೆಕ್ಷತ್ರಿಯ ಅಥವಾ ಕೋಟೆಯವರೆಂಬ ಹೆಸರೂ ಇವೆ. ಇತರ ಕ್ಷತ್ರಿಯ ವರ್ಗದವರಿಂದ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವುದಕ್ಕಾಗಿ ಕುಲದೇವರಾದ ರಾಮನಾಥ ಹೆಸರಿನಲ್ಲಿ ತಮ್ಮ ವರ್ಗಕ್ಕೆ ರಾಮಕ್ಷತ್ರಿಯರೆಂಬ ಹೆಸರಾಯಿತೆಂದೂ ಹೇಳುತ್ತಾರೆ. ಕೃಷಿ ಹಾಗೂ ಕೋಟೆಗಳ ರಕ್ಷಣೆ ಇವರ ಮೂಲ ವೃತ್ತಿಯಾಗಿದ್ದಿತು. ಇವರಲ್ಲಿ ವಿಶ್ವಾಮಿತ್ರ ಭಾರದ್ವಾಜ, ಜಮದಗ್ನಿ ಮೊದಲಾದ ೧೨ ಗೋತ್ರಗಳಿವೆ. ಮಿಜ್ಜಿ, ವಳ್ಳೆಣ್ಣೆ ಸಕ್ಕರೆ, ಗೌಡೆ ಮೊದಲಾದ ಪಂಗಡಗಳೂ ಇವೆ. ಸ್ಮಾರ್ತ ಸಂಪ್ರದಾಯದ ಇವರು ರಾಮನಾಥ (ಶಿವ) ಮತ್ತು ದೇವಿಯರ ವಿವಿಧ ರೂಪಗಳನ್ನು ಕುಲದೇವರಾಗಿ ಪೂಜಿಸುತ್ತಾರೆ. ಇವರು ಮನೆಯಲ್ಲಿ ಸಾಮಾನ್ಯವಾಗಿ ಗ್ರಾಮ್ಯ ಕನ್ನಡವನ್ನು ಮಾತನಾಡುತ್ತಾರೆ. ವೈದಿಕ ವಿಧಿ ವಿಧಾನದಂತೆ ಇವರ ಸಂಸ್ಕಾರಾದಿಗಳು ನಡೆಯುತ್ತವೆ.

**ವಿಶ್ವಕರ್ಮ:** ವಿಶ್ವಬ್ರಾಹ್ಮಣ, ಆಚಾರರು, ಪಾಂಚಾಳರು ಮೊದಲಾದ ಹೆಸರುಗಳೂ ಇರುವ ವಿಶ್ವಕರ್ಮರು ತಮ್ಮನ್ನು ಭಾವನಾ ಋಷಿಯ ವಂಶೀಕರೆಂದು ಗುರುತಿಸಿಕೊಳ್ಳುತ್ತಾರೆ. ಆನೆಗೊಂದಿ ಮಠದ ಸ್ವಾಮಿಯಿಂದ ಕರಾವಳಿ ಕರ್ನಾಟಕದಲ್ಲಿ ವಿಶ್ವಕರ್ಮ ಪಂಥ ಪ್ರಚುರಗೊಂಡಿತೆನ್ನಲಾಗಿದೆ. ಜಿಲ್ಲೆಯಲ್ಲಿ ಗ್ರಾಮಕ್ಕೊಂದರಂತೆ ಈ ಜಾತಿಯವರ ಕೂಡುವಳಿಕೆ ಇದ್ದು, ಅದರ ಮುಖ್ಯಸ್ಥನನ್ನು ಗುರಿಕಾರನೆಂದು ಕರೆಯಲಾಗುತ್ತದೆ. ಆತ ಜಾತಿ ಪಂಚಾಯಿತಿಯನ್ನು ನಡೆಸುವ ಅಧಿಕಾರವನ್ನೂ ಹೊಂದಿದ್ದನು. ವಿಶ್ವಕರ್ಮರಲ್ಲಿ ಸಾನಗ, ಸನಾತನ, ಅಹಭೂವನ, ಪ್ರಾತ್ನಸ ಮತ್ತು ಸುಪರ್ಣಸ ಎಂಬ ಗೋತ್ರಗಳಿದ್ದು ಇವರು ಕಬ್ಬಿಣ, ಶಿಲೆ, ಚಿನ್ನ ಮೊದಲಾದ ವಸ್ತುಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ವೃತ್ತಿಗಳನ್ನು ಮಾಡುವವರಾಗಿದ್ದಾರೆ. ಇವರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಇವರು ಮಕ್ಕಳಕಟ್ಟು ಪದ್ಧತಿಯನ್ನು ಪಾಲಿಸುತ್ತಾರೆ. ವಿವಾಹ ಮತ್ತಿತರ ಕೆಲವು ಆಚರಣೆಗಳಲ್ಲಿ ಸೋದರಮಾವನಿಗೆ ಆದ್ಯತೆ ಇರುತ್ತದೆ. ಹುಟ್ಟು, ಸಾವು ಮತ್ತು ಮೈನೆರೆದ ಸಂದರ್ಭಗಳಲ್ಲಿ ನಿಗದಿತ ದಿನಗಳವರೆಗೆ ಮೈಲಿಗೆ ಆಚರಿಸುತ್ತಾರೆ. ಸ್ವಜಾತಿ ಪುರೋಹಿತರು ಇವರ ಧಾರ್ಮಿಕವಿಧಿಗಳನ್ನು ನಡೆಸಿಕೊಡುತ್ತಾರೆ. ಜಿಲ್ಲೆಯ ವಿಶ್ವಕರ್ಮರು ಕಲ್ಲುಡ–ಕಲ್ಲುರ್ಟಿ ಮೊದಲಾದ ದೈವಗಳನ್ನು ಆರಾಧಿಸುತ್ತಾರೆ. ಕಾಳಮ್ಮ ಅಥವಾ ಕಾಳಿಕಾಂಬೆಯನ್ನು ಕುಲದೇವತೆಯೆಂದು ಪೂಜಿಸುತ್ತಾರೆ; ವಿಶ್ವಕರ್ಮನನ್ನು ಪರಬ್ರಹ್ಮನೆಂದು ನಂಬಿದ್ದಾರೆ. ಶಾಕ್ತಪಂಥದವರಾದ ಇವರು ನವರಾತ್ರಿಯಲ್ಲಿ ವಿಶೇಷ ಪೂಜೆ–ಆರಾಧನೆ ನಡೆಸುತ್ತಾರೆ. ತಿರುಪತಿ ತಿಮ್ಮಪ್ಪನಿಗೆ ಮುಡಿಪು ಕಟ್ಟುವ ಪದ್ಧತಿಯೂ ಇದೆ. ದೀಪಾವಳಿ, ಋಗುಪಾಕರ್ಮ, ಉತ್ಥಾನದ್ವಾದಶಿ ಮತ್ತಿತರ ಹಬ್ಬಗಳನ್ನು ಆಚರಿಸುತ್ತಾರೆ.

**ಶಾಲಿಯಾ:** ಬಟ್ಟೆ ನೇಕಾರಿಕೆಯನ್ನು ಕುಲಕಸುಬಾಗಿ ಹೊಂದಿದ ಶಾಲಿಯಾಗಳಿಗೆ ಚಾಲಿಯಾ, ತಾಲಿಯಾ, ಶಾಲೆ, ಸಾಲಿ ಮೊದಲಾದ ಹೆಸರುಗಳೂ ಇವೆ. ಅಳಿಯಕಟ್ಟು ಪದ್ಧತಿಯವರಾದ ಇವರಲ್ಲಿ ಅಂಚಾರಿ, ಬಡಿಯಾರಿ, ಕೊಂಕಣಿ, ತಾರ್‌ರ್‌ಟಿ, ಮೊರಂಡ, ಕೂವಕ್ಕಾಡ್, ಮಾಂಗಿ, ಚೋಯಿಯಾಂಡಿ, ಕೇಕಡತ್ (ಕೇಕಡ್), ಪಡಿಂಞಗಾರ್, ಕೊಟ್ಟಾರಿಲ್ಲಂ, ಕೊಟ್ಟುಂವೀಡುಂ, ನರಪ್ಪಟ್ಟಿ, ಪದುಕುಡಿ, ತೊರಪ್ಪಾರ್, ಚಂದಾರಿ, ಕುವರ್‌ಟ, ಇಂಡಮಾರ್ ಎಂಬ ೧೮ ಬಳಿಗಳಿವೆ. ಶಾಲಿಯಾಗಳ ಹುಟ್ಟು, ಸಾವು ಮೊದಲಾದ ಜೀವನಾವರ್ತನದ ಆಚರಣೆಗಳಲ್ಲಿ ಕೆಲವು ವಿಶಿಷ್ಟ ಸಂಪ್ರದಾಯಗಳಿರುವುದು ಉಲ್ಲೇಖನೀಯವಾಗಿದೆ. ಭಗವತಿಯನ್ನು ಕುಲದೇವರೆಂದು ಪೂಜಿಸುವ ಇವರು ಓಣಂ ಮತ್ತು ವಿಷುಗಳನ್ನು ವಿಶೇಷ ಹಬ್ಬಗಳಾಗಿ ಆಚರಿಸುತ್ತಾರೆ.

**ಸಾರಸ್ವತ, ಗೌಡ ಸಾರಸ್ವತ ಬ್ರಾಹ್ಮಣ:** ಸಾರಸ್ವತರು ಸು.೧೭–೧೮ನೇ ಶತಮಾನದಲ್ಲಿ ಗೋವಾ ಭಾಗದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬಂದವರು. ಸಾರಸ್ವತ ಬ್ರಾಹ್ಮಣರಲ್ಲಿ ಚಿತ್ರಾಪುರ, ಸಾರಸ್ವತ, ಗೌಡ ಸಾರಸ್ವತ, ಕುಡಾಲ ದೇಶಸ್ಥ ಸಾರಸ್ವತ ಎಂಬ ವಿಭಾಗಗಳಿವೆ. ರತ್ನಗಿರಿ ಜಿಲ್ಲೆಯ ಭಾಲಾವಳಿ ಎಂಬಲ್ಲಿಂದ ಬಂದ ರಾಜಾಪುರ ಸಾರಸ್ವತರಲ್ಲಿ ಭಾಲಾವಳಿಕಾರರೆಂಬ ಒಳಭೇದವೂ ಇದೆ. ಚಿತ್ರಾಪುರದವರಿಗೆ ಚಿತ್ರಾಪುರ ಮಠ, ಗೌಡಸಾರಸ್ವತರಿಗೆ ಕಾಶೀಮಠ, ರಾಜಾಪುರದವರಿಗೆ ಕವಳೆ(ಗೋವಾ) ಹಾಗೂ ಕುಡಾಲರಿಗೆ ಪರ್ತಗಾಳಿಮಠ(ಗೋವಾ)ಗಳೆಂಬ ಪ್ರತ್ಯೇಕ ಮಠಗಳಿವೆ. ಚಿತ್ರಾಪುರ ಮತ್ತು ಗೌಡಸಾರಸ್ವತರು ಕೊಂಕಣಿ ಹಾಗೂ ರಾಜಾಪುರ ಮತ್ತು ಕುಡಾಲರು ಮರಾಠಿ ಮಿಶ್ರಿತ ಕೊಂಕಣಿ ಮಾತೃಭಾಷೆಯನ್ನಾಡುತ್ತಾರೆ. ಕೃಷಿ, ವ್ಯಾಪಾರ, ಶಿಕ್ಷಣಾದಿ ಕ್ಷೇತ್ರಗಳಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪುರೋಹಿತ ವರ್ಗದವರನ್ನು ಹೊರತುಪಡಿಸಿ ಉಳಿದವರು ಮಿಶ್ರಾಹಾರ ಅಭ್ಯಾಸದವರು. ಆದರೆ ವೈದಿಕಾಚರಣೆ ದಿನಗಳಲ್ಲಿ ಶುದ್ಧ ಸಸ್ಯಾಹಾರ ಬಳಸುತ್ತಾರೆ. ಇವರ ವಿವಾಹ ಸಂಪ್ರದಾಯಗಳಲ್ಲಿ ಸೋದರಮಾವ ಭಾಗವಹಿಸಲೇಬೇಕೆಂಬ ನಿಬಂಧನೆ ಇದೆ

**ಹೊಲೆಯ:** ಇವರು ಗೊರಬೆ ಮಾಡುವುದು, ಕೃಷಿಕೂಲಿಯಂತಹ ವೃತ್ತಿಯನ್ನು ಅವಲಂಬಿಸಿದ್ದವರು. ಅಳಿಯಕಟ್ಟು ಪದ್ಧತಿಯ ಇವರಲ್ಲಿ ಬಲ್ಲಾಳ್‌ದನ್ನ, ಕರ್ಕೊಡೆದನ್ನ, ಕುಮಾರ್‌ದನ್ನ, ಉಮರ್‌ದನ್ನ ಮೊದಲಾದ ಬಳಿಗಳು ಇವೆ. ಇವರ ಮನೆ ಮಾತು ತುಳು. ಹುಟ್ಟು , ಸಾವು ಮೊದಲಾದವುಗಳಲ್ಲಿ ಇತರರ ಹಾಗೆ ನಿರ್ದಿಷ್ಟ ದಿನಗಳವರೆಗೆ ಸೂತಕ(ಅಮೆ) ಆಚರಿಸುತ್ತಾರೆ. ಇವರೊಳಗೆ ಪುರೋಹಿತ ವರ್ಗವಿಲ್ಲ. ವಿವಾಹ ಆಚರಣೆಗಳನ್ನು ಸೋದರಮಾವ ನಡೆಸಿಕೊಡುತ್ತಾನೆ. ಶವವನ್ನು ಸುಡುತ್ತಾರೆ. ಇತರರ ಹಾಗೆ ಮಿಂದುಟ್ಟು ದೀಪಾವಳಿ ಮತ್ತಿತರ ಹಬ್ಬಗಳನ್ನಾಚರಿಸುತ್ತಾರೆ. ವಿವಾಹ, ಹಬ್ಬ–ಹುಣ್ಣಿಮೆಗಳಲ್ಲಿ ದುಡಿ ನುಡಿಸುತ್ತಾ ಪಾಡ್ದನ ಹಾಡುವ ಹವ್ಯಾಸ ಇವರಲ್ಲಿದೆ. ಕುಂಗೋಲ್ ಕಟ್ಟುವುದು (ಕುಣಿತ) ಇವರ ವಿಶೇಷ ಕಲಾ ಸಂಪ್ರದಾಯವಾಗಿದೆ. ಇವರ ಗುಡಿಸಲುಗಳನ್ನು ಕೇಲ್ ಅಥವಾ ಬುಡಾರೊ ಎಂದು ಕರೆಯುವುದುಂಟು.

**ಹೆಗ್ಗಡೆ:** ಹೆಗ್ಗಡೆಗಳು ವಿಜಯನಗರ ಸಾಮ್ರಾಜ್ಯದ ಅರಸರ ದಳಪತಿಗಳಾಗಿದ್ದವರು ಹಾಗೂ ಅವರ ಪ್ರತಿನಿಧಿಗಳಾಗಿ ತುಳುನಾಡಿನಲ್ಲಿ ನೇಮಿಸಲ್ಪಟ್ಟವರು. ಕೃಷಿ ಇವರ ಮುಖ್ಯವೃತ್ತಿಯಾಗಿದ್ದಿತು. ಆಯಾ ಊರಿನ ಮುಡ್ಪುರಿ ಮನೆಯ (ಗುತ್ತಿನ ಮನೆ) ಹೆಗ್ಗಡೆಯವರ ಮುಂದಾಳತ್ವದಲ್ಲಿ ಜಾತಿ ಪಂಚಾಯಿತಿ ಮತ್ತಿತರ ಕಾರ್ಯಕ್ರಮಗಳು ನೆರವೇರುತ್ತಿದ್ದವು. ಬಾಳೆ ಬಳಿ, ಹಡ್ಲುಬಳಿ, ಕಂದ್ಲುಬಳಿ, ತೋಳಾರ ಬಳಿ, ಕೌಡ್ಚಿ ಬಳಿ, ಗಂಗರ್ ಬಳಿ, ದಂಡಿಗಾನ್ ಬಳಿ, ಹೆಗ್ಗಣ ಬಳಿ ಇವರ ಬಳಿಗಳಾಗಿವೆ. ಕನ್ನಡ ಇವರ ಮನೆ ಮಾತು. ಇವರು ಅಳಿಯಕಟ್ಟು ಪದ್ಧತಿಯವರು.

## ಜಾತ್ರೆ

ಇತರೆಡೆಯಂತೆ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಗಳಲ್ಲಿಯೂ ಜಾತ್ರೆಯ ಹೆಸರಿನಲ್ಲಿ ಸ್ಥಳೀಯ ದೈವಗಳ ಆರಾಧನೆ–ಉತ್ಸವಗಳು ವಾರ್ಷಿಕವಾಗಿ ಜರುಗುತ್ತವೆ. ಜಿಲ್ಲೆಯ ಪ್ರಸಿದ್ಧ ಜಾತ್ರೆಗಳ ಪಟ್ಟಿಯಲ್ಲಿ – ಕದ್ರಿ ಹಾಗೂ ಧರ್ಮಸ್ಥಳಗಳ ಮಂಜುನಾಥ, ಮಂಗಳೂರಿನ ಮಂಗಳಾದೇವಿ, ಕುಕ್ಕೆ ಸುಬ್ರಹ್ಮಣ್ಯ, ಪುತ್ತೂರು ಮಹಾಲಿಂಗೇಶ್ವರ, ಕಾಜೂರು ದರ್ಗಾಷರೀಫ್ ಮೊದಲಾದುವನ್ನು ಸೇರಿಸಬಹುದಾಗಿದೆ.

ಜಾತ್ರೆಗಳಲ್ಲಿನ ಆಚರಣೆ–ನೇಮಗಳು ಸಾಮಾನ್ಯವಾಗಿ ವೈದಿಕ ವಿಧಿವಿಧಾನಗಳಂತೆಯೇ ನಡೆದರೂ ಇಲ್ಲಿನ ದೈವಾರಾಧನೆಯ ಆಚರಣೆಗಳು ಸ್ಥಳೀಯ ಸಂಪ್ರದಾಯದಂತೆ ನಡೆಯುತ್ತವೆ. ಇಲ್ಲಿನ ಜಾತ್ರೆಗಳ ಪ್ರಾರಂಭದಲ್ಲಿ ಬಟ್ಟೆಯಿಂದ ಮಾಡಿದ ಬೃಹತ್ತಾದ ನಗ್ನರೂಪಿ ಮನುಷ್ಯ ಆಕಾರದ ಬೊಂಬೆಯನ್ನು ಗರುಡ ಎಂಬ ಹೆಸರಿನಲ್ಲಿ ದೇವಸ್ಥಾನದ ಧ್ವಜಸ್ತಂಭಕ್ಕೆ ಏರಿಸುವ ಹಾಗೂ ಆಯಾ ಊರಿನಲ್ಲಿ ಬೆಳೆದ ಬೆಳೆಯನ್ನು ಧ್ವಜಸ್ತಂಭದ ಬುಡಕ್ಕೆ ಕಟ್ಟುವ ಪದ್ಧತಿಯೂ ಈ ಪ್ರದೇಶದ ಕೆಲ ಜಾತ್ರೆಗಳಲ್ಲಿ ಕಾಣಬರುತ್ತದೆ. ಹಾಗೆಯೇ ಇಲ್ಲಿನ ಜಾತ್ರೆಗಳಲ್ಲಿ ಚೆಂಡಾಟ, ಕೋಳಿ ಅಂಕ, ಕಂಬಳಗಳು ವಿಶೇಷವಾಗಿ ನಡೆಯುವುದು ಉಲ್ಲೇಖನೀಯವಾಗಿದೆ. ಇಂಥ ಉತ್ಸವಗಳ ಕೊನೆಗೆ ಅಂಬೋಡಿ ಮತ್ತು ತೂಟೆದಾರೆಯಂತಹ ವಿಶಿಷ್ಟ ಬಗೆಯ ಕ್ರೀಡೆಗಳೂ ಆಚಾರಣಾತ್ಮಕವಾಗಿ ನಡೆಯುತ್ತವೆ. ಈ ಜಾತ್ರೆ, ಉತ್ಸವಗಳಲ್ಲಿ ಗ್ರಾಮದ ಎಲ್ಲಾ ಜಾತಿಯವರಿಗೂ ನಿರ್ದಿಷ್ಟವಾದ ಹಕ್ಕುಗಳೂ ನಿಗದಿಯಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಕೆಲವೊಂದು ಸಂಪ್ರದಾಯಗಳು ಹಾಗೂ ಪಾರಿಭಾಷಿಕ ಶಬ್ದಗಳು ಪ್ರಾದೇಶಿಕ ಸಂಸ್ಕೃತಿಯ ಪ್ರಭಾವದಿಂದಾಗಿ ಬಯಲುಸೀಮೆಗಿಂತ ಭಿನ್ನವಾಗಿ ಕಂಡುಬರುವುದಕ್ಕೆ ಮಾದರಿಯಾಗಿ ಶಿಶಿಲದ ಜಾತ್ರೆಯ ಕೆಲವು ಮುಖ್ಯ ಆಚರಣಾ ವಿಧಿಗಳನ್ನು ಇಲ್ಲಿ ಗಮನಿಸಬಹುದು: 'ಪರ್ಯೋಳಿ' – ಎಂಬುದು ಹಿಂದೆ ರೂಢಿಯಲ್ಲಿದ್ದ

ಒಂದು ವಿಶೇಷ ಆಚರಣೆ. ಅದರ ಅಂಗವಾಗಿ ಇಬ್ಬರು ಬಿಲ್ಲವ ತರುಣರು ಖಡ್ಗಗಳನ್ನು ಹಿಡಿದು ಪರಸ್ಪರ ಕಾದಾಡಿದಂತೆ ನಟಿಸುತ್ತಿದ್ದರು. ಬಳಿಕ ದೇವಾಲಯದ ಪ್ರಮುಖರು ಅವರನ್ನು ಸಮಾಧಾನ ಮಾಡಿ, ಕಾದಾಟ ನಿಲ್ಲಿಸಿ, ಊರಲ್ಲಿ ಶಾಂತಿ ನೆಲೆಸುವಂತೆ ದೇವರಲ್ಲಿ ಪ್ರಾರ್ಥಿಸುತ್ತಿದ್ದರು. 'ಕೊಡ್ಯಪಾದೆ' ಎಂಬುದು ಇನ್ನೊಂದು ಆಚರಣೆ. ಅದರ ಅಂಗವಾಗಿ ಜಾತ್ರೆಯ ಧ್ವಜಾರೋಹಣದ ಮರುದಿನ ಅಲ್ಲಿನ ಕಪಿಲಾ ನದಿಯಲ್ಲಿನ ಕೊಡ್ಯಪಾದೆ (ಕೊಡ್ಯಕಲ್ಲು) ಎಂಬಲ್ಲಿ ಜಂಗಮದೇವಿ (ವನರಾಣಿ) ದೈವಕ್ಕೆ ಪೂಜೆ ಸಲ್ಲಿಸುವುದು, ಮೀನುಗಳಿಗೆ ನೈವೇದ್ಯ ಅರ್ಪಿಸುವುದು ಮೊದಲಾದ ಆಚರಣೆಗಳನ್ನು ನಡೆಸುತ್ತಾರೆ. ಈ ಆಚರಣೆಗಳನ್ನು ನಡೆಸುವ ದೇವಸ್ಥಾನದ ಪೂಜಾರಿ, ದೈವಗಳ ಪೂಜಾರಿ, ಚಂಡೆ ಬಾರಿಸುವವ ಹಾಗೂ ಪಾತಾಳಿ (ದೀಪ ಹಿಡಿಯುವ) – ಈ ನಾಲ್ಕೂ ಮಂದಿ ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವುದಲ್ಲದೆ ಆಗ ಮಾತನಾಡಬಾರದೆಂಬ ನಿಷೇಧವೂ ಇರುತ್ತದೆ.

ಕುದುರೆಮುಖ ಎಂಬುದು ಶಿಶಿಲದಲ್ಲಿ ಮಾತ್ರ ಕಾಣಬರುವ ಒಂದು ಭೂತದೈವ ಎನ್ನಲಾಗಿದೆ. ಜಾತ್ರೆಯಲ್ಲಿ ಉತ್ಸವ ಹೊರಡುವ ದಿನ ಗುಡಿಯ ಹೊರಗಿನ ಪೌಳಿಯ ಎದಿರು ಈ ದೈವದ ನೇಮ ನಡೆಯುತ್ತದೆ. ಈ ಭೂತ ಕಟ್ಟುವವನು ತೆಂಗಿನ ಗರಿಗಳಿಂದ ಮಾಡಿದ ಕುದುರೆಯ ಮುಖವನ್ನು ಇಟ್ಟುಕೊಂಡು, ಕುದುರೆಯಂತೆ ವೇಷ ಧರಿಸಿ ಕುಣಿಯುತ್ತಾನೆ ಹಾಗೂ ಬೇಯಿಸಿದ ಹುರುಳಿಯನ್ನು ಬಾರಣೆ ಮಾಡುತ್ತಾನೆ. ಇದಾದ ಬಳಿಕ ಜಾತ್ರೆಗೆ ಬೇಕಾದ ಅಕ್ಕಿ, ಬೆಲ್ಲ, ಕಾಯಿ, ತರಕಾರಿ ಮತ್ತಿತರ ದವಸಧಾನ್ಯಗಳನ್ನು ಉಗ್ರಾಣದಲ್ಲಿ ತುಂಬಿ, ಪೂಜೆ ಮಾಡಿ, ಬಳಿಕ, ಮೊಳಕೆ ಬರಿಸುವುದಕ್ಕಾಗಿ ಸ್ವಲ್ಪ ಧಾನ್ಯಗಳನ್ನು ತೆಗೆದಿರಿಸುತ್ತಾರೆ. ಹೀಗೆ ಆಚರಣಾತ್ಮಕವಾಗಿ ಮೊಳಕೆ ಬರಿಸುವ ನಡವಳಿಕೆಯೇ 'ಅಂಕುರಾರ್ಪಣ' – ಎಂಬ ವಿಧಿಕ್ರಿಯೆ. ಜಾತ್ರೆಯ ಕೊನೆಯಲ್ಲಿ ಈ ಮೊಳಕೆ ಬಂದ ಬೀಜಗಳನ್ನು ಬಿತ್ತುವುದಕ್ಕಾಗಿ ಗ್ರಾಮಸ್ಥರಿಗೆ ನೀಡಲಾಗುತ್ತದೆ. ಆ ಮೂಲಕ ಆ ವರ್ಷದ ಎಲ್ಲಾ ಬೆಳೆಗಳು ಸಮೃದ್ಧವಾಗಿ ಆಗಲಿ ಎಂಬ ಆಶಯ ಇದರಲ್ಲಿ ಅಡಕವಾದಂತಿದೆ. ಬೋಳು ವಿಧಿ – ಎಂಬುದು ಶಿಶಿಲದ ಮತ್ತೊಂದು ಗಮನಾರ್ಹ ಆಚರಣೆ. ಕೀಲಯ ಮತ್ತು ಕಾಪ ಎಂಬ ಮೇರ ಜಾತಿಯ ಇಬ್ಬರು ಗೌಡನೊಬ್ಬನ ನೇತೃತ್ವದಲ್ಲಿ ಜಾತ್ರೆಗೆ ಮುನ್ನಿನ ಒಂಬತ್ತು ರಾತ್ರಿಗಳಲ್ಲಿಯೂ ನಿರ್ಜನ ಪ್ರದೇಶವೊಂದರಲ್ಲಿ ಈ ಆಚರಣೆ ನಡೆಸಬೇಕಾಗುತ್ತದೆ. ಅದರ ಪ್ರಕಾರ, ದೇವರ ತೀರ್ಥ ಪ್ರಸಾದ ಸ್ವೀಕರಿಸಿ, ದೇವಲದಲ್ಲಿನ ಒಂಬತ್ತು ಕಂಚಿನ ಮುಖವಾಡಗಳಲ್ಲಿ ಆಯಾ ದಿನಕ್ಕೆ ನಿಗದಿಯಾದ ಒಂದನ್ನು ಪಡೆದು 'ಕೂ' ಎಂದು ಕೂಗುತ್ತಾ ಈ ಮೂವರೂ 'ಬೋಳು ಕಣ'ಕ್ಕೆ ಓಡುತ್ತಾರೆ. ಅಲ್ಲಿ ಗೌಡನ ಮಾರ್ಗದರ್ಶನದಲ್ಲಿ ಕಾಪನು, ಕೀಲಯನ ಹಣೆಗೆ ಬರೆ ಹಾಕಿ ಇದು ಸ್ವಾಮಿಗೆ ಅರ್ಪಿತವಾಗಲಿ ಎಂದು ರಕ್ತ ಚಿಮ್ಮಿಸುತ್ತಾನೆ (ತರುವಾಯ ಆ ಗಾಯಕ್ಕೆ ದೇವರ ಗಂಧ ಪ್ರಸಾದ ಲೇಪಿಸುತ್ತಾರೆ). ಮರುದಿನ ಈ ಕೀಲಯ, ಕಾಪರು ಕೆಂಪು ವಸ್ತ್ರ ತೊಟ್ಟು, ಕೈಲಿ ಖಡ್ಗ ಹಿಡಿದು, ತೆಂಬರೆ ವಾದ್ಯ ಬಡಿಯುತ್ತಾ, ಬಿಳಿ ವಸ್ತ್ರ ಧರಿಸಿದ ಗೌಡನೊಂದಿಗೆ ಮನೆ ಮನೆಗೆ ಹೋಗುತ್ತಾರೆ. ಇವರಲ್ಲಿ ವಿಶೇಷ ಶಕ್ತಿ ಇದೆ ಎಂದು ನಂಬಿದ ಗೃಹಸ್ಥರು ಅಕ್ಕಿ, ಕಾಯಿ, ಮೆಣಸು, ಹುಣಸೆಹುಳಿಯೊಂದಿಗೆ ತಾಂಬೂಲವನ್ನು ಇತ್ತು ಗೌರವಿಸುತ್ತಾರೆ (ವಿವರಕ್ಕೆ: ಕೊರೊಂತಾಯನೋ – ಸ್ಮರಣ ಸಂಚಿಕೆ, ೨೦೦೦).

ಪೊಳಲಿಯ ರಾಜರಾಜೇಶ್ವರಿಯ ಸುಮಾರು ಒಂಬತ್ತು ಅಡಿಗಿಂತಲೂ ದೊಡ್ಡದಾದ ಮೃಣ್ಮಯ ಮೂರ್ತಿಯು ತನ್ನ ಭವ್ಯತೆಗೆ ಹೆಸರಾಗಿರುವಂತೆ, ಒಂದು ತಿಂಗಳ ಕಾಲ ನಿರಂತರವಾಗಿ ನಡೆಯುವ ಇಲ್ಲಿನ ಜಾತ್ರೆಯ ಕೆಲವು ವಿಶೇಷ ಆಚರಣೆ □ ಉತ್ಸವಗಳೂ ಹೆಸರಾಗಿವೆ. ಮೀನ ಮಾಸದ ಸಂಕ್ರಮಣದಂದು 'ಕೊಡಿ' (ಧ್ವಜ) ಏರಿಸುವುದರೊಂದಿಗೆ ಪ್ರಾರಂಭವಾಗುವ ಈ ಜಾತ್ರೆಯು ಎಂದು ಕೊನೆಯಾಗುತ್ತದೆ ಎಂಬುದು ಆ ದೇವಸ್ಥಾನದವರಿಗೂ ಆಗ ಗೊತ್ತಿರುವುದಿಲ್ಲ. ಅದು ನಿರ್ಣಯವಾಗುವುದು ಪುತ್ತಿಗೆಯ ಜೋಯಿಸರ ಮನೆಯಲ್ಲಿನ ಪ್ರಶ್ನೆಯ ಮಣೆಯಲ್ಲಿ – ಮಾರನೆಯ ದಿನ. ಜಾತ್ರೆಯ ಕೊನೆಯ ಆರಾಟದ ದಿನ ಪ್ರತೀ ವರ್ಷವೂ ಬೇರೆಬೇರೆಯಾಗಿರುತ್ತದೆ. ಇದೂ ಇಲ್ಲಿನ ವಿಶೇಷ ನಡವಳಿಕೆಗಳಲ್ಲಿ ಒಂದಾಗಿದೆ. ಹಾಗೆಯೇ, ಇಲ್ಲಿನ ಅಧಿದೇವತೆ ರಾಜೇಶ್ವರಿಯಾದರೂ ನಿತ್ಯಬಲಿ, ಉತ್ಸವ, ರಥಾರೋಹಣ ಇತ್ಯಾದಿಗಳೆಲ್ಲಾ ನಡೆಯುವುದು ಅಲ್ಲಿನ ಸುಬ್ರಹ್ಮಣ್ಯ ದೈವಕ್ಕೆ. ಇದೂ ಈ ಸ್ಥಳದ ಮತ್ತೊಂದು ವಿಶೇಷ. ಉತ್ಸವದ ವಿಧಿಗಳಲ್ಲಿ ಒಂದಾಗಿ ಚೆಂಡಾಟ ಆಡುವುದು ತುಳುನಾಡಿನ ದೇವಾಲಯ, ಭೂತಾಲಯಗಳಲ್ಲಿ ಸಾಮಾನ್ಯ. ಆದರೆ, ಪೊಳಲಿಯಲ್ಲಿ ಐದು ದಿನಗಳ ಕಾಲ ನಡೆಯುವ ಚೆಂಡಾಟದ ಉತ್ಸವ ನೋಡಲು ಸೇರುವ ಅಪಾರ ಜನಸಂದಣಿ ಹಾಗೂ ಆ ಚೆಂಡಿನ ಗಾತ್ರ ವಿಶೇಷದಿಂದಾಗಿ ಈ ಉತ್ಸವಕ್ಕೆ 'ಪೊಳಲಿ ಚೆಂಡು' ಎಂಬ ಜನಪ್ರಿಯ ಹೆಸರೇ ಬಂದಿದೆ (ವಿವರಕ್ಕೆ: ಸಂಚಯ, ಪು. ೧೨೫).

ಜಿಲ್ಲೆಯ ಹಲವೆಡೆ ನಡೆಯುವ ಉರುಸ್‌ಗಳಿಗೂ ಅಪಾರ ಸಂಖ್ಯೆಯ ಭಕ್ತರು ಸೇರುತ್ತಾರೆ. ಕಾಜೂರು ದರ್ಗಾ ಶರೀಫ್, ಉಳ್ಳಾಲದ ದರ್ಗಾಗಳಿಗೆ ಹಿಂದೂಗಳೂ ಹೋಗುತ್ತಾರೆ. ಧರ್ಮಸ್ಥಳದಲ್ಲಿ ನಡೆಯುವ ಲಕ್ಷದೀಪೋತ್ಸವಕ್ಕೆ ಲಕ್ಷಾಂತರ ಮಂದಿ ಸೇರುತ್ತಾರೆ. ಧರ್ಮಸ್ಥಳದಲ್ಲಿ

೧೨ ವರ್ಷಗಳಿಗೊಮ್ಮೆ ನಡೆಯುವ ಮಹಾನಡಾವಳಿ ಇತರೆಲ್ಲಾ ಧಾರ್ಮಿಕ ಕಾರ್ಯಗಳಿಗಿಂತ ವಿಶಿಷ್ಟವಾದದ್ದಾಗಿದೆ. ೧೮೮೬, ೧೯೧೯ ಮತ್ತು ೧೯೫೧ರಲ್ಲಿ ನಡೆದಿದ್ದ ದಾಖಲೆ ಇರುವ ಈ ಆಚರಣೆ ೫೪ ವರ್ಷಗಳ ಬಳಿಕ ೨೦೦೫ರಲ್ಲಿ ಮತ್ತೆ ವಿಜೃಂಭಣೆಯಿಂದ ನಡೆದಿದೆ. ಲೋವೆಕಂಬ ಮುಹೂರ್ತ, ಗೊನೆ ಕಡಿಯುವುದು ಮೊದಲಾದ ವಿಧಿಗಳು ಜಾತ್ರೆಗಳಲ್ಲಿನ ಸಾಮಾನ್ಯ ವಿಧಿಗಳ ಮಾದರಿಯಾದರೂ, ಈ ಆಚರಣೆಯ ಬಹು ಮುಖ್ಯ ಭಾಗವಾದ 'ಚಪ್ಪರ ಸೂರೆ' ಎಂಬುದು ಬಹುಶಃ ಬೇರೆಲ್ಲೂ ಕಾಣಬರದ ಅತಿ ವಿಶಿಷ್ಟ ನಡಾವಳಿಯಾಗಿದೆ. ಸುಬ್ರಹ್ಮಣ್ಯದ ಜಾತ್ರೆಯಲ್ಲಿ ಬೃಹತ್ ಪ್ರಮಾಣದ ರಾಸುಗಳ ವಹಿವಾಟು ನಡೆಯುತ್ತದೆ. ಹೀಗೆ ಸ್ಥಳೀಯ ವಿಶೇಷಗಳನ್ನು ಒಳಗೊಂಡಿರುವ ಜಿಲ್ಲೆಯ ಜಾತ್ರೆಗಳು, ಉರುಸ್‌ಗಳು, ನೇಮಗಳು ಮೊದಲಾದುವು ಸಾಮಾಜಿಕ, ಧಾರ್ಮಿಕ ಮುಂತಾದ ವಿವಿಧ ನೆಲೆಗಳಿಂದ ತುಳುವ ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಲು ನೆರವಾಗುತ್ತವೆ. ಜಿಲ್ಲೆಯಲ್ಲಿ ನಡೆಯುವ ಕೆಲವು ಪ್ರಮುಖ ಜಾತ್ರೆಗಳು, ನೇಮಗಳು ಹಾಗೂ ಉರುಸ್‌ಗಳ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ:

| ಜಾತ್ರೆ ನಡೆಯುವ ದೇವರ/ ಸಂತರ ಹೆಸರು | ಜಾತ್ರೆ/ಉರುಸ್ ನಡೆಯುವ ಸ್ಥಳ | ಯಾವ ತಿಂಗಳು | ಅವಧಿ | ಸೇರುವ ಅಂದಾಜು ಜನಸಂಖ್ಯೆ |
|---|---|---|---|---|
| | | **ಪುತ್ತೂರು ತಾಲೂಕು** | | |
| ಮದಗ ಜನಾರ್ದನ | ಕುಂಜಾರು, ಪಡ್ನೂರು | ಜನವರಿ | ೨ ದಿನ | ೮,೦೦೦ |
| ಸಹಸ್ರಲಿಂಗೇಶ್ವರ | ಉಪ್ಪಿನಂಗಡಿ | ಫೆಬ್ರವರಿ ಮಾರ್ಚ್ | ೩ ದಿನ | ೧೦,೦೦೦ |
| ಮಹಾಕಾಳೀ | ಉಪ್ಪಿನಂಗಡಿ | ಏಪ್ರಿಲ್ | ೧ ದಿನ | ೫,೦೦೦ |
| ಮಹಾಲಿಂಗೇಶ್ವರ | ಪುತ್ತೂರು ಕಸಬಾ | ಏಪ್ರಿಲ್ | ೯ ದಿನ | ೧ ಲಕ್ಷ |
| ದುರ್ಗಾಪರಮೇಶ್ವರಿ,ಮಹಿಷಮರ್ದಿನಿ | ಕೆಯ್ಯೂರು | ಮಾರ್ಚ್ | ೩ ದಿನ | ೫,೦೦೦ |
| | | **ಬೆಳ್ತಂಗಡಿ ತಾಲೂಕು** | | |
| ಉಲ್ಲಾಯ ಉಲ್ಲಾಳ್ತಿ, | ಕುತ್ತೊಟ್ಟು, ಬಂಗಾಡಿ | ಮಾರ್ಚ್ | ೪ ದಿನ | ೪,೦೦೦ |
| ಶಾಂತಿನಾಥೇಶ್ವರ | ಬಂಗಾಡಿ ಇಂದಬೆಟ್ಟು | ಜನವರಿ | ೧ ದಿನ | ೨,೦೦೦ |
| ದರ್ಗಾ ಶರೀಫ್ ಕಾಜೂರು | ಮಿತ್ತಬಾಗಿಲು | ಏಪ್ರಿಲ್ | ೭ ದಿನ | ೧,೦೦,೦೦೦ |
| ಮಹಾಲಿಂಗೇಶ್ವರ | ವೇಣೂರು | ಏಪ್ರಿಲ್ | ೯ ದಿನ | ೫,೦೦೦ |
| ಮಂಜುನಾಥೇಶ್ವರ | ಧರ್ಮಸ್ಥಳ | ಮಾರ್ಚ್ | ೩ ದಿನ | ೫೦,೦೦೦ |
| | ಲಕ್ಷದೀಪೋತ್ಸವ | ಡಿಸೆಂಬರ್ | ೧ ವಾರ | ೧,೦೦,೦೦೦ |
| ಅನಂತೇಶ್ವರ | ಬಳ್ಳಮಂಜ | ಡಿಸೆಂಬರ್ | ೨ ದಿನ | ೫,೦೦೦ |
| ಲೋಕನಾಥೇಶ್ವರ | ನಿಡಿಗಲ್ ಕನ್ಯಾಡಿ | ಏಪ್ರಿಲ್ | ೫ ದಿನ | ೫,೦೦೦ |
| ಕೊಲ್ಲಿ ದುರ್ಗಾಪರಮೇಶ್ವರಿ | ಮಿತ್ತಬಾಗಿಲು | ಮಾರ್ಚ್: ಏಪ್ರಿಲ್ | ೮ ದಿನ | ೮,೦೦೦ |
| ಉಳ್ಳಾಕುಲು ಉಳ್ಳಾಳ್ತಿ | ಮಿತ್ತಬೈಲು ಸಜೀಪ | ಮಾರ್ಚ | ೫ ದಿನ | ೨೫,೦೦೦ |
| | | **ಸುಳ್ಯ ತಾಲೂಕು** | | |
| ಕೋಟಿ ಚೆನ್ನಯ ಬೈದರು | ಎಣ್ಮೂರು | ಮಾರ್ಚ | ೩ ದಿನ | ೧೦,೦೦೦ |
| ಕುಕ್ಕೆ ಸುಬ್ರಹ್ಮಣ್ಯ | ಸುಬ್ರಹ್ಮಣ್ಯ | ನವೆಂಬರ್ | ೯ ದಿನ | ೧,೦೦,೦೦೦ |
| ಚೆನ್ನಕೇಶವ | ಸುಳ್ಯ, ಕಸಬಾ | ಜನವರಿ | ೧೦ ದಿನ | ೨೦,೦೦೦ |
| ಮಹಿಷಮರ್ದಿನಿ | ಅಜ್ಜಾವರ | ಏಪ್ರಿಲ್ | ೫ ದಿನ | ೪,೫೦೦ |
| ಮಲ್ಲಿಕಾರ್ಜುನ | ಪೆರಾಜೆ | ಮಾರ್ಚ್–ಏಪ್ರಿಲ್ | ೨೦ ದಿನ | ೧೫,೦೦೦ |
| | ತೊಡಿಕಾನ | ಮೇ | ೧೦ ದಿನ | ೧೦,೦೦೦ |
| ಪರಿವಾರ ಪಂಚಲಿಂಗೇಶ್ವರ | ಪಂಜ | ಫೆಬ್ರವರಿ | ೭ ದಿನ | ೧೦,೦೦೦ |

ಮುಂದುವರೆದಿದೆ.....

| ಜಾತ್ರೆ ನಡೆಯುವ ದೇವರ/ ಸಂತರ ಹೆಸರು | ಜಾತ್ರೆ/ಉರುಸ್ ನಡೆಯುವ ಸ್ಥಳ | ಯಾವ ತಿಂಗಳು | ಅವಧಿ | ಸೇರುವ ಅಂದಾಜು ಜನಸಂಖ್ಯೆ |
|---|---|---|---|---|
| | | **ಮಂಗಳೂರು ತಾಲೂಕು** | | |
| ಮಂಗಳಾದೇವಿ | ಮಂಗಳೂರು ತೋಟ | ಅಕ್ಟೋಬರ್ | ೯ ದಿನ | ೨೫,೦೦೦ |
| ಮಾರಿಯಮ್ಮ | ಮಾರಿಗುಡಿ, ಬೋಳಾರ | ಅಕ್ಟೋಬರ್ | ೮ ದಿನ | ೧೦,೦೦೦ |
| ಸೋಮನಾಥ | ಸೋಮೇಶ್ವರ, ಕೋಟೆಕಾರ್ | ಮಾರ್ಚ್–ಏಪ್ರಿಲ್ | ೫ ದಿನ | ೬,೦೦೦ |
| ಕೊಂಡಾಣ ಪಿಲಿಚಾಮುಂಡಿ | ಕೋಟೆಕಾರು | ಮೇ | ೩ ದಿನ | ೨೦,೦೦೦ |
| ಬ್ರಹ್ಮ ಬೈದರ್ಕಳ ಗರಡಿ | ಕಂಕನಾಡಿ | ಡಿಸೆಂಬರ್ ಅಥವಾ ಜನವರಿ | ೪ ದಿನ | ೬,೦೦೦ |
| ಕದ್ರಿ ದೇವಸ್ಥಾನ | ಕದ್ರಿ | ಡಿಸೆಂಬರ್ | ೧ ದಿನ | ೨೫,೦೦೦ |
| ಮಾರಿಯಮ್ಮ | ಬೋಳೂರು | ಫೆಬ್ರವರಿ | ನಾಲ್ಕೈದು | ೪೦,೦೦೦ |
| ಸೋಮನಾಥ | ಸೋಮೇಶ್ವರ, ಕೋಟೆಕಾರ್ | ಮಾರ್ಚ್–ಏಪ್ರಿಲ್ | ೫ ದಿನ | ೬,೦೦೦ |
| ಜುಮ್ಮಾಮಸೀದಿ ವೆಳ್ಳಿಯಬ್ಬ | ಮಂಜನಾಡಿ | ಏಪ್ರಿಲ್ | | ೧೦,೦೦೦ |
| ಮದದಿ ಶರೀಫ್ ದರ್ಗಾ | ಉಳ್ಳಾಲ | ಮಾರ್ಚ್ | ೩೦ ದಿನ | ೨,೦೦,೦೦೦ |
| ಅನಂತಪದ್ಮನಾಭ | ಕುಡುಪು | ಆಗಸ್ಟ್ | ೧ ದಿನ | ೫,೦೦೦ |
| ಬಲವಾಂಡಿ | ಪಡುಪೆರಾರ್ | ಫೆಬ್ರವರಿ | ೩ ದಿನ | ೫,೦೦೦ |
| ಪಡುಮಂತಾಯ | ಶಿಬರೂರು ದೇಲಂತಬೆಟ್ಟು | ಡಿಸೆಂಬರ್ | ೭ | ೨೦,೦೦೦ |
| ನಂದನೇಶ್ವರ | ಪಣಂಬೂರು | ಮಾರ್ಚ್ | ೩ ದಿನ | ೫,೦೦೦ |
| ದುರ್ಗಾಪರಮೇಶ್ವರಿ | ಬಪ್ಪನಾಡು | ಮಾರ್ಚ್ | ೭ ದಿನ | ೩೫,೦೦೦ |
| ಅಬ್ಬಗ ದಾರಗ ಮಹಾಲಿಂಗೇಶ್ವರ | ಕವತ್ತಾರು | ಏಪ್ರಿಲ್ | ೫ ದಿನ | ೫೦,೦೦೦ |
| ದುರ್ಗಾಪರಮೇಶ್ವರಿ ಕಟೀಲು | ಕೊಂಡೆಮೂಲ | ಏಪ್ರಿಲ್ | ೮ | ೭೦,೦೦೦ |
| | | **ಬಂಟ್ವಾಳ ತಾಲೂಕು** | | |
| ಕಾರಿಂಜೇಶ್ವರ ಪಾರ್ವತಿ ಪರಮೇಶ್ವರ | ಕಾವಳಮೂಡೂರು | ಮಹಾಶಿವರಾತ್ರಿ | ೫ | ೫೦,೦೦೦ |
| ಗರುಡ ಮಹಾಕಾಳಿ | ಅರಳ | ಫೆಬ್ರವರಿ | ೧೯ | |
| ವೆಂಕಟ್ರಮಣ | ಬಂಟ್ವಾಳ ಕಸ್ಬಾ | ಮಾರ್ಚ್ | | |
| ಮಹಾಲಿಂಗೇಶ್ವರ | ಬಂಟ್ವಾಳ ಕಸ್ಬಾ | ಏಪ್ರಿಲ್ | | |
| ಲಕ್ಷ್ಮೀ ನರಸಿಂಹ | ಕಡೇಶ್ವಾಲ್ಯ | ಏಪ್ರಿಲ್ | | ೨೫,೦೦೦ |
| ಪನೋಲಿ ಬೈಲು ಕಲ್ಲುರ್ಟಿ | ಸಜೀಪ ಮೂಡ | ನವೆಂಬರ್ | | ೧೦,೦೦೦ |
| ಉಳ್ಳಾಕುಲು | ಸಜೀಪ ನಡು | ಏಪ್ರಿಲ್ | | ೧೦,೦೦೦ |
| ರಾಜರಾಜೇಶ್ವರಿ | ಕರಿಯಂಗಳ (ಪೊಳಲಿ) | ಏಪ್ರಿಲ್ | | ೧,೦೦,೦೦೦ |
| ರಕ್ತೇಶ್ವರಿ | ಬಿ.ಮೂಡ | ಮಾರ್ಚ್ | | |
| ತೋಡಕುಕ್ಕಿನಾರ್ | ಬಾಳೆಪುಣಿ | ಏಪ್ರಿಲ್ | | |
| ಪಂಚಲಿಂಗೇಶ್ವರ | ವಿಟ್ಲ | ಜನವರಿ | ೧೪ ಮತ್ತು ೨೧ | ೩೦,೦೦೦ |
| ಅನಂತೇಶ್ವರ | ವಿಟ್ಲ | ನವೆಂಬರ್ | | ೧೫,೦೦೦ |